ಜನಶಕ್ತಿ



ಕನ್ನಡ ವಾರಪತ್ರಿಕೆ


Blog janashakthi.wordpress.com e-mail : js_weekly@yahoo.com

ಸಂಪುಟ 7 ಸಂಚಿಕೆ 47

ನವೆಂಬರ್ 24, 2013 ಪುಟ 16 ರೂ. 10/-

ನಮಗೆಂತಹ ಚುನಾವಣಾ ಸುಧಾರಣೆಗಳು ಬೇಕು ?





ಸುಳ್ಳುಗಳ ಸರಮಾಲೆ!!!

ಏನು ಹೇಳಿದರೇನು ನೆತ್ತರ ಕಲೆ ಹೋಗದು



'ಮೂಢನಂಬಿಕೆ –ಜನರು ಪ್ರಶ್ನೆ ಮಾಡದಿರುವಂತೆ ಕಲ್ಪಿಸಿಕೊಂಡಿರುವ ಸಾಧನ'–

ಡಾ|| ಜಿ. ರಾಮಕೃಷ್ಣ



ಭೂಮಿ ಮತ್ತು ಬದುಕಿಗಾಗಿ ರಾಜ್ಯವ್ಯಾಪಿ ರೈತ ಚಳುವಳಿ

ಚೋಮನ ದುಡಿ ಮತ್ತೆ ಬಲವಾಗಿ ಮೊಳಗಬೇಕು

ಚೋಮನ ದುಡಿ

ಜಿ. ಎನ್. ನಾಗರಾಜ್ ಭಾಗ –2

"ಹಿಡಿದ ದುಡಿ, ಎತ್ತಿದ ಕೈ, ತುಂಬಿದ ಆವೇಶ ಎಲ್ಲವೂ ಇದ್ದಕ್ಕಿದ್ದಂತೆಯೇ ಇವೆ. ಆದರೆ ಚೋಮನಿಲ್ಲ"

'ಡಮ ಢಮ್ಮ ಢಮ ಡಕ್ಕ, ಡಮ ಢಮ್ಮ ಡಕ ಢಕ್ಕ' ಚೋಮನ ದುಡಿಯ ಈ ಮೊಳಗು ಕನ್ನಡಿಗರಿಗೆ ಪರಿಚಿತವಾದದ್ದು, 1931ರಲ್ಲಿ ಸಾಹಿತ್ಯ ಲೋಕದಲ್ಲಿ ಮೊಳಗಿದ ಈ ದುಡಿ ಅಂದಿಗೆ ತೀರ ಹೊಸತೇ ಆಗಿತ್ತು. ಇಡೀ ಸಾಹಿತ್ಯ ಲೋಕವನ್ನು ಪ್ರಭಾವಿಸಿತು. ಅದೇ ಸಮಯದಲ್ಲಿ ಕುವೆಂಪುರವರ ಪಾಂಚಜನ್ಯ ಮೊಳಗಿತು. ಅದೇ ಆಸುಪಾಸಿನಲ್ಲೇ ಬೇಂದ್ರೆಯವರ ಕುರುಡು ಕಾಂಚಾಣ, ತುತ್ತಿನ ಚೀಲ ಹುಟ್ಟಿದ್ದು. ಮುಂದೆ ಚೋಮನ ದುಡಿ ಸಿನೆಮಾ ಆಗಿ ಹೊಸ ಅಲೆಯನ್ನೇ ಎಬ್ಬಿಸಿತು. 70–80 ರ ದಶಕದಲ್ಲಿ ದುಡಿಯ ಈ ಮೊಳಗು ಮತ್ತಷ್ಟು ಅಬ್ಬರದಿಂದ ಭೂ ಚಳುವಳಿಯಾಗಿ, ದಲಿತ ಚಳುವಳಿಯಾಗಿ ಇಡೀ ಕರ್ನಾಟಕವನ್ನೇ ವ್ಯಾಪಿಸಿತು. ಅಂದು ಭೂಮಿಯಲ್ಲಿ ತಮ್ಮ ಪಾಲನ್ನೂ ಕೇಳುತ್ತಾ ಆರಂಭವಾದ ಈ ಧ್ವನಿ ಮುಂದಕ್ಕೆ ಆಡಳಿತದಲ್ಲಿ, ರಾಜಕೀಯದಲ್ಲಿ ಪಾಲನ್ನು ಕೇಳುತ್ತಾ, ಸಾಹಿತ್ಯ, ಸಾಂಸ್ಕೃತಿಕ ಲೋಕಗಳನ್ನೂ ಬೆಚ್ಚಿ ಬೀಳಿಸುವಂತೆ ವ್ಯಾಪಿಸುತ್ತಾ ನಡೆದಿದೆ. ಅದೇ ಸಮಯದಲ್ಲಿ ಈ ಕಹಳೆಯ ಧ್ವನಿಯನ್ನು ಅಡಗಿಸುವ ಹುನ್ನಾರಗಳೂ ಅದಕ್ಕಿಂತ ಪ್ರಬಲವಾಗಿ ನಡೆದಿವೆ. ಗುರುತರವಾದ ಸವಾಲುಗಳು ಎದುರಾಗಿವೆ. ಅದನ್ನೆಲ್ಲಾ ಎದುರಿಸಿ ಚೋಮನ ದುಡಿ

ಮತ್ತೆ ಮೊಳಗಬೇಕಾಗಿದೆ. ಕಾಲ ಕಾಲಕ್ಕೆ ಬದಲಾಗುತ್ತಿರುವ ಸನ್ನಿವೇಶವನ್ನು ಅನುಸರಿಸಿ ಹೊಸ ಹೊಸ ವಿಷಯಗಳ ಹೂರಣದೊಂದಿಗೆ ದುಡಿ ಅನುರಣಿಸಬೇಕಾಗಿದೆ. ಆ ದಿಕ್ಕಿನಲ್ಲಿ ಕೆಲವು ಚಿಂತನೆಗಳನ್ನು ಹಂಚಿಕೊಳ್ಳುವುದು ಈ ಕಾಲಂನ ಉದ್ದೇಶ

ಕೃಷಿ ಕಾಲೇಜಿನ ಬಿ.ಎಸ್ಸಿ. ಕೃಷಿ ಪದವಿಯ 1967 ರ ಆಯ್ಕೆ ಪಟ್ಟಿ ಹಚ್ಚಿದ್ದ ಬೋರ್ಡ್ ಮುಂದೆ ನಿಂತಿದ್ದೆ. ಪಟ್ಟಿಯಲ್ಲಿ ಮೊತ್ತ ಮೊದಲನೆಯದಾಗಿ ನನ್ನ ಹೆಸರು ಕಂಡಿತು. ಖುಷಿಯಾಯಿತು. ಕೃಷಿ ಪದವಿಯನ್ನೇ ಅಭ್ಯಾಸ ಮಾಡಬೇಕೆಂದಿದ್ದೆ, ಆದ್ದರಿಂದ ಖುಷಿ ಎಂದೇನೂ ಅಲ್ಲ. ನಮ್ಮ ತಂದೆಗೆ ಮಗ ಇಂಜನಿಯರಿಂಗ್ ಸೇರಬೇಕೆಂದು ಇಚ್ಛೆ. ನನಗೆ ಕನ್ನಡ ಸಾಹಿತ್ಯದ ಹುಚ್ಚು ಆಗಲೇ ಹಿಡಿದಿತ್ತು. ಅದನ್ನೇ ಆರಿಸಿಕೊಂಡು ಬಿ.ಎ. ಮಾಡುವ ಬಲವಾದ ಆಸಕ್ತಿ. ಆದರೆ ಅಪ್ಪನ ಎದುರು ಬಾಯಿ ತೆಗೆಯುವಂತಿರಲಿಲ್ಲ. ಜೊತೆಗೆ ಪಿಯುಸಿಯಲ್ಲಿ ಪಿಸಿಎಂ (ಆಗ ಪಿಯುಸಿಯಲ್ಲಿ ಈಗಿನಂತೆ ನಾಲ್ಕು ವಿಷಯಗಳಿರಲಿಲ್ಲ. ಹೀಗಾಗಿ ವೈದ್ಯ ಪದವಿಯ ಅವಕಾಶ ಪಿಸಿಎಂ ಓದಿದವರಿಗೆ ಇರುತ್ತಿರಲಿಲ್ಲ.) ವಿಷಯಗಳನ್ನು ಆರಿಸಿಕೊಂಡು ಒಳ್ಳೆಯ ಅಂಕಗಳನ್ನೂ ಗಳಿಸಿದವನು ಯಾವನಾದರೂ ಕನ್ನಡ ಬಿ.ಎ. ಸೇರುತ್ತಾನೆಂದರೆ ಅವನು ಶತ ದಡ್ಡನಲ್ಲದಿದ್ದರೂ ಮೂರ್ಖನಂತೂ ಹೌದು ಎಂದು ಸಮಾಜ ತೀರ್ಪು ಕೊಡುವ ವಾತಾವರಣ.

ಕನ್ನಡ ಸಾಹಿತ್ಯ ಎಂದು ಬಾಯಿ ತೆಗೆಯದಂತಾಯಿತು

ತಮಾಷೆಯ ಸಂಗತಿಯೆಂದರೆ ಕನ್ನಡದಲ್ಲಿ ನಮಗೆ ಇದ್ದ ಪಠ್ಯಗಳಲ್ಲೊಂದಾದ ಭಾಸನ ಪ್ರತಿಮಾ ನಾಟಕದ ಬೆನ್ನು ಹತ್ತಿ ನಾನು ಭಾಸ ನಾಟಕ ಚಕ್ರವೆಂದು ಕರೆಯಲ್ಪಡುವ ಎಲ್ಲ ನಾಟಕಗಳ ಕನ್ನಡ ಅನುವಾದವನ್ನೂ ಓದಿದ್ದೆ. ಮಾತ್ರವಲ್ಲ ಭಾಸನ ಬಗ್ಗೆ ಇದ್ದ ಎ.ಆರ್. ಕೃಷ್ಣಶಾಸ್ತ್ರಿಗಳ, ಸಿ.ಕೆ ವೆಂಕಟರಾಮಯ್ಯನವರ ದೊಡ್ಡ ಗಾತ್ರದ ವಿಮರ್ಶಾ ಗ್ರಂಥಗಳು, ಕನ್ನಡದಲ್ಲಿ ದೊರೆಯುವ ಎಲ್ಲ ರಾಮಾಯಣ ಮೂಲದ ಕಾವ್ಯಗಳು– ಕುವೆಂಪುರವರ ರಾಮಾಯಣ ದರ್ಶನವೂ ಸೇರಿದಂತೆ, ತಮಿಳಿನ ಕಂಬ ರಾಮಾಯಣ, ಹಿಂದಿಯ ತುಳಸಿ ರಾಮಾಯಣ, ಭರ್ತೃಹರಿಯ ಉತ್ತರ ರಾಮ ಚರಿತ್ರೆ ಎಂಬ ನಾಟಕ, ವಾಲ್ಮೀಕಿಯ ಮೂಲ ರಾಮಾಯಣ ಇವುಗಳ ಕನ್ನಡ ಅನುವಾದಗಳು ಇವನ್ನೆಲ್ಲಾ ಹುಡುಕಿ ಓದಿದ್ದೆ. ವಿಜ್ಞಾನದ ವಿಷಯಗಳನ್ನು ಪಠ್ಯಕ್ಕೆ ಸೀಮಿತವಾಗಿ ಮಾತ್ರ ಓದಿದ್ದೆ. ಅಂದಿನ, ಯಾಕೆ ಇಂದಿಗೂ ವಿಚಿತ್ರವಾಗಿ ತೋರುವ ಇಂತಹ ಓದಿನ ನನಗೆ, ವಿಜ್ಞಾನದ ವಿಷಯಗಳ ಪರೀಕ್ಷೆ ಇರುವ ಹಿಂದಿನ ರಾತ್ರಿಗಳಲ್ಲಿ ತರಾಸುರವರ ಚಿತ್ರದುರ್ಗ ಕಾದಂಬರಿ ಮಾಲೆಯ ಕಂಬನಿಯ ಕುಯಿಲು, ರಕ್ತರಾತ್ರಿ, ತಿರುಗು ಬಾಣ ಓದುತ್ತಾ 'ಮಸೆ, ಮಸೆ ಕೊಡಲಿ ಮಸೆ' ಎಂಬಂತಹ ಸಾಹಿತ್ಯಿಕ ಉದ್ವೇಗದಲ್ಲಿ

ಮೆರಿಟ್, ದಕ್ಷತೆಯನ್ನು ಅವಗಣಿಸುವ ಶಿಕ್ಷಣ ವ್ಯವಸ್ಥೆ

ಮುಳುಗಿಯೇ ಭೌತಶಾಸ್ತ್ರ, ಗಣಿತಗಳ ಪರೀ–ಕ್ಷೆ ಬರೆದಿದ್ದ ನನಗೆ, ಕನ್ನಡದಲ್ಲಿ ಅತಿ ಕಡಿಮೆ ಅಂಕಗಳು, ವಿಜ್ಞಾನದಲ್ಲಿ, ಗಣಿತದಲ್ಲಿ ಹೆಚ್ಚು ಅಂಕಗಳು. ಇದೂ ಕೂಡ ನಾನು ನನ್ನ ತಂದೆಯ ಬಳಿ ಕನ್ನಡ ಎಂದು ಬಾಯಿ ತೆಗೆಯಲಾಗದಂತೆ ಮಾಡಿತ್ತು. ಅನಿವಾರ್ಯವಾಗಿ ಒಲ್ಲದ ಮನಸ್ಸಿನಿಂದಲೇ ಇಂಜಿನಿಯರಿಂಗ್ ಪ್ರವೇಶದ, ಕೃಷಿ ಕಾಲೇಜು ಪ್ರವೇಶದ ಪರೀಕ್ಷೆಗಳಿಗೆ ಹಾಜರಾಗಿದ್ದೆ.



ನ್ಯಾಷನಲ್ ಕಾಲೇಜಿನಲ್ಲಿ ಓದಿದ ಜೊತೆಗಾರಲ್ಲಿ ಹಲವರು ಇಂಜನಿಯರಿಂಗ್ ಸರ್ಕಾರಿ ಅಥವ ಖಾಸಗಿ ಇಂಜನಿಯರಿಂಗ್ ಕಾಲೇಜುಗಳನ್ನು ಸೇರಿದ್ದರು. ನನಗೂ ಕೂಡ ದೂರದ ಸುರತ್ಕಲ್‌ನ ಕೇಂದ್ರ ಸರ್ಕಾರದ ರೀಜನಲ್ ಕಾಲೇಜಿನಲ್ಲಿ ಪ್ರವೇಶ ದೊರೆತಿತ್ತು. ಬೆಂಗಳೂರಿನ ಕಾಲೇಜಿನಲ್ಲಿ ಪ್ರವೇಶ ಸಿಗದ್ದರಿಂದ ಎಂಟು ಮಕ್ಕಳ ಕುಟುಂಬದ ಹೊರೆ ಹೊತ್ತ ತಂದೆ ಹಾಸ್ಟೆಲ್ ವೆಚ್ಚ ಭರಿಸುವುದು ಸಾಧ್ಯವೇ ಇಲ್ಲ ಎಂದು ಒಂದೇ ಮಾತಿನಲ್ಲಿ ನಿರಾಕರಿಸಿದ್ದರು. ಆದ್ದರಿಂದ ಏನು ಮಾಡುವುದು ಎಂಬ ಯೋಚನೆಯಲ್ಲಿದ್ದ ನನಗೆ ಕೃಷಿ ಪದವಿಗೆ ಪ್ರವೇಶ ಖುಷಿ ತಂದಿತು. ಅಂದು ನನ್ನಂತೆಯೇ ತಮ್ಮ ಆಯ್ಕೆಯ ಬಗ್ಗೆ ತಿಳಿದುಕೊಳ್ಳಲು ಹಲವರು ಬೋರ್ಡ್ ಸುತ್ತಾ ನೆರೆದಿದ್ದರು. ಆಯ್ಕೆಯಾದವರಿಗೆ ಸಂತೋಷವಾಗಿತ್ತು. ಆಯ್ಕೆಯಾಗದವರು ಪೇಚುಮೋರೆ ಹಾಕಿಕೊಂಡು ತೆರಳುತ್ತಿದ್ದರು. ಆದರದು ಸಾಮಾನ್ಯ ತಾನೆ ಎಂದು ಅಂ–ದು ಮನಸ್ಸಿಗೆ ಹಚ್ಚಿಕೊಂಡಿರಲಿಲ್ಲ. ಮುಂದೆ ಒಂದು ದಿನ ಈ ಇಡೀ ದೃಶ್ಯ, ಸೀಟು ಸಿಗದವರ ಕಾಮೆಂಟುಗಳು ನನಗೆ ಬಹಳ ಕಾಲ ಕಾಡುತ್ತದೆಂದು ಗೊತ್ತಿರಲಿಲ್ಲ. ಕಾಲೇಜು ಸೇರಿದೆ. ಮುಂದೆ, ನಾನು ಆಯ್ಕೆಯಾದವರಲ್ಲಿ ಮೊದಲನೆಯವನೆಂದು ಅಖಿಲ ಭಾರತ ಜ್ಯೂನಿಯರ್ ಫೆಲೋಶಿಪ್ ಕೂಡ ಸಿಕ್ಕಿತು. ತಂದೆಗೆ ನನ್ನ ವಿದ್ಯಾಭ್ಯಾಸದ ಹಣದ ಹೊರೆಯನ್ನು ತೆ–ಗೆದು ಹಾಕಿತು ಮಾತ್ರವಲ್ಲ. ಮನೆಯ ಸಾಲಗಳ ಕಂತು ತುಂಬಲು ಕೂಡ ಸಹಾಯವಾಯಿತು.

ಅರಿವೇ ಇಲ್ಲದಂತೆ ಮೂಡಿದ ಅರಿವು

ಆದರೆ ಕೃಷಿ ಪದವಿಯ ಓದಿನ ಜೊತೆ ಜೊತೆಗೇ ಕನ್ನಡ ಸಾಹಿತ್ಯದ ಓದು ಕೂಡ ಸಾಗಿತು. ಅದರ ಒಂದು ಉಪ ಉತ್ಪನ್ನವಾಗಿ ಇತಿಹಾಸದ ಅಧ್ಯಯನವೂ ಅಂಟಿಕೊಂಡಿತು. ನನ್ನ ಜೊತೆಯ ಕೆಲ ವಿದ್ಯಾರ್ಥಿಗಳು ನೀನು ಎಷ್ಟು ಡಿಗ್ರಿ ಮಾಡುತ್ತಿದ್ದೀಯ, ಅಥವಾ ಯಾವ ಡಿಗ್ರಿ ಮಾಡುತ್ತಿದ್ದೀಯ ಎಂದೋ ತಮಾಷೆ ಮಾಡುತ್ತಿದ್ದುದೂ ಉಂಟು. ಹೀಗೆ ಸಾಗುತ್ತಿರುವಾಗ ಕುವೆಂಪು, ಚದುರಂಗ, ಕಾರಂತ, ನಿರಂಜನ, ಕಟ್ಟೀಮನಿ, ಬೀಚಿಯವರ ಸಾಹಿತ್ಯದ ಓದು, ಜಿ.ಎಸ್. ಶಿವರುದ್ರಪ್ಪನವರು ಬೆಂಗಳೂರು ವಿಶ್ವ ವಿದ್ಯಾನಿಲಯದಲ್ಲಿ ಏರ್ಪಡಿಸುತ್ತಿದ್ದ ವಿಚಾರ ಸಂಕಿರಣಗಳೂ ನನಗೇ ಅರಿವಿಲ್ಲದಂತೆ ಅರಿವು ಮೂಡಿಸುತ್ತಾ ಹೋದವು. ನಾಲ್ಕು ವರ್ಷಗಳ ಪದವಿಯ ಮೂರನೇ ವರ್ಷದ ಅಂತ್ಯದಲ್ಲಿದ್ದಾಗ ಒಮ್ಮೆ ನಾನು ನನ್ನ ಸುತ್ತಮುತ್ತಲಿನ ಸಹಪಾಠಿಗಳನ್ನು, ಅವರ ಸಾಮಾಜಿಕ ಸ್ತರಗಳನ್ನು, ಮಾತು, ಚರ್ಚೆ, ಅಭ್ಯಾಸಗಳನ್ನು ಗಮನಿಸಲಾರಂಭಿಸಿದೆ. ನನ್ನ ಜೊತೆಯಲ್ಲಿ ನಗರಗಳ ಮೇಲ್ಜಾತಿಯ, ಹಿಂದುಳಿದ ಜಾತಿಗಳವರೇ ಆದರೂ ನಗರ ಮೂಲದ ಗೆಳೆಯರು ಓದಿನಲ್ಲಿ ಮುಂದಿದ್ದು ಉತ್ತಮ ಅಂಕಗಳನ್ನು ತೆಗೆಯುತ್ತಿದ್ದರು. ಹಳ್ಳಿಗಳಿಂದ ಬಂದ ಅಲ್ಲಿಯೇ ಪಕ್ಕದ ಹಳ್ಳಿಗಳಲ್ಲಿ ಇದ್ದು ತಮ್ಮ ಪಾಡಿಗೆ ತಾವೇ ಮಾಡಿಕೊಳ್ಳುತ್ತಿದ್ದ, ಅಥವಾ ಹಾಸ್ಟೆಲ್‌ನಲ್ಲಿದ್ದುಕೊಂಡು ಓದುತ್ತಾ ಇದ್ದವರು ವಿಷಯಗಳನ್ನು ಅರ್ಥ ಮಾಡಿಕೊಳ್ಳಲು, ಅಂಕಗಳನ್ನು ತೆಗೆಯಲು ತಿಣುಕಾಡುತ್ತಿದ್ದುದನ್ನು ಕಂಡೆ. ಕೃಷಿಯೇ ಜೀವನವಾದ ಇವರು ಕೃಷಿ ಪದವಿಯಲ್ಲಿ ಹಿಂದೆ ಬೀಳುತ್ತಿದ್ದುದು ನನ ಚೋದ್ಯವೆನಿಸಿತು. ಆಳವಾದ ಯೋಚನೆ ಹಚ್ಚಿತು. ಅಲ್ಲಿಯವರೆಗೆ ಹೆಚ್ಚಾಗಿ ನಗರ ಮೂಲ ಸಹಪಾಠಿಗಳ ಜೊತೆಯೇ ಹೆಚ್ಚು ಒಡನಾಟವಿ ನಾನು ಹಳ್ಳಿಗಳಿಂದ ಬಂದವರೊಡನೆ ಹೆಚ ಕಾಲ ಕಳೆಯಲಾರಂಭಿಸಿದೆ.

ನನ್ನ ದೃಷ್ಟಿಗೆ ದೊರಕಿದ ಈ ಹೊಸ ದಿ ನನ್ನ ಜೊತೆ ಕಲಿಯುತ್ತಿದ್ದವರನ್ನು ಮೀರಿ ನ ಜೊತೆ ಕಲಿಯಲು ಅವಕಾಶ ಸಿಗದಿದ್ದವರ ಬ ಚಿಂತಿಸಲು ಹಚ್ಚಿತು. ನಮ್ಮ ತಂದೆ ಕೃಷಿ ಇಲಾಖೆಯ ಹಳ್ಳಿಮಟ್ಟದ ನೌಕರರಾದುದರಿಂದ ಪದೇ ಪದೇ ವರ್ಗಾವಣೆಯಾಗುತ್ತಿತ್ತು. ಹೀ ನಾನು ಕೃಷಿ ಪದವಿ ಹಂ ತಲುಪುವ ವೇಳೆಗೆ ನಾಲ ಜಿಲ್ಲೆಗಳ ಹತ್ತು ಹಳ್ಳಿಗಳಲ್ಲಿ ವಾಸ ಮಾಡಿದ್ದೆ. ಈ ಅನೇಕ ಹಳ್ಳಿಗಳ ಸರ್ಕಾರೀ ಶಾಲೆಗಳಲ್ಲಿ ನನ್ನ ಜೊತೆ ಓದುತ್ತಿದ್ದ ಗೆಳೆಯರು ಚೌಡಪ್ಪ, ಬಚ್ಚಣ್ಣ, ತಿಮ್ಮಪ್ಪ ಮುದ್ದಣ್ಣ, ಪಟಾಲಪ್ಪ, ಕರಿಯ, ಮಾದ ಇವರು ಕೃಷಿ ಪದವಿ ಪಡೆಯಲು ನನಗಿಂತ, ಇಲ್ಲಿರುವ ನನ್ನ ಅನೇಕ ಗೆಳೆಯರಿಗಿಂತ ಅರ್ಹರಲ್ಲವೇ? ಅವರೆಲ್ಲ ಎಲ್ಲಿದ್ದಾರೆ? ಏನಾಗಿದ್ದಾರೆ? ಎಂಬ ಪ್ರಶ್ನೆಗಳು ಕಾಡತೊಡಗಿದುವು. ಆಗಲೇ ಮೂರು ವರ್ಷಗಳ ಹಿಂದೆ ನನಗೆ ಸೀಟುಗಳ ಪಟ್ಟಿ ಹಚ್ಚಿದ ಬೋರ್ಡ್ ಮುಂದೆ ನಿಂತು ಪೇಚು ಮೋರೆ ಹಾಕಿಕೊಂಡಿದ್ದವರ ಹಾಗೂ ಸಿಟ್ಟುಗೊಂಡವರ ದೃಶ್ಯ ನನ್ನ ಕಣ್ಣು ಮುಂದೆ ನಿಂತಿತು. ಅವರ ಕಾಮೆಂಟುಗಳೂ ಧುತ್ತನೆ ನೆನಪಾದವು. ಅವರು ಅಂದು ಹೇಳುತ್ತಿದ್ದರು : **"ಹೊಲದಲ್ಲಿ ಬಿಸಿಲಲ್ಲಿ ದುಡಿಯುವುದು ನಾವು, ಇಲ್ಲಿ ಕೃಷಿ ಪದವೀಧರರಾಗುವವರು ಯಾರೋ ನೆರಳಲ್ಲಿ ತಂಪಾಗಿ ಬೆಳೆದವರು"** ಎಂದು.

ಅವರು ಒಬ್ಬೊಬ್ಬರೂ ಕೃಷಿಯಲ್ಲಿ, ತೋಟಗಾರಿಕೆಯಲ್ಲಿ ಮೈ ಬಗ್ಗಿಸಿ ದುಡಿಯುವುದರಲ್ಲಿ ಆಯಾ ಊರುಗಳಿಗೇ ಹೆಸರು ಮಾಡಿದ್ದ ಕುಟುಂಬಗಳವರು. ನಾವು ಪ್ರಾಥಮಿಕ ಶಾಲೆಗಳಲ್ಲಿ ಓದುತ್ತಿದ್ದಾಗಲೇ ಕೃಷಿಯ ಮರ್ಮ ಬಲ್ಲವರಾಗಿದ್ದರು. ಯಾವ ಬೆಳೆಗೆ ಎಷ್ಟು ನೀರು ಕಟ್ಟಬೇಕು, ಪೈರುಗಳನ್ನು ಎಷ್ಟು ಅಂತರದಲ್ಲಿ ನೆಡಬೇಕು ಎಷ್ಟು ಗೊಬ್ಬರ ಹಾಕಬೇಕು, ಯಾವ ರೋಗಗಳಿಗೆ ಎಂತಹ ಔಷಧಿ, ಎಷ್ಟು ಪ್ರಮಾಣದಲ್ಲಿ ಹೊಡೆಯಬೇಕು ಎಂಬುದರಲ್ಲಿ ನುರಿತಿದ್ದವರು. ಕೆಲವರಂತೂ ಕೂಲಿಕಾರರು ಬೇಸಾಯದ ಬಿರುಸಿನ ದಿನಗಳಲ್ಲಿ ಶಾಲೆಗೆ ವಾರಗಟ್ಟಳೆ ಬರುತ್ತಿರಲಿಲ್ಲ. ಆಗಲೇ ಪರಿಣತ ಕೆಲಸಗಾರರೆಂದು ಹೆಸರು ತೆಗೆದುಕೊಂಡಿದ್ದರು ಇಂತಹವರು. ನಮ್ಮ ಜಮೀನುಗಳಿಗೆ ಕೂಲಿಕಾರರಾಗಿ ಸಿಗಬೇಕೆಂದು ಊರಿನೆಲ್ಲಾ ರೈತರು ಬಯಸುತ್ತಿದ್ದರು. ಎಂದೂ ನೀರು ಕಟ್ಟದ, ಪೈರು ಹಚ್ಚದ ನಾನು ಇಲ್ಲಿ ಡಿಗ್ರಿ ಪದವಿಯಲ್ಲಿ ಅದೇ ಪ್ರಶ್ನೆಗಳಿಗೆ ಉರು ಹಚ್ಚುತ್ತಾ ಒಳ್ಳೆಯ ಅಂಕಗಳನ್ನು ಗಳಿಸುತ್ತಾ ಪ್ರಾಧ್ಯಾಪಕರಿಂದ ಭೇಷ್ ಎನ್ನಿಸಿಕೊಳ್ಳುತ್ತಾ ಮುಂದೆ ಸಾಗುತ್ತಿದ್ದೆ. ನಾನು ಇವುಗಳನ್ನು ಹತ್ತಿರದಿಂದ ನೋಡಿಯಾದರೂ ನೋಡಿದ್ದೆ. ನನ್ನ ತಂದೆಯವರು ರೈತರಿಗೆ ಉತ್ತಮ ಕೃಷಿ ಪದ್ಧತಿಗಳ

ಪುಟ 15 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ವಿವಾದಗಳ ಸುಳಿಯಲ್ಲಿ ಸಿದ್ದರಾಮಯ್ಯ


ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮುಂದಿನ ಚುನಾವಣೆಗಳ ಮೇಲೇ ಕಣ್ಣಿಟ್ಟು ಅಗ್ಗದ ಜನಪ್ರಿಯತೆ ಗಿಟ್ಟಿಸಿಕೊಳ್ಳುವ ಯೋಜನೆಗಳನ್ನು ಒಂದರ ನಂತರ ಒಂದರಂತೆ ಪ್ರಕಟಿಸುತ್ತಾ ಹೊಸ ಹೊಸ ವಿವಾದಗಳಿಗೆ ಕಾರಣರಾಗುತ್ತಿದ್ದಾರೆ. ರಾಜ್ಯದಲ್ಲಿ ಬಡ ಮುಸ್ಲಿಂ ಕುಟುಂಬಗಳ ಯುವತಿಯರು, ವಿಚ್ಛೇದಿತ ಮಹಿಳೆಯರು ಮತ್ತು ವಿಧವೆಯರ ವಿವಾಹಕ್ಕೆ 50 ಸಾವಿರ ರೂ. ನೆರವು ನೀಡುವ ಯೋಜನೆ. ಈ ಯೋಜನೆಯನ್ನು ರಾಜ್ಯ ಬಜೆಟ್‌ನಲ್ಲೇ ಪ್ರಸ್ತಾಪಿಸಲಾಗಿದ್ದರೂ, ಆಗ ಸುಮ್ಮನಿದ್ದ ಬಿಜೆಪಿ, ಕೆಜೆಪಿ, ಜೆಡಿಎಸ್ ಪಕ್ಷಗಳು, ಚುನಾವಣೆಯಲ್ಲಿ ಲಾಭಗಳಿಸುವ ಕಾಂಗ್ರೆಸ್ ಉದ್ದೇಶವನ್ನು ಮನಗಂಡು ಅದನ್ನು ತೀವ್ರವಾಗಿ ವಿರೋಧಿಸುತ್ತಿವೆ. ಎಲ್ಲವನ್ನು ಮುಸ್ಲಿಂ ವಿರೋಧಿ ದೃಷ್ಟಿಯಿಂದ ನೋಡುವ ಈ ಪಕ್ಷಗಳ ಕೋಮುವಾದಿ ಧೋರಣೆಯನ್ನು ಖಂಡಿಸದೆ ಇರಲಾಗದು. ಮುಸಲ್ಮಾನರಲ್ಲಿ ಅಸಂಖ್ಯಾತ ಕಡು ಬಡ ಕುಟುಂಬಗಳು ಇರುವುದನ್ನು ಕಡೆಗಣಿಸಲಾಗದು. ಅದೇ ಸಮಯದಲ್ಲಿ ಇತರ ಜನ ಸಮುದಾಯಗಳಲ್ಲಿಯೂ ಹೆಣ್ಣು ಮಕ್ಕಳ ಮದುವೆ ಮಾಡಲು ತೀರಾ ಕಷ್ಟಪಡುವ ಕುಟುಂಬಗಳಿವೆ. ಆದ್ದರಿಂದ ಈ ಯೋಜನೆಯನ್ನು ಎಲ್ಲಾ ಜಾತಿ ಜನಾಂಗಗಳ ಬಡ ಕುಟುಂಬಗಳಿಗೆ ಅನ್ವಯಿಸಲು ಸರ್ಕಾರ ಮುಂದಾಗುವುದು ಅಗತ್ಯವಿದೆ. ಇಂತಹ ಯೋಜನೆಗಳ ಜೊತೆಯಲ್ಲಿ ಹೆಣ್ಣು ಮಕ್ಕಳ ಶಿಕ್ಷಣ, ಉದ್ಯೋಗದ ಗ್ಯಾರಂಟಿ, ಅಪೌಷ್ಟಿಕತೆಯ ನಿವಾರಣೆ, ದೌರ್ಜನ್ಯಗಳಿಂದ ರಕ್ಷಣೆ ಮೊದಲಾದವುಗಳಿಗೆ ಸರ್ಕಾರ ಆದ್ಯತೆ ನೀಡಬೇಕು. ಹೆಣ್ಣು ಮಕ್ಕಳ ಮದುವೆಗೆ ಸರ್ಕಾರ ನೀಡುವ ನೆರವು ವರದಕ್ಷಿಣೆಗಾಗಿ ದುರ್ಬಳಕೆಯಾಗದಂತೆ ತಡೆಯಲೂ ಸರ್ಕಾರ ಬಿಗಿಯಾದ ಕ್ರಮಗಳನ್ನು ಕೈಗೊಳ್ಳಬೇಕು.

ಅಹಿಂದ ವಿದ್ಯಾರ್ಥಿಗಳಿಗೆ ಸರ್ಕಾರ ಘೋಷಿಸಿರುವ 'ಪ್ರವಾಸ ಭಾಗ್ಯ' ಎಂಬ ಯೋಜನೆಯೂ ವಿವಾದಗ್ರಸ್ತವಾಗಿದೆ. ಎಲ್ಲ ರಂಗಗಳಲ್ಲಿಯೂ ಸಮಾನತೆಯನ್ನು ಪ್ರತಿಪಾದಿಸಬೇಕಾದ ಸರ್ಕಾರ ಒಂದು ವಿಭಾಗದ ಮಕ್ಕಳನ್ನು ಮಾತ್ರ ಪ್ರತ್ಯೇಕವಾಗಿ ಪ್ರವಾಸಕ್ಕೆ ಕಳುಹಿಸುವುದು ಎಷ್ಟರ ಮಟ್ಟಿಗೆ ಸರಿ? ಶಾಲಾ ಮಕ್ಕಳ ಪ್ರವಾಸಗಳಿಗೆ ಶೈಕ್ಷಣಿಕ ಮಹತ್ವವಿದೆ. ಮೇಲ್ಜಾತಿಗಳಿಗೆ ಸೇರಿದ ಅದೆಷ್ಟೋ ಕುಟುಂಬಗಳಿಗೆ ತಮ್ಮ ಮಕ್ಕಳನ್ನು ಪ್ರವಾಸಕ್ಕೆ ಕಳುಹಿಸುವ ಸಾಮರ್ಥ್ಯ ಇರುವುದಿಲ್ಲ. ಅಂತಹ ಮಕ್ಕಳನ್ನು ಪ್ರವಾಸಕ್ಕೆ ಹೋಗುವ ಅವಕಾಶದಿಂದ ವಂಚಿಸುವುದು ಸರಿಯಲ್ಲ. ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವ ಎಲ್ಲಾ ಮಕ್ಕಳಿಗೆ ಸರ್ಕಾರದ ಖರ್ಚಿನಲ್ಲಿ ಶೈಕ್ಷಣಿಕ ಪ್ರವಾಸಕ್ಕೆ ಹೋಗುವ ಅವಕಾಶವನ್ನು ಕಲ್ಪಿಸಲು ಸರ್ಕಾರ ಮುಂದಾಗುವುದು ಹೆಚ್ಚು ಸೂಕ್ತ.

ಅತ್ತ ಮೂಢನಂಬಿಕೆ ವಿರೋಧಿ ಕಾನೂನೊಂದನ್ನು ತರುವ ಸರ್ಕಾರದ ನಿರ್ಧಾರ ತೀವ್ರವಾದ ಪರ ಹಾಗೂ ವಿರೋಧದ ಚರ್ಚೆಗೆ ಗ್ರಾಸವಾಗಿದೆ. ಮಹಾರಾಷ್ಟ್ರ ಮಾದರಿಯಲ್ಲಿ ರಾಜ್ಯ ಸರ್ಕಾರ ಮೂಢನಂಬಿಕೆ ವಿರೋಧಿ ಕಾನೂನೊಂದನ್ನು ಜಾರಿಗೆ ತರಲು ಮುಂದಾಗುತ್ತಿರುವುದು ಸ್ವಾಗತಾರ್ಹವೇ ಆಗಿದೆ. ಆದರೆ, ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯದ ತಜ್ಞರು ನೀಡಿರುವ ಕರಡು ವಿಧೇಯಕವನ್ನು ಓದದೇ, ರಾಜ್ಯದ ಪುರೋಹಿತಶಾಹಿ ಶಕ್ತಿಗಳು, ಹಿಂದುತ್ವವಾದಿಗಳು ಅಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ. ಜನರನ್ನು ಮೌಢ್ಯದಲ್ಲಿ ಇರಿಸಿ, ಲಾಭ ಪಡೆಯುತ್ತಿರುವ ಇಂತಹ ಪ್ರತಿಗಾಮಿ ಶಕ್ತಿಗಳ ವಿರುದ್ಧ ರಾಜ್ಯದ ಪ್ರಗತಿಪರ ಶಕ್ತಿಗಳು ಒಕ್ಕೊರಲಿನ ವಿರೋಧವನ್ನು ವ್ಯಕ್ತಪಡಿಸಲು ಮುಂದಾಗಬೇಕಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಇಂತಹ ಶಕ್ತಿಗಳ ಒತ್ತಡಕ್ಕೆ ಮಣಿಯಬಾರದೆಂದು ಒತ್ತಾಯಿಸಬೇಕಾಗಿದೆ. ಅದೇ ಸಮಯದಲ್ಲಿ, ಮಸೂದೆಯನ್ನು ಅವಸರದಲ್ಲಿ ಅಂಗೀಕರಿಸುವ ಪ್ರಯತ್ನವನ್ನು ಸರ್ಕಾರ ಮಾಡಬಾರದು. ಮಸೂದೆಯನ್ನು ಶಾಸನಸಭೆಯಲ್ಲಿ ಚರ್ಚೆಗೆ ಒಳಪಡಿಸುವುದು ಮಾತ್ರವಲ್ಲದೆ ಅದನ್ನು ಸಾರ್ವಜನಿಕ ಚರ್ಚೆಗೂ ಬಿಡುಗಡೆ ಮಾಡಬೇಕು. ಶಾಸನ ಒಂದರಿಂದಲೇ ತಲೆ ತಲಾಂತರದಿಂದ ಬಂದಿರುವ ಮೌಢ್ಯವನ್ನು ನಿವಾರಣೆ ಮಾಡಲು ಸಾಧ್ಯವಿಲ್ಲ. ಶಿಕ್ಷಣದ ಮೂಲಕ ಜನರಲ್ಲಿ ವೈಜ್ಞಾನಿಕ ಪ್ರಜ್ಞೆಯನ್ನು ಬೆಳೆಸಲು ಸರ್ಕಾರ ಕ್ರಮ ಕೈಗೊಳ್ಳಬೇಕು.

ಹೀಗೆ ರಾಜ್ಯ ಸರ್ಕಾರ ಒಂದಿಲ್ಲೊಂದು ವಿವಾದಕ್ಕೆ ಗುರಿಯಾಗುತ್ತಿರುವಾಗ, ಸಿದ್ದರಾಮಯ್ಯ ಸಚಿವ ಸಂಪುಟದ ಒಬ್ಬ ಸಚಿವರೂ ಸಹ ಮುಖ್ಯಮಂತ್ರಿಯನ್ನು ಸಮರ್ಥಿಸಲು ಮುಂದಾಗದಿರುವುದು ಸರ್ಕಾರದ ಒಳಗಡೆ ಬುಸುಗುಡುತ್ತಿರುವ ಭಿನ್ನಮತಕ್ಕೆ ಇನ್ನೊಂದು ಸಾಕ್ಷಿಯಾಗಿದೆ. ಈ ಬೆಳವಣಿಗೆಗಳನ್ನು ಗಮನಿಸುವಾಗ ಕಾಂಗ್ರೆಸ್ ಒಳಗಿನ ಅತೃಪ್ತರು ಲೋಕಸಭಾ ಚುನಾವಣೆಯೊಂದನ್ನೇ ಎದುರು ನೋಡುತ್ತಿದ್ದಾರೆ ಎಂದು ಭಾಸವಾಗುತ್ತಿದೆ.

ಮೌಢ್ಯತೆಯ ಮುಸುಕುಧಾರಿಗಳ ಎದುರಿನಲ್ಲಿ



ಮೂಢನಂಬಿಕೆಗಳ ಆಚರಣೆಯನ್ನು ನಿರ್ಬಂಧಿಸುವ ಮತ್ತು ನಿಯಂತ್ರಿಸುವ ದೆಸೆಯಲ್ಲಿ ಕಾಯ್ದೆಯೊಂದನ್ನು ತರಲು ಕರ್ನಾಟಕ ಸರಕಾರ 'ಚಿಂತಿಸಿದ್ದು' ಹಲವರನ್ನು ಕಂಗೆಡಿಸಿದೆ. ಧರೆಗೇ ಬೆಂಕಿ ಬಿದ್ದವರಂತೆ ಅವರು ಕೂಗಾಡುತ್ತಿದ್ದಾರೆ. ಜನರಲ್ಲಿ ಮೌಢ್ಯತೆ ತೊಲಗಿ ಜಾಗೃತಿ ಮೂಡಿದರೆ, ಆಸ್ತಿ ಮತ್ತು ಜೀವ ಹಾನಿಯಿಂದ ಜನರು ರಕ್ಷಿತರಾದರೆ ಮೌಢ್ಯತೆಯ ವ್ಯಾಪಾರಿಗಳಿಗೆ ದಿಗಿಲಾಗದೇ? ಅದರಲ್ಲೂ ಸಾರ್ವಜನಿಕರ ಅರಿವನ್ನು ಹೆಚ್ಚಿಸಬೇಕಾದ ಮಾಧ್ಯಮಗಳು ಮೌಢ್ಯತೆಯ ರಕ್ಷಣೆಗೆ ಟೊಂಕಕಟ್ಟಿ ವಿಚಾರ ವಿಧ್ವಂಸಕರಾಗಿ ನಿಂತಿದ್ದು ಅತ್ಯಂತ ಹೇಯಕರ. ಮಾಧ್ಯಮಗಳೊಳಗಿನ ಪಟ್ಟಭದ್ರ ಹಿತಾಸಕ್ತಿಗಳ ಕಾರ್ಯಾಚರಣೆಯ ಆ ಪರಿಯೇ ಅಪಾಯಕಾರಿ ಮಟ್ಟವನ್ನೂ ಮೀರುತ್ತಿದೆ.

ಯಾವುದೇ ವಿಷಯ ಚರ್ಚಾತೀತವೇನಲ್ಲ, ವಾದ-ವಿವಾದಗಳೂ ಸಂವಾದಗಳೂ ಪ್ರಜಾಪ್ರಭುತ್ವದ ಅತ್ಯಂತ ಸಹಜ ಕ್ರಿಯೆಗಳು ನಿಜ. ಆದರೆ ಈ ವಿಷಯದಲ್ಲಿ ಆದದ್ದು ಅಂತಹ ಮುಕ್ತ ಸಂವಾದದ ಮೂಲಕ ಅರಿವು ಹೆಚ್ಚಿಸುವ ಕೆಲಸವಲ್ಲ, ಬದಲಾಗಿ ಮುಕ್ತ ಚರ್ಚೆ ಸಾಧ್ಯವಾಗಲಿ ಎಂದು ಸಲ್ಲಿಸಲಾದ ಕರಡನ್ನು ಓದದೇ, ಓದಿದ್ದರೂ ಬೇಕೆಂದೇ ವಾಸ್ತವಗಳನ್ನು ತಿರುಚಿ ತಮ್ಮ ದುರುದ್ದೇಶಕ್ಕೆ ತಕ್ಕಂತೆ ವ್ಯಾಖ್ಯಾನಿಸಿ ಗೊಂದಲ ಹುಟ್ಟಿಸಿ ಸಾರ್ವಜನಿಕರನ್ನು ಹಾದಿ ತಪ್ಪಿಸಲು ನಡೆಸಿದ ಪ್ರಯತ್ನ. ಇದು ಖಂಡನಾರ್ಹ.

ಶತ ಶತಮಾನಗಳಿಂದಲೂ ಜನರ ಮುಗ್ಧತೆಯನ್ನೇ ಬಳಸಿ ಮೌಢ್ಯತೆ, ಕಂದಾಚಾರಗಳನ್ನು ಹುಲುಸಾಗಿ ಬೆಳಸಿ ಅದರ ಆಧಾರದಲ್ಲಿಯೇ ಸಂಪತ್ತು ದೋಚಿ ಸರ್ವ ಸುಖ ಭೋಗಗಳನ್ನು ಅನುಭವಿಸುತ್ತಾ ಬಂದ ಆಳುವ ವರ್ಗದ ನೆಚ್ಚಿನ ನೆಂಟರಾದ ಎಲ್ಲಾ ಧರ್ಮಗಳಲ್ಲಿರುವ ಪುರೋಹಿತಶಾಹಿ, ಪಟ್ಟಭದ್ರರು ವೈಚಾರಿಕ ಎಚ್ಚರದ ಈ ಒಂದು ಪ್ರಯತ್ನವನ್ನು ಹೇಗೆ ಸಹಿಸಿಯಾರು? ಅದರಲ್ಲೂ ಅಜ್ಞಾನ, ಅಂಧಶ್ರದ್ಧೆಗಳನ್ನೇ ಬಂಡವಾಳ ಮಾಡಿಕೊಂಡಿರುವ, ಹಿಂದೂ ಧರ್ಮದ ಗುತ್ತಿಗೆ ಹಿಡಿದವರಂತೆ ಆಡುವ ಸಂಘಪರಿವಾರ, ಪುರೋಹಿತಶಾಹಿಗಳು ಬೆಚ್ಚಿ ಬೀಳದೇ ಇದ್ದಾರೆಯೇ? ಆದ್ದರಿಂದಲೇ ರಾಷ್ಟ್ರೀಯ ಕಾನೂನು ಶಾಲೆಯ ಅಧ್ಯಯನ ಕೇಂದ್ರದ ತಜ್ಞರ ತಂಡ ನೀಡಿದ 'ಕರ್ನಾಟಕ ಮೂಢನಂಬಿಕೆ ಪ್ರತಿಬಂಧಕ ಮಸೂದೆ 2013' ಕರಡಿನ ಮೇಲೆಯೇ ಹಸಿ ಸುಳ್ಳುಗಳ ಧಾಳಿಯನ್ನು ನಡೆಸಿದ್ದು.

ಈಗಿನ ಕರಡು ಮಸೂದೆಯನ್ನು ತರುವುದು ಹಿಂದೂ ಧರ್ಮದ ಮೇಲಿನ ಧಾಳಿಯೆಂಬುದಾಗಲೀ, ಜನರ ಧಾರ್ಮಿಕ ನಂಬಿಕೆ, ಆಚರಣೆಗಳನ್ನು ನಿರ್ಬಂಧಿಸುತ್ತದೆ ಎಂಬುದಕ್ಕೆ ಅರ್ಥವೇ ಇಲ್ಲ. ಈ ಮಸೂದೆಯ ಮೊದಲ ಭಾಗವಾದ, ಸಾರ್ವಜನಿಕ ಚರ್ಚೆಯ ಉದ್ದೇಶವೇ ಮುಖ್ಯವಾಗಿರುವ ಪರಿಕಲ್ಪನಾ ಟಿಪ್ಪಣಿಯಲ್ಲೇ ಭಾರತದ ಸಂವಿಧಾನವು ಪ್ರಜೆಯ ಧಾರ್ಮಿಕ ನಂಬಿಕೆ ಮತ್ತು ಧಾರ್ಮಿಕ ಸ್ವಾತಂತ್ರ್ಯವನ್ನು ಎತ್ತಿಹಿಡಿಯುತ್ತದೆಯಾದ್ದರಿಂದ ಅವುಗಳನ್ನು ನಿಷೇಧಿಸುವ ಪ್ರಶ್ನೆಯೇ ಇಲ್ಲವೆಂದು ಸ್ಪಷ್ಟಪಡಿಸಿದೆ. ಮುಖ್ಯವಾಗಿ, ಕೆಲವು ನಿರ್ದಿಷ್ಟ ಹಾನಿಕಾರಕ ಆಚರಣೆಗಳನ್ನು ಪ್ರತಿಬಂಧಕದ ವ್ಯಾಪ್ತಿಯಲ್ಲಿ ತರಲು ಸೂಚಿಸಿದೆ. ನರಬಲಿ, ಅಘೋರಿ, ಮಾಟ-ಮಂತ್ರ, ಸಿಡಿಯಾಡಿಸುವುದು, ಗಾವು ಸಿಗಿತ, ಬೆತ್ತಲೆ ಸೇವೆ, ಸಿದ್ದು ಭುಕ್ತಿ, ಮಾನವನ ಘನತೆಗೆ ಚ್ಯುತಿ ತರುವ, ಜಾತಿ ತಾರತಮ್ಯದ ಮಡೆಸ್ನಾನ- ಪಂಕ್ತಿಬೇಧ ಮುಂತಾದವುಗಳು ಇದರಲ್ಲಿ ಇವೆ. ಇಂತಹವುಗಳನ್ನು ನಿಷೇಧಿಸದೇ ಪುರಸ್ಕರಿಸುತ್ತಲೇ ಇರಬೇಕು ಎನ್ನುವ ಮನಸ್ಸುಗಳಿಗೆ, ಮನುಷ್ಯರು ಎಂದು ಹೇಳಲಾದೀತೇ?

ಇಂತಹ ಕಾಯ್ದೆಯನ್ನು ತರಬೇಕೆಂಬ ಸಿದ್ಧರಾಮಯ್ಯನವರ ಸರಕಾರದ ನಿಲುವು ಸ್ವಾಗತಾರ್ಹ. ಮಹಾರಾಷ್ಟ್ರದ ಖ್ಯಾತ ವಿಚಾರವಾದಿ ದಾಬೋಲ್ಕರ್ ಹತ್ಯೆಯ ಬೆನ್ನಲ್ಲೇ ಮಹಾರಾಷ್ಟ್ರ ಸರಕಾರ ತಂದಂತಹ ಕಾಯ್ದೆಯ ಮಹತ್ವವನ್ನು ಕರ್ನಾಟಕ ಸರಕಾರ ಅರಿತಿರುವುದು ಸಕಾಲಿಕ. ರಾಜ್ಯ ಸರಕಾರವೇ ರಾ.ಕಾನೂನು ಶಾಲೆ ಮತ್ತು ಹುಬ್ಬಳ್ಳಿಯ ಕಾನೂನು ವಿಶ್ವವಿದ್ಯಾಲಯಗಳಿಗೆ ಮಸೂದೆಯ ಕರಡು ರಚಿಸಿಕೊಡುವಂತೆ ಕೇಳಿತ್ತು. ಇಬ್ಬರೂ ಕರಡು ನೀಡಿದ್ದಾರೆ. ಇವುಗಳನ್ನು ಅಧ್ಯಯನ ಮಾಡಿ ಚರ್ಚೆಯಾಗಬೇಕಿದೆ. ಆದರೆ ರಾ.ಕಾ.ವಿ.ದ ಬಗ್ಗೆಯೇ ವಿವಾದ ಬೆಳೆಸುತ್ತಿರುವುದರ ಉದ್ದೇಶವೇನು?

ಸಂಘಪರಿವಾರವು ಈ ಮಸೂದೆಯನ್ನು ದೇವರಿಲ್ಲ ಎಂಬ ನಾಸ್ತಿಕರೇ ತಯಾರಿಸಿದ್ದಾರೆಂದೂ, ಅವರೆಲ್ಲಾ ಮಾರ್ಕ್ಸ್‌ವಾದಿಗಳೆಂದು ಜರೆದಿದೆ. ಇದೊಂದು ಅರ್ಥಹೀನ ಬೈಗುಳ ಅಷ್ಟೇ. ಆರೋಪ ಪೂರ್ಣ ಸತ್ಯವಲ್ಲ. ಅಲ್ಲಿರುವವರು ಹಲವು ವಿಚಾರ ಧಾರೆಯವರು. ಸಾಮಾಜಿಕ ಚಿಂತಕರು. ದೇವರನ್ನು ಒಪ್ಪುವ, ನಿರಾಕರಿಸುವ ತಾತ್ವಿಕ ಪ್ರವಾಹ ಭಾರತೀಯ ತತ್ವಶಾಸ್ತ್ರದ ಅವಿಭಾಜ್ಯ ಅಂಗ. ದೈವವಾದೀ ಸಿದ್ಧಾಂತದಂತೆ ವಸ್ತುವಾದೀ ಸಿದ್ಧಾಂತವೂ ಸರಿ ಸಮನಾಗಿ ಹರಿದಿದೆ, ಸಂಘರ್ಷಿಸಿದೆ. ಸಮಾಜಕ್ಕೆ ಬೆಳಕು ತೋರಿಸಿದೆ. ನಮ್ಮ ಸಮಾಜದಲ್ಲಿನ ಅಜ್ಞಾನ, ಅಂಧಶ್ರದ್ಧೆ, ಕಂದಾಚಾರ, ಪುರೋಹಿತಶಾಹೀ ಕುತಂತ್ರಗಳ ವಿರುದ್ಧ ದಾರ್ಶನಿಕರು, ಸಮಾಜ ಸುಧಾರಕರು ಮುಖಾಮುಖಿಯಾಗಿ ಸೆಣೆಸುತ್ತಲೇ ಬಂದಿದ್ದಾರೆ. ಮೌಢ್ಯಾಚರಣೆಗಳ ವಿರುದ್ಧ ದ್ವನಿ ಎತ್ತಿದ್ದಾರೆ. ನಮ್ಮ ನಾಡಿನಲ್ಲಿ 12ನೆಯ ಶತಮಾನದ ಶರಣರು ಸಾರಿದ ಕ್ರಾಂತಿಕಾರಿ ವೈಚಾರಿಕ, ಸಾಮಾಜಿಕ ಬಹುಮುಖಿ ಸಮರ ಉಜ್ವಲ ಉದಾಹರಣೆ. ಇಂತಹದ್ದು ನಮ್ಮ ಚರಿತ್ರೆಯುದ್ದಕ್ಕೂ ಎಲ್ಲಾ ಕಾಲಘಟ್ಟಗಳಲ್ಲಿ ನಡೆದಿದೆ. ಈಗಲೂ


ಪುಟ 14 ಕ್ಕೆ


ದುಷ್ಟ ನರಬಲಿಗೆ ತುತ್ತಾದ ಮುಗ್ಧ ಮಗು

ಈತನೀಗ ಸುಳ್ಳುಗಳ ಸರದಾರನು!

ಜಿ.ವಿ. ಶ್ರೀರಾಮರೆ

ದೇಶದ ಭಾವೀ ಪ್ರಧಾನಿ ಎಂದು ಸಂಘ ಪರಿವಾರವು ಬಿಂಬಿಸುತ್ತಿರುವ ನರೇಂದ್ರ ಮೋದಿ ಇತ್ತೀಚಿನ ತನ್ನ ಭಾಷಣಗಳಲ್ಲಿ ಭಾರತದ ಇತಿಹಾಸದ ಕುರಿತು ಹೇಳುತ್ತಿರುವ ಹಸಿಹಸಿ ಸುಳ್ಳುಗಳು ಸಂಘ ಪರಿವಾರದ ಕುತಂತ್ರ ಮತ್ತು ಭಂಡತನಕ್ಕೂ ಮತ್ತು ನರೇಂದ್ರ ಮೋದಿಯ ಮಹಾ ಅಜ್ಞಾನಕ್ಕೂ ಸಾಕ್ಷಿಯಾಗಿವೆ. ಬಿಹಾರದ ಹೆಮ್ಮೆಗಳ ಬಗ್ಗೆ ಸುಳ್ಳುಗಳನ್ನು ಪೋಣಿಸಿದ ಪಾಟ್ನಾ ಸಭೆಯಲ್ಲಿ ಆತ ವರ್ಣಾಶ್ರಮ ಧರ್ಮದ ವಿರುದ್ಧ ದನಿ ಎತ್ತಿದ ಬುದ್ಧನಿಗೆ ಜ್ಞಾನೋದಯವಾದ ಸ್ಥಳ ಗಯಾ ಬಿಹಾರದಲ್ಲಿದೆ, ಅದು ನಿಜವಾದ ಹೆಮ್ಮೆ ಎಂದು ಎಲ್ಲೂ ಅಪ್ಪಿ ತಪ್ಪಿಯೂ ಹೇಳಲಿಲ್ಲ. ಅತಿ ಹೆಚ್ಚು ಭೂಮಾಲಕರು ಇರುವ ಆ ರಾಜ್ಯದಲ್ಲಿ ಭೂಮಾಲಕರು ನಡೆಸುವ ದಬ್ಬಾಳಿಕೆಗಳ ಬಗ್ಗೆ ಒಂದಕ್ಷರವೂ ಮಾತನಾಡಲಿಲ್ಲ. ಇತಿಹಾಸ ಅರಿಯದವನು ಇತಿಹಾಸ ನಿರ್ಮಿಸಬಲ್ಲನೆ?.



ಒಂದೇ ಆಯುಧ.... ಎಲ್ಲವನ್ನು ಎದುರಿಸಲು....
'ಹೂಂಕಾರ್ ರ್‍ಯಾಲಿ' ವ್ಯಂಗ್ಯಚಿತ್ರ ಕೃಪೆ: ಕುಮಾರ್, ಡೆಕ್ಕನ್ ಕ್ರಾನಿಕಲ್

ಅಕ್ಟೋಬರ್ 27, 2013 ರಂದು ರಾಷ್ಟ್ರೀಯ ಟಿ.ವಿ.ಚಾನಲ್‌ಗಳನ್ನು ನೋಡಿದವರು ಆರ್ಭಟದ ಮೋದಿ ಭಾಷಣವನ್ನು ಗಮನಿಸಿರಬಹುದು. ಆ ಭಾಷಣಕ್ಕೆ ಅಗತ್ಯವಿಲ್ಲದ ಇತಿಹಾಸದ ಹಲವಾರು ವ್ಯಕ್ತಿಗಳು ಮತ್ತು ಪ್ರದೇಶಗಳ ಬಗ್ಗೆ ಭಾವೋದ್ವೇಗವಾಗಿ ಮೋದಿ ಮಾಡಿದ ಭಾಷಣ ಎಷ್ಟು ಸುಳ್ಳುಗಳ ಸರಣಿಗಳಾಗಿದ್ದವೆಂದು ಇತಿಹಾಸದ ಬಗ್ಗೆ ಸಾಮಾನ್ಯ ಪರಿಚಯ ಮತ್ತು ಪರಿಜ್ಞಾನವಿರುವ ಯಾರಿಗಾದರೂ ತಿಳಿಯುತ್ತದೆ.

ಇತಿಹಾಸವನ್ನು ತಿರುಚುವುದು, ಸುಳ್ಳು ಇತಿಹಾಸವನ್ನು ಸೃಷ್ಟಿಸುವುದು ಸಂಘ ಪರಿವಾರ ಮತ್ತು ಅವುಗಳ ಮಾತೃಸ್ಥಾನದಲ್ಲಿರುವ ಆರ್‌ಎಸ್‌ಎಸ್‌ಗೆ ರಕ್ತಗತವಾಗಿರುವ ವಿಷಯವೆಂಬುದು ಅವುಗಳ ಬಗ್ಗೆ ಪರಿಚಯವಿರುವ ಎಲ್ಲರಿಗೂ ತಿಳಿದಿರುವ ವಿಷಯ. ಆ ಸಂಘ ಪರಿವಾರದ ಮುದ್ದಿನ ಮಗ ಮತ್ತು ಅವರು ಈ ದೇಶದ ಭಾವೀ ಪ್ರಧಾನಮಂತ್ರಿ ಎಂದು ಬಿಂಬಿಸಿರುವ ನರೇಂದ್ರ ಮೋದಿಯು ಸುಳ್ಳು ಇತಿಹಾಸವನ್ನು ಹೇಳದೆ ಬೇರೆ ಏನನ್ನು ಹೇಳಲು ಸಾಧ್ಯ?


ನಮಗೆ ಇತಿಹಾಸದ ಪಾಠಗಳು ಹೇಳಿರುವ ಇನ್ನೊಂದು ಸತ್ಯವೇನೆಂದರೆ ಫ್ಯಾಸಿಸ್ಟ್ ಶಕ್ತಿಗಳು ಮತ್ತು ಫ್ಯಾಸಿಸ್ಟ್ ಮನೋಭಾವವಿರುವ ವ್ಯಕ್ತಿಗಳಿಗಿರುವ ಒಂದು ಮುಖ್ಯ ಲಕ್ಷಣವೆಂದರೆ, ಸುಳ್ಳುಗಳನ್ನು ಹೇಳುವುದು ಮತ್ತು ಅವುಗಳನ್ನು ವೈಭವೀಕರಿಸುವುದು. ಇದಕ್ಕೆ ಒಂದು ಬಹಳ ಉತ್ತಮ ಉದಾಹರಣೆ ಎಂದರೆ ಜರ್ಮನಿಯ ಹಿಟ್ಲರ್ ಮತ್ತು ಇಟಲಿಯ ಮುಸಲೋನಿ. ಅಲೆಮಾರಿ ಆರ್ಯರ ಇತಿಹಾಸದ ಬಗ್ಗೆ ಸುಳ್ಳು ಹೇಳಿ ಆ ಜನಾಂಗವನ್ನು ವೈಭವೀಕರಿಸಿ 'ತಮ್ಮ' ಆರ್ಯ ಜನಾಂಗವೇ ಶ್ರೇಷ್ಠ ಮತ್ತು ಜಗತ್ತನ್ನು ಆಳಲು ಅವರು ಮಾತ್ರ ಅರ್ಹರೆಂದು, ಆ ಕಾರಣಕ್ಕಾಗಿ ಕೋಟ್ಯಾಂತರ ಯಹೂದಿಗಳನ್ನು ಮತ್ತು ಕಮ್ಯೂನಿಸ್ಟರನ್ನು ಕೊಲೆ ಮಾಡಿದ ಹಿಟ್ಲರ್ ಮತ್ತು ಮನುಷ್ಯರನ್ನು ಪ್ರಾಣಿಗಳಿಗಿಂತ ಕೀಳಾಗಿ ಕಾಣುವ, ಮನುಷ್ಯರನ್ನು ಕೊಳ್ಳುವ ಮತ್ತು ಮಾರಾಟ ಮಾಡುವ ಗುಲಾಮಗಿರಿಯ ವ್ಯವಸ್ಥೆಯನ್ನು ರಕ್ಷಿಸುತ್ತಾ, ಅದರ ಆಧಾರದ ಮೇಲೆ ನಿರ್ಮಿಸಿದ ರೋಮನ್ ಚಕ್ರಾಧಿಪತ್ಯವನ್ನು ವೈಭವೀಕರಿಸಿ, ಅಂತಹ ಇನ್ನೊಂದು ಚಕ್ರಾಧಿಪತ್ಯವನ್ನು ಸ್ಥಾಪಿಸುವೆನೆಂದು ಲಕ್ಷಾಂತರ ಜನರನ್ನು ಬಲಿತೆಗೆದುಕೊಂಡ ಇಟಲಿಯ ಸರ್ವಾಧಿಕಾರಿ ಮುಸಲೋನಿ. ಇವರ ಪಡಿಯಚ್ಚಿನಂತಿರುವ ವ್ಯಕ್ತಿ ಈ ಮೋದಿ.



'ಬಿಂಬಿದ-2002' – ವ್ಯಂಗ್ಯಚಿತ್ರ ಕೃಪೆ: ಸುಧೀರ್ ತೈಲಂಗ್, ಡೆಕ್ಕನ್ ಕ್ರಾನಿಕಲ್

ಪ್ರಜಾಪ್ರಭುತ್ವವಾದಿ ಜಾತ್ಯಾತೀತ ದೇಶವಾಗಿರುವ ಭಾರತದ ಒಂದು ರಾಜ್ಯದ ಮುಖ್ಯಮಂತ್ರಿಯಾಗಿ 2002ರ ಫೆಬ್ರವರಿ ಕೊನೆಯ ಭಾಗದಲ್ಲಿ ಎರಡು ಸಾವಿರಕ್ಕೂ ಹೆಚ್ಚಿನ ಅಲ್ಪಸಂಖ್ಯಾತರ ಮಾರಣ ಹೋಮ ಒಂದು ಸಣ್ಣ ವಿಷಯ ಎಂಬಂತೆ ತಳ್ಳಿ ಹಾಕುವ ಮನೋಭಾವದ ವ್ಯಕ್ತಿಯಿಂದ ಇತಿಹಾಸದ ಬಗ್ಗೆ ಸತ್ಯವನ್ನು ನಿರೀಕ್ಷಿಸಲು ಹೇಗೆ ಸಾಧ್ಯ?

ಇಲ್ಲಿ ಆತಂಕ ಪಡಬೇಕಾಗಿರುವ ಮುಖ್ಯ ಅಂಶವೇನೆಂದರೆ ಈ ದೇಶದ ಇತಿಹಾಸದ ಬಗ್ಗೆ ಈ ವ್ಯಕ್ತಿಗೆ ಕನಿಷ್ಟ ತಿಳುವಳಿಕೆಯೂ ಇಲ್ಲ ಎಂಬುದು. ಇಂತಹ ಮನುಷ್ಯನೊಬ್ಬ ದೇಶದ ಪ್ರಧಾನ ಮಂತ್ರಿಯಾದರೆ ಅದಕ್ಕಿಂತ ದುರಂತ ಬೇರಾವುದೂ ಇಲ್ಲ. ಈ ಫ್ಯಾಸಿಸ್ಟರಿಗೆ ಇನ್ನೊಂದು ಮುಖವೂ ಉಂಟು. ಅದೆಂದರೆ ಇತಿಹಾಸವನ್ನು ಪುರಾಣಗಳನ್ನಾಗಿ ಮಾಡುವುದು, ಪುರಾಣಗಳನ್ನು ಇತಿಹಾಸವನ್ನಾಗಿ ಮಾಡುವುದು. ಇದು ಸಂಘ ಪರಿವಾರದ ಇನ್ನೊಂದು ವಿಕೃತ ಪ್ರವೃತ್ತಿ. ಇವೆಲ್ಲವನ್ನೂ ಭಾವಿ ಪ್ರಧಾನಿ ಎಂಬ ವ್ಯಕ್ತಿ ಬಿಹಾರದಲ್ಲಿ ನಡೆದ ಬಹಿರಂಗ ಸಭೆಯ ವೇದಿಕೆಯಿಂದ ಮಾಡಿದ್ದಾರೆ. ಈ ಸುಳ್ಳುಗಳನ್ನು ಹೇಳಲು ಬಿಹಾರದ ಬಹಿರಂಗ ಸಭೆಯನ್ನೇ ನರೇಂದ್ರ ಮೋದಿ ಏಕೆ ಬಳಸಿಕೊಂಡರು? ಕೇವಲ ಬಿಹಾರದ ಜನರ ಭಾವನೆಗಳನ್ನು



ಕೆರಳಿಸಿ ರಾಜಕೀಯ ಲಾಭವನ್ನು ಪಡೆಯಲು ಮತ್ತು ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್‌ರವರಿಗೆ ಸವಾಲು ಹಾಕಲು ಎಂಬುದು ಸಾಮಾನ್ಯ ಜನರಿಗೂ ಅರ್ಥವಾಗುವ ಸತ್ಯ. ಬಿಹಾರದ ಜನರ ಓಟುಗಳನ್ನು ಪಡೆಯಲು ಒಂದು ದೇಶದ ಇತಿಹಾಸವನ್ನೇ ತಿರುಚಿ ಹೇಳುವುದು ಮತ್ತು ತಪ್ಪು ಇತಿಹಾಸವನ್ನು ಹೇಳುವುದು ಇತಿಹಾಸಕ್ಕೆ ಎಸಗುವ ಅಪಚಾರವಲ್ಲವೇ? ಅದರೆ ಈ ಪ್ರಧಾನಿ ಪಟ್ಟಾಕಾಂಕ್ಷಿಗೆ ಅದರ ಪರಿವೆಯೇ ಇದ್ದಂತಿಲ್ಲ.

ಇನ್ನು ಬಿಹಾರದ ಬಹಿರಂಗ ಸಭೆಯಲ್ಲಿ ನರೇಂದ್ರ ಮೋದಿ ಇತಿಹಾಸದ ಬಗ್ಗೆ ಹೇಳಿದ ಐತಿಹಾಸಿಕ ಸುಳ್ಳುಗಳನ್ನು ಪರಿಶೀಲಿಸೋಣ. ನರೇಂದ್ರ ಮೋದಿ ಬಿಹಾರದ ಭವ್ಯ ಇತಿಹಾಸದ ಬಗ್ಗೆ ಮಾತನಾಡುತ್ತಾ, ಗ್ರೀಕ್ ದೇಶದ ಮ್ಯಾಸಿಡೋನಿಯಾದ ದೊರೆ ಅಲೆಗ್ಸಾಂಡರ್ ಭಾರತದ ಮೇಲೆ ದಂಡೆತ್ತಿ ಬಂದಾಗ ಬಿಹಾರದ ವೀರರು ಅವರನ್ನು ಸೋಲಿಸಿ ಹಿಮ್ಮೆಟ್ಟಿಸಿದರು ಎಂದು ಹೇಳಿದ್ದಾರೆ. ಆದರೆ ವಾಸ್ತವವಾಗಿ ಅಲೆಗ್ಸಾಂಡರ್‌ನ ದಂಡ ಯಾತ್ರೆ ಪಂಜಾಬಿನ ಆಚೆಗೆ ಬರಲೇ ಇಲ್ಲ ಮತ್ತು ಅವನ ವಿರುದ್ಧ ಧೀರೋದಾತ್ತವಾಗಿ ಸೆಣಸಾಡಿದ್ದು ಪುರೂರ ಎಂಬ ದೊರೆ. ಅಲೆಗ್ಸಾಂಡರ್ ಮತ್ತು ದೊ ಪುರೂರವನ ಮಧ್ಯೆ ನಡೆದ ಆ ಯುದ್ಧ ಪ್ರಾಚೀನ ಭಾರತದ ಮೊದಲ ದೀರ್ಘ ಕಾಲ ಬಹಳ ವ್ಯವಸ್ಥಿತ ಯುದ್ಧವೆಂದು ಹೇಳಲಾಗಿ ಆ ಪ್ರದೇಶದಿಂದಲೇ ಅಲೆಗ್ಸಾಂಡರ್ ಸ್ವದೇಶ ಮರಳಿದ್ದು. ಈ ಇತಿಹಾ ಸತ್ಯವನ್ನು ಮುಚ್ಚಿಟ್ಟು, ಬಿಹಾರದ ಜನರ ಭಾವನೆಗಳನ್ನು ಕೆರಳಿಸಲು ಸುಳ್ಳು ಇತಿಹಾಸವನ್ನು ಹೇಳಿದ್ದಾರೆ.

ಬಿಹಾರದ ಸಭೆಯಲ್ಲಿ ಸಾಮ್ರಾಟ್ ಅಶೋಕನ ಹೇಳುತ್ತಾ ಮಗಧ ರಾಜ್ಯ ಹೆಮ್ಮೆಯ ಪ್ರತೀಕ(ಮಗಧ ಸಾಮ್ರಾಜ್ಯದ ರಾಜಧಾನಿ ಹಿಂದಿನ ಪಾಟಲೀಪುತ್ರ ಅಥವಾ ಇಂದಿನ ಪಾಟ್ನಾ)ಎಂದು ಹೇಳುತ್ತಾ ಅಶೋಕನ ತಾತನಾದ ಚಂದ್ರಗುಪ್ತನ ವಂಶಾವಳಿಯನ್ನು ಸರಿ ಸುಮಾರು 350 ವರ್ಷಗಳ ನಂತರದ ಗುಪ್ತರ ವಂಶಾವಳಿಗೆ ಸೇರಿಸಿ ಹೇಳಿದ್ದು ಇತಿಹಾಸದ ಬಗ್ಗೆ ಈ ಮನುಷ್ಯನಿಗಿರುವ ಅಜ್ಞಾನವನ್ನು ತೋರಿಸುತ್ತದೆ. ಪುರಾತನ ಜಗತ್ತಿನಲ್ಲಿ ಅತ್ಯಂತ ಹಳೆಯದಾದಂತಹ ಜ್ಞಾನ ಕೇಂದ್ರವಾಗಿದ್ದ ತಕ್ಷಿಲಾ ಅಥವಾ ತಕ್ಷಶಿಲೆಯು ಬಿಹಾರದಲ್ಲಿದ್ದದ್ದು ಹೆಮ್ಮೆಯ ವಿಷಯವಾಗಿದೆಯೆಂದು ಹೇಳಿದ್ದಾ ಆದರೆ ತಕ್ಷಶಿಲೆಯು ಇರುವುದು ಈಗಿನ ಪಾಕಿಸ್ತಾನದಲ್ಲಿ ಎಂಬುದು ಇತಿಹಾಸದ ವಾಸ್ತ

ಇತ್ತೀಚೆಗಷ್ಟೆ ಪುಣೆಯ ಫರ್ಗ್ಯೂಸನ್ ಕಾಲೇಜಿನ ವಿದ್ಯಾರ್ಥಿಗಳನ್ನು ಮತ್ತು ಉಪಾಧ್ಯಾಯರನ್ನು ಉದ್ದೇಶಿಸಿ ಮಾತನಾಡುತ್ತಾ ಇಂದಿನ ವಿಶ್ವವಿದ್ಯಾಲಯಗಳು ನಡೆಸುತ್ತಿರುವ 'ಘಟಿಕೋತ್ಸವ'ಗಳ ಪ್ರಸ್ತಾಪ, ತೈತ್ತಿರೀಯ ಉಪನಿಷತ್ತಿನಲ್ಲಿ ಇದೆ ಎಂದು ಹೇಳಿದ್ದು ಇನ್ನೊಂದು ಅಪ್ಪಟ ಸುಳ್ಳಾಗಿದೆ. ಜಗತ್ತಿಗೆ ಜ್ಞಾನವನ್ನು ಮೊದಲು ಕಲಿಸಿಕೊಟ್ಟಿದ್ದು ಹಿಂದುಗಳು ಎಂದು ಹೇಳುತ್ತಾ 2600 ವರ್ಷಗಳ ವಿಶ್ವವಿದ್ಯಾನಿಲಯಗಳ ಇತಿಹಾಸದಲ್ಲಿ

1800 ವರ್ಷಗಳು ಹಿಂದೂಗಳದ್ದೇ ಎಂದು ಹೇಳಿದ್ದಾರೆ. ಇದು ಇತಿಹಾಸದ ಬಗ್ಗೆ ಇವರಿಗೆ ಇರುವ ಅಜ್ಞಾನವೆಷ್ಟು ಎಂದು ಮತ್ತೆ ಸಾಬೀತುಪಡಿಸಿದೆ. ಇವರು ಹೆಮ್ಮೆಯಿಂದ ಹೆಸರಿಸಿದ ನಳಂದ, ತಕ್ಷಶಿಲೆ, ವಿಕ್ರಮಶಿಲಾ, ವದಂತಿಪುರಿ ಮತ್ತು ಗುಜರಾತ್ ಪ್ರದೇಶದಲ್ಲಿದ್ದ ವಲ್ಲಭಿ ಇವು ಯಾವುವೂ ವಿಶ್ವವಿದ್ಯಾಲಯಗಳಲ್ಲ. ಬದಲಿಗೆ ಇವುಗಳಲ್ಲಿ ಬಹುತೇಕ ಬೌದ್ಧ ಧರ್ಮದ, ಸಾಹಿತ್ಯದ ಅಧ್ಯಯನ ಕೇಂದ್ರಗಳಾಗಿದ್ದು, ಇದಕ್ಕಿಂತ ಬಹಳ ಮುಖ್ಯವಾಗಿ ವೇದ ಮತ್ತು ಉಪನಿಷತ್ತುಗಳ ಕಾಲದಲ್ಲಿ ಎಲ್ಲೂ ಸಹಾ ವಿಶ್ವವಿದ್ಯಾಲಯಗಳ ಬಗ್ಗೆ ಪ್ರಸ್ತಾಪವಿಲ್ಲ ಮತ್ತು ತೈತ್ತಿರೇಯ ಉಪನಿಷತ್ತಿನಲ್ಲಿ ಅದರ ಪ್ರಸ್ತಾಪವಿಲ್ಲ ಅಥವಾ ಋಗ್ವೇದದ ಬಹಳ ಮುಖ್ಯ ಭಾಗವಾದ ಬ್ರಾಹ್ಮಣಗಳಲ್ಲಿ ಒಂದಾದ ತೈತ್ತಿರೇಯ ಬ್ರಾಹ್ಮಣದಲ್ಲೂ ವಿಶ್ವವಿದ್ಯಾಲಯಗಳ ಪ್ರಸ್ತಾಪವಿಲ್ಲ. ವಿಶ್ವವಿದ್ಯಾಲಯಗಳೇ ಇಲ್ಲದಿರುವಾಗ ಘಟಿಕೋತ್ಸವಗಳ ಪ್ರಸ್ತಾಪದ ಪ್ರಶ್ನೆಯೇ ಬಾರದು. ಇದರ ಅರ್ಥ ತಾನೊಬ್ಬ ಉಗ್ರ ಹಿಂದೂ ಧರ್ಮದ ಪ್ರತಿಪಾದಕನೆಂದೂ. ಹೆಮ್ಮೆ ಪಡುವ ಈ ಉಗ್ರ ಹಿಂದೂವಾದಿಗೆ ಹಿಂದೂ ಧರ್ಮದ ಬಗ್ಗೆ ಇರುವ ಅಜ್ಞಾನವನ್ನು ಪ್ರದರ್ಶಿಸುತ್ತದೆ. (ವಾಸ್ತವವಾಗಿ ಆ ಗ್ರಂಥಗಳಾವುವೂ ತಾವು ಹಿಂದೂ ಗ್ರಂಥಗಳೆಂದು ಘೋಷಿಸಿಲ್ಲ.)

ಸರ್ದಾರ್ ವಲ್ಲಭಭಾಯಿ ಪಟೇಲರು ಸತ್ತಾಗ ನೆಹರೂರವರು ಅಂತಿಮ ಸಂಸ್ಕಾರಕ್ಕೆ ಹೋಗಲಿಲ್ಲವೆಂದೂ ಆತ ಅದೇ ಬಹಿರಂಗ ಸಭೆಗೆ ಹೇಳಿದರು. ಇದಂತೂ ಅಗತ್ಯವಿಲ್ಲದ ಸುಳ್ಳು. ವಾಸ್ತವವಾಗಿ ಪಟೇಲರ ಅಂತ್ಯ ಸಂಸ್ಕಾರದಲ್ಲಿ ಅಂದಿನ ಪ್ರಧಾನಿ ನೆಹರು ಮತ್ತು ಅಂದಿನ ರಾಷ್ಟ್ರಪತಿ ಡಾ.ರಾಜೇಂದ್ರ ಪ್ರಸಾದ್‌ರವರು ಭಾಗವಹಿಸಿದ್ದರು ಎಂಬುದಕ್ಕೆ ಸರ್ಕಾರದಲ್ಲಿ ದಾಖಲೆ ಇದೆ, ಇದೇ ಸಂದರ್ಭದಲ್ಲಿ 1998ರ ಎನ್‌ಡಿಎ ಅವಧಿಯಲ್ಲಿ ದೇಶದ ಒಟ್ಟು ಉತ್ಪಾದನೆ 8.4%ರಷ್ಟು ಇತ್ತು ಎಂದು ಹೇಳಿದ್ದಾರೆ. ಆದರೆ ನಿಜ ಸಂಗತಿ ಎನ್‌ಡಿಎ ಆಡಳಿತಾವಧಿಯಲ್ಲಿ ದೇಶದ ಅಭಿವೃದ್ಧಿ ದರ ಇದ್ದದ್ದು 6% ಮಾತ್ರ.

ಹಾಗೆಯೇ ಮುಂದುವರೆಯುತ್ತಾ ದೇಶದಲ್ಲಿ ಅತಿ ಹೆಚ್ಚಿನ ವಿದೇಶಿ ಬಂಡವಾಳವನ್ನು ಆಕರ್ಷಿಸಿದ್ದು ಗುಜರಾತ್ ರಾಜ್ಯವೆಂದು ಹೇಳಿದ್ದಾರೆ. ಆದರೆ ಗುಜರಾತ್‌ಗೆ 2001ರಿಂದ2011ರವರೆಗೂ ಬಂದ ವಿದೇಶಿ ಬಂಡವಾಳ 7.2ಬಿಲಿಯನ್ ಡಾಲರ್. ಇದೇ ಸಂದರ್ಭದಲ್ಲಿ ಮಹಾರಾಷ್ಟ್ರಕ್ಕೆ ಬಂದ ವಿದೇಶಿ ಬಂಡವಾಳ 45.8 ಬಿಲಿಯನ್ ಡಾಲರ್, ದೆಹಲಿಗೆ 26 ಬಿಲಿಯನ್ ಡಾಲರುಗಳು. ಇದರ ಜೊತೆಯಲ್ಲಿ ಗುಜರಾತ್‌ನಲ್ಲಿರುವ ನರ್ಮದಾ ನದಿಯ ಅಣೆಕಟ್ಟು ಪೂರ್ತಿಯಾದರೆ ಜನರಿಗೆ ಉಚಿತ ವಿದ್ಯುತ್ ಸಿಗುತ್ತದೆಯೆಂದು ಹೇಳಿದ್ದಾರೆ, ಆದರೆ ಅದು ಸಾಧ್ಯವಿಲ್ಲ. ಅದಕ್ಕೆ ಹಣ ಕೊಡಲೇಬೇಕಾಗುತ್ತದೆ.

ಇವರು ಬಿಹಾರದ ಬಹಿರಂಗ ಸಭೆಯಲ್ಲೂ ಮತ್ತು ಇತರೆಡೆಗಳಲ್ಲೂ ಸತತವಾಗಿ ಹೇಳುತ್ತಿರುವ ಮತ್ತೊಂದು ಪ್ರಮುಖ ಸುಳ್ಳು-ನೆಹರೂ ರವರು ವ್ಯವಸ್ಥಿತವಾಗಿ ಸರ್ದಾರ್ ವಲ್ಲಭಭಾಯಿ ಪಟೇಲರನ್ನು ಮೂಲೆಗುಂಪು ಮಾಡಿದರು ಎಂದು. ನೆಹರೂ ಬದಲು ಪಟೇಲರು ಈ ದೇಶದ ಪ್ರಧಾನಿಯಾಗಿದ್ದರೆ ಭಾರತ ದೇಶ ಈ ಪರಿಸ್ಥಿತಿಯಲ್ಲಿರುತ್ತಿರಲಿಲ್ಲ ಎಂದು. ವಿಪರ್ಯಾಸವೆಂದರೆ ಮೋದಿ ಪಕ್ಷವಾದ ಭಾರತೀಯ ಜನತಾ ಪಕ್ಷ ಎಂಬ ಫ್ಯಾಸಿಸ್ಟ್ ಮುಖವಾಡದ ಬಿಜೆಪಿಯನ್ನು ಅಧಿಕಾರಕ್ಕೆ ತರುವುದರಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದ ಲಾಲ್ ಕೃಷ್ಣ ಅದ್ವಾನಿಯವರನ್ನು ಈಗ ಯಾರು ಮೂಲೆ ಗುಂಪು ಮಾಡಿದ್ದು? ಹೋಗಲಿ, ಗುಜರಾತ್‌ನಲ್ಲಿ ಜನಸಂಘದ ಕಾಲದಿಂದಲೂ ಹಿಡಿದು ಇತ್ತೀಚಿನವರೆಗೂ ಬಿಜೆಪಿಯನ್ನು ಬೆಳೆಸಿ ಅಧಿಕಾರಕ್ಕೆ ತಂದಂತಹ ಅನೇಕ ಹಿರಿಯ ನಾಯಕರನ್ನು ಯಾರು ಮೂಲೆ ಗುಂಪು ಮಾಡಿದರು? ಸ್ವಾತಂತ್ರ್ಯ ಬಂದ ಮೇಲೆ ಸರ್ದಾರ ಪಟೇಲರು ಬದುಕಿದ್ದು ಕೇವಲ 3ವರ್ಷ. ಅಷ್ಟರಲ್ಲಿ ದೇಶವನ್ನು ಯಾವ ರೀತಿ ಅಭಿವೃದ್ಧಿ ಪಡಿಸಲು ಸಾಧ್ಯವಾಗುತ್ತಿತ್ತು?.

ಬಿಹಾರದ ಜನತೆಯ ಭಾವನೆಗಳನ್ನು ಕೆರಳಿಸಲು ಪುರಾಣದ ಬಗ್ಗೆಯೂ ಸುಳ್ಳು ಹೇಳಿದ್ದು ನಿಜಕ್ಕೂ ದಂಗು ಬಡಿಸುತ್ತದೆ. ಇವರ ಭಾಷಣದಲ್ಲಿ ಕಷ್ಟದಲ್ಲಿದ್ದ ಸೀತಾ ಮಾತೆಗೆ ಆಶ್ರಯ ನೀಡಿದ್ದು ಬಿಹಾರವೆಂದು ಹೇಳಿದ್ದಾರೆ, ಇದು ಮಹಿಳೆಯರ ಮನಸೆಳೆಯಲು ಹೇಳಿದ ಸುಳ್ಳು. ವಾಲ್ಮೀಕಿ ರಾಮಾಯಣದ ಪ್ರಕಾರ



" ನಾನೇನು ತಪ್ಪು ಮಾಡಿಲ್ಲ...... ಬಡಪಾಯಿ ನಾಯಿಮರಿಗಳು ತಾವಾಗೇ ದಾರಿಗೆ ಅಡ್ಡ ಬರುತ್ತಿವೆ...!! "

ಸೀತೆ ತನ್ನ ವನವಾಸದ ಕಾಲದಲ್ಲಿ ಇದ್ದದ್ದು ಪಂಚವಟಿ ಎಂಬಲ್ಲಿ ಇದ್ದ ವಸಿಷ್ಟ ಮುನಿಗಳ ಆಶ್ರಮದಲ್ಲಿ. ಇತಿಹಾಸದ ಪ್ರಕಾರ ಅದೇ ಪಂಚವಟಿಯಾದರೆ ಆ ಪಂಚವಟಿ ಇರುವುದು ಇಂದಿನ ಮಧ್ಯಪ್ರದೇಶದಲ್ಲಿ.

ಇನ್ನು ಸಾಮ್ರಾಟ್ ಅಶೋಕನು ಬಿಹಾರದ ಹೆಮ್ಮೆ, ಅವನು ಹುಟ್ಟಿದ ನಾಡಿನಲ್ಲಿ ನಯವಂಚಕರೂ, ಭ್ರಷ್ಟರೂ, ಕ್ರೂರಿಗಳೂ ತುಂಬಿದ್ದಾರೆ ಎಂದಿದ್ದಾರೆ ಈತ. ಸಾಮ್ರಾಟ್ ಅಶೋಕನ ಹೆಸರು ಹೇಳುವ ಅರ್ಹತೆ ನಿಜವಾಗಿ ಇವರಿಗೆ ಇದೆಯೇ?. ಸಾಮ್ರಾಟ್ ಅಶೋಕನು ತಾನು ಮಾಡಿದ ಕಳಿಂಗ ಯುದ್ಧದಲ್ಲಿ ಸಂಭವಿಸಿದ ಜನರ ಸಾವು-ನೋವುಗಳನ್ನು ಕಂಡು ಅದಕ್ಕಾಗಿ ಕಣ್ಣೀರು ಸುರಿಸಿ ಮನನೊಂದು ರಾಜ್ಯ ವಿಸ್ತಾರಕ್ಕಾಗಿ ಇನ್ನು ಮುಂದೆ ಎಂದಿಗೂ ಯುದ್ಧವನ್ನು ಮಾಡುವುದಿಲ್ಲ ಎಂದು ಘೋಷಿಸಿದ ಮಹಾನ್ ವ್ಯಕ್ತಿ. ಅಷ್ಟೇ ಅಲ್ಲ ಪ್ರಪಂಚಕ್ಕೆ ಶಾಂತಿ ಸಂದೇಶವನ್ನು ಮತ್ತು ಮನುಷ್ಯರ ಸಮಾನತೆ ಬಗ್ಗೆ ಭೋಧಿಸಿದ ಬೌದ್ಧ ಧರ್ಮಕ್ಕೆ ಪರಿವರ್ತನೆಗೊಂಡು ತನ್ನ ರಾಜ್ಯದಲ್ಲಿ ಅದನ್ನು ಅಧಿಕೃತ ಧರ್ಮವನ್ನಾಗಿ ಅಂಗೀಕರಿಸಿ, ಜಗತ್ತಿನ ಮೂಲೆ ಮೂಲೆಗೂ ಆ ಧರ್ಮವನ್ನು ಹರಡಲು ಶ್ರಮಿಸಿದ ಅಶೋಕ ಸಾಮ್ರಾಟನೆಲ್ಲಿ? ಗುಜರಾತಿನಲ್ಲಿ 2002ರ ಮನುಷ್ಯರ ಮಾರಣಹೋಮ ಸಾವಿರಾರು ಜನರನ್ನು ಬಲಿ ತೆಗೆದುಕೊಂಡಾಗ ಆ ರಾಜ್ಯದ ಮುಖ್ಯಮಂತ್ರಿಯಾಗಿದ್ದರೂ, ಹನ್ನೊಂದು ವರ್ಷಗಳು ಕಳೆದರೂ ಅದರ ಬಗ್ಗೆ ಒಂದೇ ಒಂದು ಪಶ್ಚಾತ್ತಾಪದ ಪದವನ್ನೂ ಉಸುರದ ಈ ಮನುಷ್ಯ ಎಲ್ಲಿ ?

ಅದೇ 2002 ಫೆಬ್ರವರಿಯ ಗುಜರಾತ್ ನರಮೇಧದ ಸಂದರ್ಭದಲ್ಲಿ 9 ತಿಂಗಳ ಗರ್ಭಿಣಿಯಾಗಿದ್ದ 20 ವರ್ಷದ ಮುಸ್ಲಿಂ ಹೆಣ್ಣು ಮಗಳನ್ನು ಬೆತ್ತಲೆ ಮಾಡಿ ಬರೋಡಾದ ಬೀದಿಗಳಲ್ಲಿ ಮೆರವಣಿಗೆ ಮಾಡಿ, ಗರ್ಭವನ್ನು ಸೀಳಿಸಿ ಗರ್ಭದಲ್ಲಿದ್ದ ಮಗುವನ್ನು ತ್ರಿಶೂಲಕ್ಕೆ ಸಿಕ್ಕಿಸಿ, ಬೀದಿಗಳಲ್ಲಿ ಮೆರವಣಿಗೆಯ ಬಗ್ಗೆ ಆರಾಜ್ಯದ ಮುಖ್ಯಮಂತ್ರಿಯಾಗಿದ್ದೂ ಚಕಾರವೆತ್ತದ ಒಬ್ಬ ವ್ಯಕ್ತಿ 'ಮಹಾಮಾತೆ ಜಗತ್ತಿನ ತಾಯಿ' ಎಂದು ಸೀತೆಯ ಹೆಸರನ್ನು ಉಚ್ಚಾರ ಮಾಡಲು ಅರ್ಹರೆ?

ಸುಳ್ಳುಗಳನ್ನು ಹೇಳಿ, ಸುಳ್ಳು ವದಂತಿಗಳನ್ನು ಹಬ್ಬಿಸಿ, ಕೋಮು ಗಲಭೆಗಳನ್ನು ಸೃಷ್ಟಿಸಿ ರಾಜಕೀಯ ಅಧಿಕಾರವನ್ನು ಪಡೆಯಲು ಪ್ರಯತ್ನ ಮಾಡುವ, ಸುಳ್ಳು ಇತಿಹಾಸವನ್ನು ಹೇಳಿ ರಾಮಜನ್ಮ ಭೂಮಿಯ ವಿವಾದ ಹುಟ್ಟು ಹಾಕಿ, ಬಾಬರ್ ರಾಮಜನ್ಮಸ್ಥಳದಲ್ಲಿದ್ದ ರಾಮನ ಗುಡಿಯನ್ನು ನಾಶ ಮಾಡಿ ಮಸೀದಿ ಕಟ್ಟಿದ ಎಂದು ಕಥೆಗಳನ್ನು ಕಟ್ಟಿ ನಡೆಸಿದ ರಥಯಾತ್ರೆ ಸಾಗಿದ ದಾರಿಯುದ್ದಕ್ಕೂ ಮಾರಣ ಹೋಮವನ್ನು ನಡೆಸಿತು. ಹೀಗೆ ಕೋಮುದ್ರುವೀಕರಣದ ಮೂಲಕ ಅಧಿಕಾರವನ್ನು ಪಡೆದವರ ಕೈಗೆ ಮತ್ತೆ ರಾಜಕೀಯ ಅಧಿಕಾರ ಹೋದರೆ ಖಂಡಿತವಾಗಿ ಈ ದೇಶ ಕರಾಳ ದಿನಗಳನ್ನು ನೋಡಬೇಕಾಗುತ್ತದೆ ಎಂಬುದು ಸತ್ಯ.

ಆದರೆ ಇಲ್ಲಿ ಬಹಳ ಮುಖ್ಯವಾಗಿ ಗಮನಿಸಬೇಕಾಗಿರುವ ಅಂಶವೇನೆಂದರೆ, ದೇಶದ ಪ್ರಧಾನಿ ಆಗ ಬಯಸುವ ವ್ಯಕ್ತಿಯೊಬ್ಬ ಒಂದು ರಾಜ್ಯದಲ್ಲಿ ಮಾತನಾಡುವಾಗ ಆ ರಾಜ್ಯದ ಜನರ ಜೀವನದ ಪರಿಸ್ಥಿತಿ ಹೇಗಿದೆ, ಆ ರಾಜ್ಯದ ಅಭಿವೃದ್ಧಿಯಾಗಬೇಕಾದರೆ ಯಾವ ರೀತಿ ಕಾರ್ಯಕ್ರಮಗಳನ್ನು ರೂಪಿಸಬೇಕು, ಅಲ್ಲಿನ ಜನರ ಜೀವನದ ಮಟ್ಟವನ್ನು ಉತ್ತಮಗೊಳಿಸಬೇಕಾದರೆ ಏನು ಮಾಡಬೇಕು ಎಂದು ಹೇಳಬೇಕು. ಅದರ ಜೊತೆಯಲ್ಲೇ ದೇಶದ ಆರ್ಥಿಕ ಸ್ಥಿತಿಗತಿಗಳೇನು, ಜನರ ಜೀವನದ ಪರಿಸ್ಥಿತಿ ಏನು ಎಂಬ ವಿಷಯಗಳನ್ನು ವಸ್ತು ನಿಷ್ಠವಾಗಿ ಹೇಳಬೇಕಾಗುತ್ತದೆ ಮತ್ತು ದೇಶದ ಜನತೆಗೆ ಮನದಟ್ಟು ಮಾಡಿಕೊಡಬೇಕಾಗುತ್ತದೆ.

ಆದರೆ ಇದಾವುದರ ಬಗ್ಗೆ ಚಕಾರವೆತ್ತದೆ, ಕೇವಲ ಮತಗಳನ್ನು ಸೆಳೆಯುವುದಕ್ಕೋಸ್ಕರ ಜನರ ಭಾವನೆಗಳನ್ನು ಕೆರಳಿಸುವ ಸುಳ್ಳು ಇತಿಹಾಸವನ್ನು, ಹಸಿ ಸುಳ್ಳುಗಳನ್ನು ಹೇಳಿ ಜನರನ್ನು ತಪ್ಪುದಾರಿಗೆಳೆಯುವ ಇವರು ಈ ದೇಶದ ಭವಿಷ್ಯವನ್ನು ಹೇಗೆ ರೂಪಿಸಬಲ್ಲರು?

ಉದಾಹರಣೆಗೆ, ಬಿಹಾರ ರಾಜ್ಯ ದೇಶದಲ್ಲಿ ಅತಿ ಹೆಚ್ಚು ಬಡತನವಿರುವ ರಾಜ್ಯಗಳ ಪೈಕಿ ಒಂದು ಮತ್ತು ಅತಿ ಹೆಚ್ಚು ಭೂಮಾಲಕರು ಇರುವ ರಾಜ್ಯ. ಈ ಭೂಮಾಲಕರು ನಡೆಸುವ ದಬ್ಬಾಳಿಕೆಗಳು, ಇಲ್ಲಿ ನಡೆಯುವ ಜಾತಿ ಸಂಘರ್ಷಗಳ ಬಗ್ಗೆ ಮೋದಿ ಆ ಹಲವು ಸುಳ್ಳುಗಳನ್ನು ಹೇಳಿದ ಪಾಟ್ನಾ ಸಭೆಯಲ್ಲಿ ಒಂದಕ್ಷರವೂ ಮಾತನಾಡಲಿಲ್ಲ. ಬಡವರಿಗೆ ಭೂಮಿ ಕೊಡುವ ಭೂಸುಧಾರಣಾ ಕಾನೂನಿನ ಬಗ್ಗೆ ಮಾತನಾಡಲಿಲ್ಲ.

ಬಿಹಾರದ ವೈಭವದ ಬಗ್ಗೆ ಬಹಳಷ್ಟು ಮಾತನಾಡಿದ ಮೋದಿ, ಜಗತ್ತಿಗೆ ಶಾಂತಿ ಮತ್ತು ಸಮಾನತೆಯನ್ನು ಬೋಧಿಸಿದ, ವರ್ಣಾಶ್ರಮ ಧರ್ಮದ ವಿರುದ್ಧ ದನಿ ಎತ್ತಿದ ಮೊದಲ ಸಾಮಾಜಿಕ ಸುಧಾರಕ ಬುದ್ಧನಿಗೆ ಜ್ಞಾನೋದಯವಾದ ಸ್ಥಳ ಗಯಾ ಬಿಹಾರದಲ್ಲಿದೆ, ಅದು ಬಿಹಾರದ ನಿಜವಾದ ಹೆಮ್ಮೆ ಎಂದು ಎಲ್ಲೂ ಅಪ್ಪಿ ತಪ್ಪಿಯೂ ಹೇಳಲಿಲ್ಲ, ಕಾರಣವೇನೆಂದರೆ ವೈದಿಕ ಸಂಸ್ಕೃತಿ ಮತ್ತು ಮೋದಿ ಹೇಳುವ ಹಿಂದುತ್ವದ ಬುನಾದಿ ಎರಡೂ ವರ್ಣಾಶ್ರಮ ವ್ಯವಸ್ಥೆಯೇ. ಸಮಾನತೆ ಮತ್ತು ಶಾಂತಿ ಇವು ಸಂಘ ಪರಿವಾರಕ್ಕೆ ಒಗ್ಗದ ಶತ್ರುಗಳು. ಇತಿಹಾಸವನ್ನು ತಿರುಚುವುದು, ವಾಸ್ತವ ಇತಿಹಾಸವನ್ನು ಮುಚ್ಚಿಡುತ್ತಾರೆಂಬುದಕ್ಕೆ ಇದಕ್ಕಿಂತ ಬೇರೆ ಉದಾಹರಣೆ ಬೇಕೆ?

ಮೋದಿಯವರ ಸುಳ್ಳುಗಳ, ಅಜ್ಞಾನದ ಪ್ರದರ್ಶನ ಅವರದೇ ಗುಜರಾತ್‌ನಲ್ಲೂ ನಡೆದಿದೆ. ಖೇಡಾದಲ್ಲಿ ಆಸ್ಪತೆಯ ಉದ್ಘಾಟನಾ ಸಮಾರಂಭದಲ್ಲಿ ಭಾಷಣ ಮಾಡುವಾಗ ಡಾ॥ ಶ್ಯಾಂ ಪ್ರಸಾದ್ ಮುಖರ್ಜಿಯವರು ಗುಜರಾತ್‌ನ ಹೆಮ್ಮೆಯ ಪುತ್ರನೆಂದು, ಅವರು ಇಂಗ್ಲೆಂಡಿನಲ್ಲಿ ರ್‍ಯಾಡಿಕಲ್ ಇಂಡಿಯನ್ ಹೌಸ್‌ಅನ್ನು ಸ್ಥಾಪಿಸಿದ್ದಷ್ಟೇ ಅಲ್ಲದೆ ಭಾರತೀಯ ಕ್ರಾಂತಿಕಾರಿಗಳಿಗೆ ಗುರುವಾಗಿದ್ದರು ಎಂದೆಲ್ಲ ಹೇಳಿದರು. ಅಷ್ಟಕ್ಕೇ ನಿಲ್ಲದೆ, 1930 ರಲ್ಲಿ ಅವರು ಸಾಯುವಾಗ ತನ್ನ ಶವದ ಬೂದಿಯನ್ನು ಹಾಗೆಯೇ ರಕ್ಷಣೆ ಮಾಡಿಟ್ಟು ಅದನ್ನು ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ತೆಗೆದುಕೊಂಡು ಹೋಗಬೇಕೆಂದು. ಹೇಳಿದ್ದರು ಎಂದರು. ವಾಸ್ತವವಾಗಿ ಡಾ॥ ಶ್ಯಾಂ ಪ್ರಸಾದ ಮುಖರ್ಜಿ ಹುಟ್ಟಿದ್ದು ಕಲ್ಕತ್ತಾದಲ್ಲಿ. ಅವರು ಸತ್ತದ್ದು 1953 ರಲ್ಲಿ. ಅವರ ಅಂತ್ಯಕ್ರಿಯೆ ದೇಶದಲ್ಲಿಯೇ, ಪಶ್ಚಿಮ ಬಂಗಾಳದಲ್ಲಿ ನಡೆದಿತ್ತು.

ಡಾ॥ ಶ್ಯಾಂ ಪ್ರಸಾದ ಮುಖರ್ಜಿಯವರು ಸ್ವಾತಂತ್ರ್ಯ ಬಂದಾಗ ನೆಹರು ಮಂತ್ರಿ ಮಂಡಳದಲ್ಲಿ ಕೈಗಾರಿಕಾ ಮತ್ತು ಸರಬರಾಜು ಮಂತ್ರಿ ಆಗಿದ್ದರು. ನೆಹರು ಮಂತ್ರಿಮಂಡಳಕ್ಕೆ ರಾಜಿನಾಮೆ ಕೊಟ್ಟು ನಂತರ ಅವರು ಭಾರತೀಯ ಜನಸಂಘ ಎಂಬ ಪಕ್ಷವನ್ನು ಸ್ಥಾಪಿಸಿದರು. ಅಂದರೆ ಮೋದಿ ಈಗ ಪ್ರತಿನಿಧಿಸುತ್ತಿರುವ ಭಾರತೀಯ ಜನತಾ ಪಕ್ಷದ ಮಾತೃ ಸಂಸ್ಥೆ. ಅಂದರೆ ತನ್ನ ಪಕ್ಷದ ಮಾತೃಸಂಸ್ಥೆಯ ಸ್ಥಾಪಕನ ಬಗ್ಗೆ ಕನಿಷ್ಠ ತಿಳುವಳಿಕೆಯ ಇಲ್ಲದೆ ಈ ವ್ಯಕ್ತಿ ಅದೇ ಬಿಜೆಪಿಯ ಪ್ರಧಾನಿ ಪಟ್ಟದ ಅಭ್ಯರ್ಥಿ! ಇತಿಹಾಸ ಅರಿಯದವನು ಇತಿಹಾಸ ನಿರ್ಮಿಸಬಲ್ಲನೆ?.

ಸಿಪಿಐ(ಎಂ) ಕಾರ್ಯಕರ್ತರ ಮೇಲೆ ದಾಳಿ ಖಂಡಿಸಿ ಕಾವೂರಿನಲ್ಲಿ ಪ್ರತಿಭಟನೆ:

ಮಂಗಳೂರು ನಗರದ ಕೊಂಚಾಡಿ. ಎಯ್ಯಾಡಿ ಪ್ರದೇಶದಲ್ಲಿ ಕಳೆದ ಮೂರು ದಶಕಗಳಲ್ಲಿ ಜನಪರ ಕೆಲಸಗಳಲ್ಲಿ ತೊಡಗಿ



ಜನಪ್ರಿಯವಾಗಿರುವ ಸಿಪಿಐ(ಎಂ), ಡಿವೈಎಫ್ಐ, ದಲಿತ ಹಕ್ಕುಗಳ ಸಮಿತಿ ಮತ್ತು ಕಟ್ಟಡ ಕಾರ್ಮಿಕ ಸಂಘಟನೆಯ ನಾಯಕರು, ಕಾರ್ಯಕರ್ತರು ಮತ್ತು ಬೆಂಬಲಿಗರ ಮೇಲೆ ಪದೇ ಪದೇ ದಾಳಿಗಳು ನಡೆಯುತ್ತಿರುವುದು ಮತ್ತು ಸುಳ್ಳು ಕೇಸು ದಾಖಲಿಸುವುದು ಮುಂತಾದ ಷಡ್ಯಂತ್ರದ ವಿರುದ್ಧ ನವಂಬರ್ 11 ರಂದು ಕಾವೂರು ಪೋಲೀಸ್ ಠಾಣೆಯ ಎದುರು ಪ್ರತಿಭಟನೆ ನಡೆಸಲಾಯಿತು.

ಸಂಘಟನಾ ಅಶಿಸ್ತುಗಳಿಗಾಗಿ ವಿವಿಧ ಸಂಘಟನೆಯಿಂದ ಹೊರಗೆ ಹಾಕಲ್ಪಟ್ಟ ಸ್ಥಳೀಯ ಅಶೋಕ್ ಕೊಂಚಾಡಿ, ದೇರೆಬೈಲ್ ಮಾಲೆಮಾರಿನ ವಿಷ್ಣುಮೂರ್ತಿ ಭಟ್, ಕುಡುಪುವಿನ ವಿ.ಎನ್.ಪ್ರಕಾಶ್, ಕಾಂಗ್ರೆಸ್ ಬೆಂಬಲಿಗರಾದ ಎಂ.ದೇವದಾಸ್ ಇವರುಗಳು ಕಳೆದ ಎರಡು ವರ್ಷಗಳಿಂದ ಪಿತೂರಿ ನಡೆಸಿ ಕೊಂಚಾಡಿಯ ವಿವಿಧ ಸಂಘಟನೆಗಳ ಕಾರ್ಯಕರ್ತರ ಮೇಲೆ ಆಗೀಗ ತಾವು ದಾಳಿ ಮಾಡಿಸುವುದಲ್ಲದೆ ತಮ್ಮ ಮೇಲೆಯೇ ಸಿಪಿಐ(ಎಂ) ಬೆಂಬಲಿಗರು ದಾಳಿ ಮಾಡಿದ್ದಾರೆ ಎಂಬುದಾಗಿ ಕಾವೂರು ಪೊಲೀಸ್ ಠಾಣೆಯಲ್ಲಿ ಸುಳ್ಳು ದೂರನ್ನು ದಾಖಲಿಸುತ್ತಿದ್ದಾರೆ. ಕಾವೂರು ಠಾಣೆಯವರೂ ಸರಿಯಾದ ತನಿಖೆ ನಡೆಸದೆ ಅಮಾಯಕರಾದ ಕೆಲವರನ್ನು ಮುಖ್ಯವಾಗಿ ಪಕ್ಷದ ಜಿಲ್ಲಾ ಸಮಿತಿ ಸದಸ್ಯ ಕೃಷ್ಣಪ್ಪ ಕೊಂಚಾಡಿ ಅವರನ್ನು ಕ್ರಿಮಿನಲ್ ಪ್ರಕರಣಗಳಲ್ಲಿ ಆಳವಡಿಸಿದ್ದಾರೆ. ಪಕ್ಷದ ಕಾರ್ಯಕರ್ತರ ಮೇಲೆ ದಾಳಿ ಮಾಡಿಸಿದ ಮೇಲಿನ ನಾಲ್ವರಲ್ಲಿ ಸ್ಥಳೀಯನೊಬ್ಬನ ಹೊರತುಪಡಿಸಿ ಉಳಿದ ಮೂವರ ಮೇಲೆ ಪೋಲಿಸರು ದೂರು ದಾಖಲಿಸುತ್ತಿಲ್ಲ. ದುಷ್ಟ ಕೂಟದ ಈ ನಾಲ್ವರು ಸ್ಥಳೀಯ ಬಿಲ್ಡರ್ ಮಾಫಿಯಾದ ಹಾಗೂ ಕಾಂಗ್ರೆಸ್ ಬಿಜೆಪಿ ಪಕ್ಷದ ಆರ್ಥಿಕ ನೆರವು ಪಡೆದು ದಲಿತರೇ ಪ್ರಮುಖವಾಗಿರುವ ಕೊಂಚಾಡಿ ಪ್ರದೇಶದ ಸಿಪಿಐ(ಎಂ) ಬೆಂಬಲಿಗರಿಗೆ ಕಿರುಕುಳ ನೀಡುತ್ತಿದ್ದಾರೆ. ಪಕ್ಷದಿಂದ ಸಂಘಟನೆಗಳಿಂದ ಹೊರ ಹಾಕಲ್ಪಟ್ಟ ದುಷ್ಟ ಕೂಟ ವ್ಯವಸ್ಥಿತವಾಗಿ ಕೊಂಚಾಡಿಯಲ್ಲಿ ಪಕ್ಷವನ್ನೇ ನಿರ್ನಾಮ ಮಾಡುತ್ತೇವೆಂಬ ಹಟತೊಟ್ಟು ನಡೆಸುತ್ತಿರುವ ಷಡ್ಯಂತ್ರವನ್ನು ಬಯಲುಗೊಳಿಸಬೇಕೆಂದು ಸಿಪಿಐ(ಎಂ) ಮಂಗಳೂರು ನಗರ ಸಮಿತಿ ಈ ಬೃಹತ್ ಪ್ರತಿಭಟನಾ ಪ್ರದರ್ಶನವನ್ನು ಹಮ್ಮಿಕೊಂಡಿತ್ತು.

"ಸಿಪಿಐ(ಎಂ) ಪ್ರಗತಿ ಸಹಿಸದವರು ಪಿತೂರಿ ನಡೆಸಿ ಕಮ್ಯೂನಿಸ್ಟ್ ಚಳುವಳಿಯನ್ನು ಹತ್ತಿಕ್ಕುವ ಪ್ರಯತ್ನ ನಡೆಸುತ್ತಿದ್ದಾರೆ. ದೇಶದ ಎಲ್ಲ ಕಡೆಯಲ್ಲೂ ಅಂಥ ಪ್ರಯತ್ನ ಮಾಡಿದವರು ವಿಫಲರಾಗಿದ್ದಾರೆ. ಮಂಗಳೂರಿನಲ್ಲೂ ವಿಫಲರಾಗುತ್ತಾರೆ" ಎಂಬುದಾಗಿ ಪ್ರತಿಭಟನಾಕಾರರನ್ನುದ್ದೇಶಿಸಿ



ಮಾತನಾಡಿದ ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ವಸಂತ ಆಚಾರಿ ಹೇಳಿದರು.

ಪ್ರತಿಭಟನೆಯನ್ನುದ್ದೇಶಿಸಿ ಸಿಪಿಐ(ಎಂ) ದ.ಕ. ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಜೆ.ಬಾಲಕೃಷ್ಣ ಶೆಟ್ಟಿ, ಕೃಷ್ಣಪ್ಪ ಸಾಲ್ಯಾನ್, ಸಿಪಿಐ(ಎಂ) ಮಂಗಳೂರು ನಗರ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಜಿಲ್ಲಾ ಸಮಿತಿ ಸದಸ್ಯರಾದ ಜಯಂತಿ ಬಿ.ಶೆಟ್ಟಿ, ಕಾರ್ಪರೇಟರ್ ಹಾಗೂ ಡಿವೈಎಫ್ಐ ಜಿಲ್ಲಾ ಕಾರ್ಯದರ್ಶಿ ದಯಾನಂದ ಶೆಟ್ಟಿ ಮಾತನಾಡಿದರು. ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯ ಕೃಷ್ಣಪ್ಪ ಕೊಂಚಾಡಿ, ದಲಿತ ಹಕ್ಕುಗಳ ಸಮಿತಿ ಸಂಚಾಲಕ ಲಿಂಗಪ್ಪ ನಂತೂರು, ಡಿವೈಎಫ್ಐ ಜಿಲ್ಲಾಧ್ಯಕ್ಷ ಮುನೀರ್ ಕಾಟಿಪಳ್ಳ, ಸಿಪಿಐ(ಎಂ) ನಗರ ಸಮಿತಿ ಸದಸ್ಯರಾದ ಭಾರತಿ ಬೋಳಾರ, ಶಶಿಧರ ಶಕ್ತಿನಗರ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ನಿರಪರಾಧಿಗಳ ಮೇಲಿನ ಪ್ರಕರಣಗಳನ್ನು ಹಿಂತೆಗೆಯಬೇಕು. ಕಳೆದ ಎರಡು ವರ್ಷಗಳಿಂದ ನಡೆದ ಪ್ರಕರಣಗಳ ತನಿಖೆ ನಡೆಸಬೇಕು. ಕೌಂಟ-ರ್ ಕೇಸು ಮುಖಾಂತರ ಸಂಘಟನೆಗಳನ್ನು ಬಗ್ಗು ಬಡಿಯುವ ಪ್ರಯತ್ನ ನಿಲ್ಲಬೇಕು. ಕೊಂಚಾಡಿ ಯೆಯ್ಯಾಡಿ ಪ್ರದೇಶದ ಹೊರಗಿನಿಂದ ಬಂದು ಬಡ ಜನರ ಬದುಕಿಗೆ ಕಂಟಕವೊಡ್ಡಿ, 26 ಮಂದಿ ಅಮಾಯಕರ ಮೇಲೆ ಪ್ರಕರಣ ದಾಖಲಿಸಲು ಕಾರಣರಾದ ವಿಷ್ಣಮೂರ್ತಿ ಭಟ್, ಎಂ.ದೇವದಾಸ್ ಮತ್ತು ವಿ.ಎನ್.ಪ್ರಕಾಶ್ ರವರನ್ನು ಒಳಗೊಂಡು ಸಮಗ್ರ ತನಿಖೆ ನಡೆಸಬೇಕೆಂದು ಪ್ರತಿಭಟನೆಯಲ್ಲಿ ಒತ್ತಾಯಿಸಲಾಯಿತು.

400 ಕ್ಕೂ ಮೀರಿದ ಜನರ ಮೆರವಣಿಗೆಯು ಕಾವೂರು ಜಂಕ್ಷನ್‌ನಿಂದ ಹೊರಟು ಕಾವೂರು ಪೋಲೀಸ್ ಠಾಣೆಯ ಮುಂಭಾಗದಲ್ಲಿ ಪ್ರತಿಭಟನಾ ಸಭೆ ನಡೆಸಲಾಯಿತು. ಉನ್ನತ ಪೋಲಿಸ್ ಅಧಿಕಾರಿಗಳಿಗೆ ಮನವಿಯನ್ನು ಸ್ಥಳೀಯ ಠಾಣಾಧಿಕಾರಿಗಳ ಮೂಲಕ ಸಲ್ಲಿಸಲಾಯಿತು.

ಕಡಲತಡಿ

ವಾ. ಉ.

ಮಂಗಳೂರಿನಲ್ಲಿ ನಿವೇಶನ ರಹಿತರ ಧರಣಿ ಸತ್ಯಾಗ್ರಹ:

ನಿವೇಶನ ರಹಿತರಿಗೆ ನಿವೇಶನ, ವಾಸವಾಗಿರುವ ಸರ್ಕಾರಿ ಜಮೀನಿಗೆ ಹಕ್ಕುಪತ್ರ, ಮಾಡಿದ್ದ ಕೃಷಿ ಭೂಮಿಯ ಅಕ್ರಮ-ಸಕ್ರಮೀಕರಣ, ವಾಸವಿರುವ ಅರಣ್ಯ ಭೂಮಿಯ ಹಕ್ಕು ಇತ್ಯಾದಿ ಹಲವಾರು ರೈತ ವಿಭಾಗದ ಬೇಡಿಕೆಗಳನ್ನು ಮುಂದಿಟ್ಟು ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ರಾಜ್ಯಾದ್ಯಂತ ಜಿಲ್ಲಾ ಕೇಂದ್ರಗಳಲ್ಲಿ ಧರಣಿ ಸತ್ಯಾಗ್ರಹವನ್ನು ನಡೆಸಬೇಕೆಂಬ ಕಾರ್ಯಕ್ರಮದ ಭಾಗವಾಗಿ ಮಂಗಳೂರಿನಲ್ಲಿ ಜಿಲ್ಲಾಧಿಕಾರಿ ಕಚೇರಿ ಎದುರು ನವಂಬರ್ 7 ರಂದು ಧರಣಿ ಸತ್ಯಾಗ್ರಹ ನಡೆಸಲಾಯಿತು.

ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷರಾದ ಕೆ.ಆರ್.ಶ್ರೀಯಾನ್ ಸತ್ಯಾಗ್ರಹವನ್ನು ಉದ್ದೇಶಿಸಿ ಮಾತನಾಡಿದರು. ದ.ಕ.ಜಿಲ್ಲೆಯಲ್ಲಿ ನಿವೇಶನ ರಹಿತರ ಅರ್ಜಿಗಳು ಸಾವಿರಗಟ್ಟಲೆಯಲ್ಲಿ ಇದ್ದರೂ, ಸರಕಾರ ಜಿಲ್ಲಾಡಳಿತದಿಂದ ಗುರುತಿಸಿ ಕಾದಿರಿಸಿದ್ದು ಕೇವಲ 1256 ಎಕ್ರೆ ಜಮೀನು ಮಾತ್ರ, ಕಳೆದ 15 ವರ್ಷಗಳಿಂದಲೂ ನಿವೇಶನ ರಹಿತರಿಗೆ ನಿವೇಶನ ನೀಡುವ ಕಾರ್ಯಕ್ರಮವನ್ನು ಜಿಲ್ಲೆಯಲ್ಲಿ ನಡೆಸಿಲ್ಲ. ವಿಶೇಷ ಆರ್ಥಿಕ ವಲಯ, ಸ್ಥಾವರಗಳು, ಯೋಜನೆಗಳಿಗಾಗಿ ರೈತರಿಂದ ಭೂಮಿ ಅಗ್ಗದಲ್ಲಿ ಪಡೆದು ನೀಡಲಾಗುತ್ತಿದೆ; ಬಡವರಿಗೆ ನೀಡಲು ಸರಕಾರದ ಬಳಿ ಭೂಮಿ ಇಲ್ಲ ಎಂಬುದಾಗಿ ಅವರು ಟೀಕಿಸಿದರು.

ಪ್ರತಿಭಟನಾ ಸತ್ಯಾಗ್ರಹವನ್ನುದ್ದೇಶಿಸಿ ಪ್ರಾಂತ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಯಾದವ ಶೆಟ್ಟಿ, ಉಪಾಧ್ಯಕ್ಷರುಗಳಾದ ಕೃಷ್ಣಪ್ಪ ಸಾಲ್ಯಾನ್, ವಾಸುದೇವ ಉಚ್ಚಿಲ, ಕೋಶಾಧಿಕಾರಿ
ಬಿ.ನಾರಾಯಣ, ದಲಿತ ಹಕ್ಕುಗಳ ಸಮಿ
ಲಿಂಗಪ್ಪ ನಂತೂರು ಮಾತನಾ
ಬಳಿಕ ಜಿಲ್ಲಾಧಿಕಾರಿಗಳಿಗೆ ಮನವಿ
ಸಲ್ಲಿಸಲಾಯಿತು.

**ಕೃಷಿ ನೀತಿ ಭೂಸುಧಾರಣಾ ಕಾಯ್ದೆ ತಿ
ವಿರೋಧಿಸಿ ಉಡುಪಿಯಲ್ಲಿ ಪ್ರತಿಭಟನೆ:**

ಕರ್ನಾಟಕ ಪ್ರಾಂತ ರೈತ ಸಂಘದ ಕುಂದ
ತಾಲೂಕು ಸಮಿತಿ ವತಿಯಿಂದ ಉ
ಜಿಲ್ಲಾಧಿಕಾರಿ ಕಚೇರಿ ಎದುರು ನವಂಬ
ರಂದು ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆಯನ್ನು ಉದ್ದೇಶಿಸಿ ಕರ್ನಾ
ಪ್ರಾಂತ ರೈತ ಸಂಘದ ರಾಜ್ಯ ಸಮಿ
ಧ್ಯಕ್ಷರಾದ ಮಾರುತಿ ಮಾನ್ಪಡೆ ಮಾತನಾಡಿ
ರಾಜ್ಯ ಸರಕಾರ ಎಪಿಎಂಸಿ ಕಾಯಿದೆಗೆ ತಿದ
ತರುವ ಮೂಲಕ ಇಲ್ಲಿನ ವ್ಯಾಪಾರದಲ್ಲಿ ವಿದ
ಬಂಡವಾಳಶಾಹಿಗಳಿಗೆ ಅವಕಾಶ ಕಲ್ಪಿಸ
ಇದರಿಂದ ರೈತರ ವ್ಯಾಪಾರ, ರೈಸ್ ಮಿಲ
ಮುಚ್ಚಿ ಹೋಗಲಿವೆ. ಆದುದರಿಂದ ಯಾ
ಕಾರಣಕ್ಕೂ ಈ ಕಾಯಿದೆಗೆ ತಿದ್ದುಪಡಿ ತರಬಾ
ಎಂದು ಅವರು ಒತ್ತಾಯಿಸಿದರು.

ಕೇಂದ್ರ ಸರಕಾರವು ಕೃಷಿ ನೀತಿಗೆ ತಿದ
ತರುವ ಮೂಲಕ ಹಾಗೂ ರಾಜ್ಯ ಸರಕಾ
ಭೂಸುಧಾರಣಾ ಕಾಯಿದೆಗೆ ತಿದ್ದುಪಡಿ ತ
ಮೂಲಕ ರೈತರ ಕೃಷಿ ಭೂಮಿ
ಕಂಪೆನಿಗಳಿಗೆ ನೀಡಲು ಹು
ನಡೆಸುತ್ತಿದೆ ಎಂಬುದಾಗಿ ಮಾ
ಮಾನ್ಪಡೆಯವರು ಸರಕಾ
ಧೋರಣೆಯನ್ನು ಖಂಡಿಸಿದರು.
ವಿವಿಧ ಬೇಡಿಕೆಗಳ ಮನವಿ
ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಯಿತು.

**ಸೌಜನ್ಯ ಪ್ರಕರಣ ನಿಲ್ಲದ ಪ್ರತಿಭಟನೆ
ಮಂಗಳೂರಿನಲ್ಲಿ ಎಸ್‌ಎಫ್ಐ ನೇತೃ
ತರಗತಿ ಬಹಿಷ್ಕಾರ:**

ಧರ್ಮಸ್ಥಳದ ವಿದ್ಯಾರ್ಥಿನಿ ಸೌಜನ್ಯ ಪ
ಅತ್ಯಾಚಾರ ಮತ್ತು ಕೊಲೆ ಪ್ರಕರಣ
ರಾಜ್ಯ ಸರಕಾರ ಸಿಬಿಐ ತನಿಖೆಗೆ ಒಪ್ಪಿಸಿದ್ದ
ಕಳೆದ 30 ವರ್ಷಗಳಲ್ಲಿ ಧರ್ಮಸ್ಥಳ ಗ
ವ್ಯಾಪ್ತಿಯಲ್ಲಿ ನಡೆದ 460 ಅಸಹಜ ಸಾ
ಪ್ರಕರಣಗಳೆಲ್ಲವನ್ನೂ ಸಿಬಿಐ ತನಿಖೆಗೆ ಒಪ್ಪಿಸಬ
ಎಂದು ಆಗ್ರಹಿಸಿ ಎಸ್‌ಎಫ್ಐ ಸದಸ್ಯರು ತ
ಬಹಿಷ್ಕರಿಸಿ ಮಂಗಳೂರಿನ ಜಿಲ್ಲಾಧಿಕಾರಿ ಕ
ಎದುರು ನವಂಬರ್ 7 ರಂದು ಪ್ರತಿಭ
ನಡೆಸಿದರು.

ಎಸ್‌ಎಫ್ಐ ರಾಜ್ಯ ಸಮಿತಿ ಜತೆ ಕಾರ
ಜೀವನ್ ರಾಜ್ ಕುತ್ತಾರ್, ಜಿಲ್ಲಾ ಘಟಕ
ಧ್ಯಕ್ಷ ನಿತಿನ್ ಕುತ್ತಾರ್, ಡಿವೈಎಫ್ಐ ಮಂಗಳ
ನಗರ ಸಮಿತಿ ಅಧ್ಯಕ್ಷ ಬಿ.ಕೆ.ಇಮ್ತಿಯಾ
ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರ

500 ಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು
ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಎಸ್‌ಎಫ್
ಹಂಝ ಕಿನ್ಯ, ಮಾಧುರಿ ಬೋಳಾರ್ ಮತ್ತಿತ
ಪ್ರತಿಭಟನೆಯಲ್ಲಿ ಉಪಸ್ಥಿತರಿದ್ದರು.

ಬೆಳ್ತಂಗಡಿಯಲ್ಲಿ ತರಗತಿ ಬಹಿಷ್ಕರಿಸಿ ಪ್ರತಿಭಟನ

ನವಂಬರ್ 8 ರಂದು ಎಸ್‌ಎಫ
ತಾಲೂಕು ಸಮಿತಿ ನೇತೃತ್ವದಲ್ಲಿ ಬೆಳ್ತಂಗಡಿಯ
ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ತಾಲೂ
ಕಚೇರಿ ಎದುರುಗಡೆ ಪ್ರತಿಭಟನೆ ನಡೆಸಿದರು.

ಪ್ರತಿಭಟನಾಕಾರರನ್ನುದ್ದೇಶಿಸಿ ಎಸ್‌ಎಫ
ರಾಜ್ಯ ಜತೆ ಕಾರ್ಯದರ್ಶಿ ಜೀವನ್ ರಾಜ್ ಕುತ್ತಾ
ದ.ಕ.ಜಿಲ್ಲಾ ಘಟಕದ ಅಧ್ಯಕ್ಷ ನಿತಿನ್ ಕುತ್ತಾ
ಬೆಳ್ತಂಗಡಿ ತಾಲೂಕು ಸಮಿತಿ ಅಧ್ಯಕ್ಷ ಮುಷ್ತರ
ಮಾತನಾಡಿದರು.

ವಿದ್ಯಾರ್ಥಿಗಳು ಸಂತೆಕಟ್ಟೆ ಮೈದಾನದಿ
ತಾಲೂಕು ಕಚೇರಿ ವರೆಗೆ ಮೆರವಣಿಗೆ ನಡೆಸಿದ

ಜನಶಕ್ತಿ
ಕನ್ನಡ ವಾರಪತ್ರಿಕೆ

ಏನು ಹೇಳಿದರೇನು, ನೆತ್ತರ ಕಲೆ ಹೋಗದು

ಕೋಮುಧ್ರುವೀಕರಣವನ್ನು ತೀಕ್ಷ್ಣಗೊಳಿಸುವ ಗುರಿಸಾಧನೆಗೆ ಆರೆಸ್ಸೆಸ್ ದೊಡ್ಡ ಪ್ರಮಾಣದಲ್ಲಿ ಇತಿಹಾಸವನ್ನು ಮತ್ತೆ ಬರೆಯುವ ಕೆಲಸವನ್ನು ಮಾಡಬೇಕಾಗಿದೆ. ಆದ್ದರಿಂದ 'ಇತಿಹಾಸ ನಿರ್ಮಿಸುವ' ತರಾತುರಿಯಲ್ಲಿರುವಂತೆ ಕಾಣುವ ಮೋದಿ. ಯಾವುದೇ ಮುಲಾಜಿಲ್ಲದೆ ಇತಿಹಾಸವನ್ನು ವಿರೂಪಗೊಳಿಸಲು ಮುಂದಾಗಿದ್ದಾರೆ. ಅತ್ತ ಅಡ್ವಾಣಿಯವರೂ ಇದರಲ್ಲಿ ಹಿಂದೆ ಬಿದ್ದಿಲ್ಲ. ಆದರೆ ನಮ್ಮ ಜನತೆಗಾಗಿ ಒಂದು ಉತ್ತಮ ಭಾರತವನ್ನು ನಿರ್ಮಿಸುವ ನಿರ್ಣಾಯಕ ಪ್ರಶ್ನೆಯ ಮೇಲೆ ಮಾತ್ರ ಆರೆಸ್ಸೆಸ್/ಬಿಜೆಪಿಯದ್ದು ದಿವ್ಯ ಮೌನ.

ಸೀತಾರಾಂ ಯೆಚೂರಿ



ವ್ಯಂಗ್ಯಚಿತ್ರ ಕೃಪೆ: ಮಂಜುಲ್, ಡಿಎನ್ಎ

2014ರ ಸಾರ್ವತ್ರಿಕ ಚುನಾವಣೆಗಳು ಸಮೀಪಿಸುತ್ತಿರುವಂತೆ ನಮ್ಮ ಇತಿಹಾಸದ ಒಂದು ವಿಲಕ್ಷಣ ಪುನರ್ರಚನೆಯನ್ನು ನಮ್ಮ ಮೇಲೆ ಸುರಿಯಲಾಗುತ್ತಿದೆ. ಮಾನವರು ಇತಿಹಾಸ ನಿರ್ಮಿಸುತ್ತಾರೆ. ಆದರೆ ತಾವೇ ಆರಿಸಿದ ಸನ್ನಿವೇಶಗಳಲ್ಲಿ ಅಲ್ಲ ಎಂಬುದು ಕಾರ್ಲ್ಸ್ ಮಾರ್ಕ್ಸ್‌ರವರ ಒಂದು ಪ್ರಸಿದ್ಧ ಮಾತು.

ನಾವು ಸ್ವತಂತ್ರರಾಗಿ ನಮ್ಮ ಗಣತಂತ್ರದ ಸಂವಿಧಾನವನ್ನು ಅಂಗೀಕರಿಸಿದಾಗಿನ ಸನ್ನಿವೇಶ ಆರೆಸ್ಸೆಸ್‌ಗೆ' ಅನುಕೂಲವಾಗಿರಲಿಲ್ಲ, ನಂತರವೂ ಅನುಕೂಲಕರವಾಗಲಿಲ್ಲವಾದ್ದರಿಂದ ಅದು ಭಾರತವನ್ನು ಒಂದು ಉನ್ಮತ್ತ ಅಸಹಿಷ್ಣು ಫ್ಯಾಸಿಸ್ಟ್ ಮಾದರಿಯ 'ಹಿಂದೂರಾಷ್ಟ್ರ'ವಾಗಿ ಪರಿವರ್ತಿಸುವ ತನ್ನ ಯೋಜನೆಗೆ ಅನುಕೂಲಕರವಾಗಬಹುದಾದ ಸನ್ನಿವೇಶಗಳನ್ನು ಸೃಷ್ಟಿಸಲು ಕಾಲ್ಪನಿಕ ಸನ್ನಿವೇಶಗಳನ್ನು ಸೃಷ್ಟಿಸುವ ಪ್ರಯತ್ನವನ್ನು ನಡೆಸಿಕೊಂಡೇ ಬಂದಿದೆ.

ಇಂತಹ ಮಾಯೆಯ ಸನ್ನಿವೇಶಗಳನ್ನು ನಮ್ಮ ಸಮ್ಮಿಶ್ರ ನಾಗರಿಕತೆಯ ವಿಕಾಸದ ಇತಿಹಾಸವನ್ನು ವಿಕೃತಗೊಳಿಸುವ ಮೂಲಕ ಮಾತ್ರವೇ ನಿರ್ಮಿಸಲು ಸಾಧ್ಯ. ಹಾಗೆ ಮಾಡಿದರೆ ಮಾತ್ರವೇ ಸಾವಿರ-ಸಾವಿರ ವರ್ಷಗಳ ಭಾರತೀಯ ಇತಿಹಾಸವನ್ನು ಹಿಂದೂಗಳ, ಮತ್ತು ಕೇವಲ ಹಿಂದೂಗಳ ಅಖಂಡ ವೈಭವೀಕರಣದ ಯೋಜನೆಯಾಗಿ ಪ್ರಸ್ತುತ ಪಡಿಸಲು ಸಾಧ್ಯ. ಇದು, ಜಾತ್ಯಾತೀತ ಪ್ರಜಾಸತ್ತಾತ್ಮಕ ಭಾರತವನ್ನು ಅವರ ಕಣ್ಣೋಟದ 'ಹಿಂದೂರಾಷ್ಟ್ರ'ವಾಗಿ ರೂಪಾಂತರಿಸುವ ಅವರ ಸೈದ್ಧಾಂತಿಕ ಬುನಾದಿಯ ಹೂರಣ.

ಸ್ವಾತಂತ್ರ್ಯ ಮಹಾಸಂಗ್ರಾಮದಲ್ಲಿ ನಾಪತ್ತೆ

ಭಾರತೀಯ ಇತಿಹಾಸವನ್ನು ವಿರೂಪಗೊಳಿಸುವ ಇಂತಹ ಯೋಜನೆಯಲ್ಲಿ ಆರೆಸ್ಸೆಸ್ ದಾಖಲಾಗಿರುವ ಇತಿಹಾಸದ ಅನೇಕ ಪುರಾವೆಗಳನ್ನು ಎದುರಿಸಲೇ ಬೇಕಾಗಿ ಬಂದಿದೆ. ಅವುಗಳಲ್ಲಿ ಒಂದಂತೂ ಅದು ಯಾವ ರೀತಿಯಲ್ಲೂ ಸಮರ್ಥಿಸಿಕೊಳ್ಳಲಾಗದಂತಹ ಸಂಗತಿ-ಅದೆಂದರೆ, ಭಾರತೀಯ ಜನತೆಯ ಸ್ವಾತಂತ್ರ್ಯದ ಮಹಾಸಂಗ್ರಾಮದಲ್ಲಿ ಅದರ ಪತ್ತೆಯೇ ಇಲ್ಲದಿರುವುದು. ಒಂದೊಮ್ಮೆ ಅವರ ಸಿದ್ಧಾಂತಿಯಾಗಿದ್ದ ನಾನಾಜಿ ದೇಶಮುಖ್ ಕೂಡ ಆರೆಸ್ಸೆಸ್ ಸ್ವಾತಂತ್ರ್ಯ ಹೋರಾಟದಿಂದ ದೂರವುಳಿಯಿತು ಎಂದು ತಮ್ಮ ಒಂದು ಪುಸ್ತಕದಲ್ಲಿ ಟಿಪ್ಪಣಿ ಮಾಡಿದ್ದಾರೆ. ವಾಸ್ತವವಾಗಿ ಹಿಂದೂ ಕೋಮುವಾದಿ ಭಾವೋನ್ಮಾದವನ್ನು ಬಡಿದೆಬ್ಬಿಸುವ ಚಟುವಟಿಕೆಗಳು ಮುಸ್ಲಿಂ ಲೀಗ್ ಬಡಿದೆಬ್ಬಿಸುತ್ತಿದ್ದ ಕೋಮು ಧ್ರುವೀಕರಣದ ಸಮರ್ಥ ಪ್ರತಿಬಿಂಬವಾಗಿತ್ತು. ಎರಡೂ ಬ್ರಿಟಿಶರ 'ಒಡೆದು ಆಳುವ' ಧೋರಣೆಗೆ ತಮ್ಮದೇ ಕೊಡುಗೆ ನೀಡಿದ್ದವು.

ಸ್ವಾತಂತ್ರ್ಯ ಹೋರಾಟದೊಂದಿಗೆ ತನಗೂ ಇದೆ ಎಂದು ಆರೆಸ್ಸೆಸ್ ಹೇಳಿಕೊಳ್ಳಬಹುದಾದ ಏಕೈಕ ಕೊಂಡಿಯೆಂದರೆ ವಿ.ಡಿ.ಸಾವರ್ಕರ್. ಹಿಂದುತ್ವ ಪ್ರವೃತ್ತಿಗಳ ಬಗ್ಗೆ ಸಹಾನುಭೂತಿ ಹೊಂದಿರುವ ಪ್ರಸಿದ್ಧ ಇತಿಹಾಸಕಾರ ಆರ್.ಸಿ.ಮುಜುಂದಾರ್ ತಮ್ಮ ಕೃತಿ 'ಪೀನಲ್ ಸೆಟ್ಲ್‌ಮೆಂಟ್ಸ್ ಇನ್ ಅಂಡಮಾನ್ಸ್' ನಲ್ಲಿ ಸಾವರ್ಕರ್ ಕರಿನೀರಿನ ಶಿಕ್ಷೆಯಿಂದ ಬಿಡುಗಡೆ ಪಡೆಯಲು ಏನೆಲ್ಲ ಮಾಡಿದರು ಎಂಬುದರ ದಸ್ತಾವೇಜುಗಳನ್ನು ಒದಗಿಸಿದ್ದಾರೆ. ಭಾರತದಲ್ಲಿ ಎರಡು ರಾಷ್ಟ್ರಗಳಿವೆ-ಹಿಂದೂ ಮತ್ತು ಇಸ್ಲಾಮಿ-ಎಂದು ಮೊತ್ತಮೊದಲ ಬಾರಿಗೆ ಪ್ರತಿಪಾದಿಸಿದವರು ಇದೇ ಸಾವರ್ಕರ್-ಹಿಂದೂ ಮಹಾಸಭಾದ ತನ್ನ ಅಧ್ಯಕ್ಷೀಯ ಭಾಷಣದಲ್ಲಿ. ಇದು ಮುಂದೆ ಭಾರತದ ವಿಭಜನೆಗೆ ಹಾದಿ ಮಾಡಿಕೊಟ್ಟ, ಪ್ರಕ್ರಿಯೆಯನ್ನು ಆರಂಭಿಸಿದ ಎರಡು ರಾಷ್ಟ್ರಗಳ ಸಿದ್ಧಾಂತವನ್ನು ಮಹಮ್ಮದ್ ಅಲಿ ಜಿನ್ನಾ ಪ್ರತಿಪಾದಿಸುವುದಕ್ಕಿಂತ ಪೂರ್ಣವಾಗಿ ಎರಡು ವರ್ಷಗಳ ಮೊದಲು! ನಿಜ, ಈ ಪ್ರಕ್ರಿಯೆಗೆ ನಂತರ ಬ್ರಿಟಿಶರ ಸಮರ್ಥ ನೆರವು ಮತ್ತು ಕುಮ್ಮಕ್ಕು ಇತ್ತು. 'ಹಿಂದುತ್ವ' ಎಂಬ ಪದವನ್ನು ಸೃಷ್ಟಿಸಿದವರು ಸಾವರ್ಕರ್ ಅವರೇ. ಅದಕ್ಕೂ ಹಿಂದೂ ಧರ್ಮಕ್ಕೂ ಏನೂ ಸಂಬಂಧವಿಲ್ಲ ಎಂದೂ ಅವರು ಹೇಳಿದ್ದರು. ಹಿಂದೂ ರಾಷ್ಟ್ರದ ನಿರ್ಮಾಣಕ್ಕೆ 'ಮಿಲಿಟರಿಯ ಹಿಂದೂಕರಣ ಮಾಡಿ, ಹಿಂದೂತನದ ಮಿಲಿಟರೀಕರಣ ಮಾಡಿ' ಎಂಬ ಘೋಷಣೆಯನ್ನು ಅವರು ಕೊಟ್ಟರು. ಇದರ ಸ್ಫೂರ್ತಿಯನ್ನು ಇಂದೂ ಕೂಡ, ಇತ್ತೀಚಿನ ಹಿಂದುತ್ವ ಭಯೋತ್ಪಾದನೆಯ ಘಟನೆಗಳಲ್ಲಿ ಕಾಣಬಹುದು.

ಈ ಗುರಿಸಾಧನೆಯಲ್ಲಿ, ಅದರಲ್ಲೂ ಕೋಮುಧ್ರುವೀಕರಣವನ್ನು ತೀಕ್ಷ್ಣಗೊಳಿಸಬೇಕಾದರೆ ದೊಡ್ಡ ಪ್ರಮಾಣದಲ್ಲಿ ಇತಿಹಾಸವನ್ನು ಮತ್ತೆ ಬರೆಯುವ ಕೆಲಸವನ್ನು ಅದಕ್ಕೆ ಮಾಡಬೇಕಾಗಿದೆ. ಒಬ್ಬ ಮಾಜಿ ಬಿಜೆಪಿ ಅಧ್ಯಕ್ಷರು ತಾವು ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೆ ಪಠ್ಯಪುಸ್ತಕದಲ್ಲಿ ಮಾಡಬೇಕೆಂದಿರುವ ಬದಲಾವಣೆಗಳ ಬಗ್ಗೆ ಮಾತಾಡಿದರು ಎಂದು ಇತ್ತೀಚೆಗೆ ಮಾಧ್ಯಮಗಳಲ್ಲಿ ವರದಿಯಾಗಿತ್ತು(ಹಿಂದುಸ್ತಾನ್ ಟೈಮ್ಸ್, ಜೂನ್ 24, 2013). "ನಾವು ಈ ಹಿಂದೆಯೂ ಈ ಪ್ರಯತ್ನ ಮಾಡಿದ್ದೇವೆ. ಮತ್ತೆ ಮಾಡುತ್ತೇವೆ" ಎಂದವರು ಹೇಳಿದರಂತೆ. "ದೇಶ 370ನೇ (ಜಮ್ಮು-ಕಾಶ್ಮೀರಕ್ಕೆ ಸಂಬಂಧಪಟ್ಟ) ಕಲಮನ್ನು ರದ್ದು ಮಾಡುವ ದಿನಕ್ಕಾಗಿ ಕಾಯುತ್ತಿದೆ" ಎಂದು ಅದೇ ದಿನ ಅಡ್ವಾಣಿಯವರೂ ಹೇಳಿದರು.

ಇತಿಹಾಸ 'ಬರೆಯುವ' ತರಾತುರಿಯಲ್ಲಿ

ಸರ್ದಾರ್ ಪಟೇಲರನ್ನು ತಮ್ಮವರನ್ನಾಗಿ ಮಾಡಿಕೊಳ್ಳುವ ಅವರ ಸದ್ಯದ ಪ್ರಯತ್ನಗಳು 'ಹಿಂದೂರಾಷ್ಟ್ರ'ದ ವೈಭವೀಕರಣದ ಅಖಂಡ ದಾಖಲೆಯೊಳಗೆ ತುರುಕಲು ಭಾರತೀಯ ಇತಿಹಾಸವನ್ನು ಮತ್ತೆ ಬರೆಯುವ ಒಟ್ಟಾರೆ ಪ್ರಯತ್ನಗಳ ಒಂದು ಭಾಗವೇ ಆಗಿದೆ. ಮಹಾತ್ಮ ಗಾಂಧಿಯವರ ಹತ್ಯೆಯನ್ನು ನಂತರ ಆರೆಸ್ಸೆಸ್ ಮೇಲೆ ನಿಷೇಧ ಪ್ರಕಟಿಸುವಾಗ ಸರ್ದಾರ್ ಪಟೇಲ್ ಸಿದ್ಧಪಡಿಸಿದ ಪ್ರಕಟಣೆಯ ಬಗ್ಗೆ ಈಗಾಗಲೇ ಈ ಅಂಕಣದಲ್ಲಿ ಹೇಳಲಾಗಿದೆ. ಸರ್ದಾರ್ ಪಟೇಲ್ ಆರೆಸ್ಸೆಸ್‌ನ ಕಣ್ಣೋಟಕ್ಕೆ ಸಂಪೂರ್ಣ ವಿರುದ್ಧವಾಗಿದ್ದರು ಎಂಬುದನ್ನು ಇದು ತೋರಿಸುತ್ತದೆ.

ಆದರೂ, ಬಿಜೆಪಿಯ ಪ್ರಧಾನಿ ಪಟ್ಟಾಕಾಂಕ್ಷಿ 'ಇತಿಹಾಸ ನಿರ್ಮಿಸುವ' ತರಾತುರಿಯಲ್ಲಿರುವಂತೆ ಕಾಣುತ್ತದೆ. ಆತ ಒಂದು ಮಾಯಾ ಸನ್ನಿವೇಶವನ್ನು ನಿರ್ಮಿಸಲಿಕ್ಕಾಗಿ ಯಾವುದೇ ಮುಲಾಜಿಲ್ಲದೆ ಇತಿಹಾಸವನ್ನು ವಿರೂಪಗೊಳಿಸಲು ಮುಂದಾಗಿದ್ದಾರೆ. ತಾನು ಸರ್ದಾರ್ ಪಟೇಲರ ಪಟ್ಟಶಿಷ್ಯ ಎಂದು ಬಿಂಬಿಸುವ ಪ್ರಯತ್ನ ನಡೆಸಿರುವುದಲ್ಲದೆ, ಈಗ ಪಾಕಿಸ್ತಾನದ ಭಾಗವಾಗಿರುವ ತಕ್ಷಶಿಲ ಬಿಹಾರದಲ್ಲಿದೆ ಎಂದು ಪಾಟ್ನಾದ ಒಂದು ರ್‍ಯಾಲಿಯಲ್ಲಿ ಹೇಳಿದರು. ಅಲೆಕ್ಸಾಂಡರ್ ಸತ್ತದ್ದು ಗಂಗಾ ತೀರದಲ್ಲಿ ಎಂದೂ ಹೇಳಿಕೊಂಡರು.ಎಂತಹ ವಿಸ್ಮಯಕಾರಿ ಹೇಳಿಕೆ!

ನಂತರ ಒಂದು ಸಂದರ್ಶನದಲ್ಲಿ, ನೆಹರೂರವರು ಸರ್ದಾರ್ ಪಟೇಲರೊಂದಿಗೆ ಹೊಂದಿದ್ದ ರಾಜಕೀಯ ಭಿನ್ನಾಭಿಪ್ರಾಯಗಳು ಎಷ್ಟೊಂದು ಆಳವಾಗಿದ್ದವೆಂದರೆ ಸರ್ದಾರ್ ಪಟೇಲರ ಅಂತಿಮ ಸಂಸ್ಕಾರದಲ್ಲಿ ನೆಹರೂ ಭಾಗವಹಿಸಲೇ ಇಲ್ಲ ಎಂದೂ ಅವರು ಹೇಳಿದರು. ನಂತರ ಅವರು ಇದು ಸುಳ್ಳೆಂದು ಒಪ್ಪಿಕೊಳ್ಳಬೇಕಾಗಿ ಬಂತು. ಮತ್ತೊಮ್ಮೆ ಆತ ಇಂತಹ ಕ್ಷಮೆ ಕೋರಿಕೆ ಮಾಡಬೇಕಾಗಿ ಬಂತು. ಏಕೆಂದರೆ ಶ್ಯಾಮಪ್ರಸಾದ್ ಮುಖರ್ಜಿ ನಿಜವಾಗಿ ಸಾಯುವ ಎರಡು ದಶಕಗಳ ಮೊದಲೇ ಸತ್ತರು ಎಂದೂ, ಅವರು ಗುಜರಾತಿನ ಹೆಮ್ಮೆಯ ಪುತ್ರ ಎಂದೂ ಹೇಳಿದ ಗಂಭೀರ ಚಾರಿತ್ರಿಕ ವಿರೂಪಕ್ಕಾಗಿ ಆ ಕ್ಷಮೆ.

ಅಡ್ವಾಣಿಯೂ ಹಿಂದೆ ಬಿದ್ದಿಲ್ಲ

ಎಲ್.ಕೆ.ಅಡ್ವಾಣಿಯವರೂ ಇತಿಹಾಸದ ಈ ವಿರೂಪೀಕರಣದಲ್ಲಿ ಹಿಂದೆ ಬಿದ್ದಿಲ್ಲ. ಹೈದರಾಬಾದ್ ಸಂಸ್ಥಾನದಲ್ಲಿ ಪೋಲೀಸ್ ಕಾರ್ಯಾಚರಣೆ-ಯ ಮೇಲಿನ ಚರ್ಚೆಯಲ್ಲಿ ನೆಹರೂರವರು ಪಟೇಲರನ್ನು 'ಕೋಮುವಾದಿ' ಎಂದು ಕರೆದರು ಎಂದು ಎಂಕೆಕೆ ನಾಯರ್ ಎಂಬಾತನೊಬ್ಬ ತನ್ನ ಪುಸ್ತಕದಲ್ಲಿ ಹೇಳಿದ್ದಾನೆ ಎಂದರು. ಇಂತಹ ಸಂಪುಟ ಸಭೆ ನಡೆದದ್ದು ಎಪ್ರಿಲ್ 1948ರಲ್ಲಿ. ಶ್ರೀಯುತ ಎಂಕೆಕೆ ನಾಯರ್ ಐಎಎಸ್ ಸೇರಿದ್ದು 1949ರಲ್ಲಷ್ಟೇ.

ಅಷ್ಟೇ ಅಲ್ಲ, ಆಗ ಭಾರತೀಯ ಸೇನಾಪಡೆಗಳ ಮುಖ್ಯಸ್ಥ ಸರ್ ರಾಯ್ ಬುಖರ್ ಪಾಕಿಸ್ತಾನದ ಸೇನಾ ಮುಖ್ಯಸ್ಥನಿಗೆ (ಆತ ಕೂಡ ಬ್ರಿಟಿಷರವನೇ) ಸಪ್ಟಂಬರ್ 1948ರಲ್ಲಿ ಹೈದರಾಬಾದಿನಲ್ಲಿ ನಡೆಯಲಿದ್ದ ಪೋಲೀಸ್ ಕಾರ್ಯಾಚರಣೆಯ ಸಂಕೇತ ನೀಡಿದ್ದರು ಎಂಬ ಕಾರಣಕ್ಕೆ ರಾಜೀನಾಮೆ ಕೊಡಬೇಕು ಎಂದು ಹೇಳಲಾಗಿತ್ತು ಎಂದಿದ್ದಾರೆ ಅಡ್ವಾಣಿಯವರು. ಸತ್ಯಸಂಗತಿಯೆಂದರೆ ಬುಖರ್ ಜನವರಿ 15, 1949ರಂದು ಜನರಲ್ ಕಾರ್ಯಪ್ಪ ಸೇನಾ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಳ್ಳುವ ವರೆಗೆ ಸೇನಾ ಮುಖ್ಯಸ್ಥರಾಗಿಯೇ ಮುಂದುವರೆದರು. ಇತಿಹಾಸದ ಇಂತಹ ಹಲವು ವಿರೂಪಗಳು ಅಡ್ವಾಣಿಯವರ ಬ್ಲಾಗಿನಲ್ಲಿದೆ.

ಜಾತ್ಯಾತೀತ ಪ್ರಜಾಸತ್ತಾತ್ಮಕ ಭಾರತ ಗಣತಂತ್ರವನ್ನು ಅವರ ಪರಿಕಲ್ಪನೆಯ 'ಹಿಂದೂರಾಷ್ಟ್ರ'ವಾಗಿ ಪರಿವರ್ತಿಸುವ ಯೋಜನೆಯ ಅನುಷ್ಠಾನಕ್ಕಾಗಿ ಇತಿಹಾಸವನ್ನು ವಿರೂಪಗೊಳಿಸಲು ಎಷ್ಟೇ ಪ್ರಯತ್ನಿಸಲಿ, ಆರೆಸ್ಸೆಸ್ /ಬಿಜೆಪಿ ಇದರಲ್ಲಿ ಯಶಸ್ವಿಯಾಗಲು ಬಿಡಲಾಗದು. ನಮ್ಮ ದೇಶದ ಐಕ್ಯತೆ ಮತ್ತು ಸಮಗ್ರತೆಗಾಗಿ ಹಾಗೂ ಒಂದು ಉತ್ತಮ ಜಾತ್ಯಾತೀತ ಪ್ರಜಾಸತ್ತಾತ್ಮಕ ಭಾರತವನ್ನು ನಿರ್ಮಿಸಲಿಕ್ಕಾಗಿ ನಡೆಸುವ ಜನತೆಯ ಹೋರಾಟಗಳ ಮುನ್ನಡೆಗೆ ಇದು ಅಗತ್ಯ. ನಮ್ಮ ಜನತೆಗಾಗಿ ಒಂದು ಉತ್ತಮ ಭಾರತವನ್ನು ನಿರ್ಮಿಸುವ ಈ ನಿರ್ಣಾಯಕ ಪ್ರಶ್ನೆಯ ಬಗ್ಗೆ ಮಾತ್ರ ಆರೆಸ್ಸೆಸ್/ಬಿಜೆಪಿಯವರು ಮೌನವಾಗಿದ್ದಾರೆ. ಏಕೆಂದರೆ ಬಹುಪಾಲು ಜನಗಳ ಮೇಲೆ ಸಂಕಟಗಳನ್ನು ಹೇರುತ್ತಿರುವ ನವ-ಉದಾರವಾದಿ ಆರ್ಥಿಕ ಸುಧಾರಣೆಗಳ ದಿಕ್ಕು-ದೆಸೆಯನ್ನು ಅವರು ಸಂಪೂರ್ಣವಾಗಿ ಅನುಮೋದಿಸುತ್ತಾರೆ.

ಧರ್ಮಸ್ಥಳ ಪ್ರದೇಶದಲ್ಲಿ 30 ವರ್ಷಗಳಿಂದ ನಡೆದಿರುವ ಅತ್ಯಾಚಾರ ಕೊಲೆ ಮತ್ತು ಭೂಕಬಳಿಕೆ ಪ್ರಕರಣಗಳ ತನಿಖೆಗೆ ಒತ್ತಾಯಿಸಿ ಕುಂದಾಪುರದಲ್ಲಿ ಎಸ್‌ಎಫ್‌ಐ ಪ್ರತಿಭಟನೆ



ಚೂರು-ಪಾರು, ಮಾರಕ ಅಥವಾ ಸಮಗ್ರ ಎಂತಹ ಚುನಾವಣಾ ಸುಧಾರಣೆಗಳು ಬೇಕು?








ಪ್ರಪಂಚದ ಅತಿ ದೊಡ್ಡ ಪ್ರಜಾಪ್ರಭುತ್ವ ಎಂದು ಹೇಳಲಾಗುವ ಭಾರತದಲ್ಲಿ ಚುನಾವಣಾ ಫಲಿತಾಂಶಗಳು ನಿಜಕ್ಕೂ ಜನರ ಅಭಿಮತವನ್ನು ಪ್ರತಿಫಲಿಸುತ್ತಿವೆಯೇ? ಮುಕ್ತ, ನಿರ್ಭೀತ , ಪಾರದರ್ಶಕ, ಪ್ರಜಾಸತಾತ್ಮಕ ಚುನಾವಣ ಪದ್ಧತಿ ನಮ್ಮಲ್ಲಿ ಇದೆಯೇ ಎಂಬ ಗಂಭೀರ ಅವಲೋಕನ ಮತ್ತು ಚುನಾವಣಾ ಸುಧಾರಣೆಗಳು ಇಂದಿನ ತುರ್ತು ಅಗತ್ಯವಾಗಿದೆ.

ವಸಂತರಾಜ್ .ಎನ್.ಕೆ.

ಐದು ರಾಜ್ಯಗಳಲ್ಲಿ ಚುನಾವಣೆಗಳು ನಡೆ-ಯುತ್ತಿದ್ದು ಮಿನಿ-ಸಾರ್ವತ್ರಿಕ ಚುನಾವಣೆಯ ವಾತಾವರಣ ಇದೆ. (ಲೋಕಸಭೆಗೆ) ಸಾರ್ವತ್ರಿಕ ಚುನಾವಣೆಗಳು ಸಹ ಕೆಲವೇ ತಿಂಗಳುಗಳಲ್ಲಿ ನಡೆಯಲಿವೆ. ಚುನಾವಣೆಗಳು ಹತ್ತಿರವಾದಾಗ ಚುನಾವಣಾ ಸುಧಾರಣೆಯ ವಿಷಯ ಸಹ ಮುನ್ನೆಲೆಗೆ ಬರುವುದು ಸಾಮಾನ್ಯ. ಮಾಧ್ಯಮಗಳು, ಚುನಾವಣಾ ಕಮಿಶನ್, ರಾಜಕೀಯ ಪಕ್ಷಗಳು ಚುನಾವಣಾ ಸುದ-ಾರಣೆಗೆ ತಮ್ಮ ಐಡಿಯಾಗಳನ್ನೂ ಸಲಹೆಗಳನ್ನೂ ಮುಂದಿಡುತ್ತಿವೆ. ಇತ್ತೀಚೆಗೆ ಮಾಹಿತಿ ಕಮಿಶನರ್ ಮತ್ತು ಸುಪ್ರೀಂ ಕೋರ್ಟು ಸಹ ಈ ಕ್ಷೇತ್ರಕ್ಕೆ ಪ್ರವೇಶಿಸಿದ್ದು, ಈ ಬಗ್ಗೆ ಸ್ವಯಂ-ಸ್ಫೂರ್ತಿಯಿಂದ 'ಜಾರಿಗೆ ತಂದ ಸುಧಾರಣೆ'ಗಳ ಬಗ್ಗೆ ವ್ಯಾಪಕ ವಿವಾದ-ಚರ್ಚೆ ನಡೆಯಿತು.

ಈ 'ಸುಧಾರಣೆ'ಗಳ ವಿವರಗಳಿಗೆ ಹೋಗುವ ಮೊದಲು ಒಂದು ವಿಷಯ ಗಮನಿಸಬೇಕು. ಭಾರತದ ಪ್ರಜಾಸತ್ತೆಗೆ ಆಧಾರವಾದ 15ಕ್ಕೂ ಹೆಚ್ಚಿನ ಸಾರ್ವತ್ರಿಕ (ಲೋಕಸಭಾ) ಮತ್ತು ಹಲವು ರಾಜ್ಯ ಮತ್ತು ಮಿನಿ-ಸಾರ್ವತ್ರಿಕ ಚುನಾವಣೆಗಳು ನಡೆದಿವೆ. ಈ ಅನುಭವದ ಆಧಾ ರದ ಮೇಲೆ ಚುನಾವಣಾ ಪದ್ಧತಿಯಲ್ಲಿ ಸಮಗ್ರ ಸುಧಾರಣೆಗಳ ಅಗತ್ಯ ಇದೆ ಎಂಬುದು ವ್ಯಾಪಕವಾಗಿ ಒಪ್ಪಿತವಾದ ವಿಚಾರ. 1999ರಲ್ಲಿ ಲಾ ಕಮಿಶನ್ ಸ್ವಲ್ಪ ಮಟ್ಟಿಗೆ ಇಂತಹ ಪ್ರಯತ್ನ ನಡೆಸಿ ಅದರ ಶಿಫಾರಸುಗಳನ್ನು ಮಂಡಿಸಿದ್ದು ಬಿಟ್ಟರೆ ಇಂತಹ ಸಮಗ್ರ ಸುಧಾರಣೆಯ ಪ್ರಯತ್ನ ನಡೆದಿಲ್ಲ. ಇಂತಹ ಸಮಗ್ರ ಸುಧಾರಣೆಯ ಅಭಾವದಿಂದ ಪ್ರತಿಯೊಂದು ಸಂಸ್ಥೆ ವ್ಯಕ್ತಿ ಈ ಚುನಾವಣಾ ಅನುಭವವನ್ನು ತಮ್ಮ ಮೂಗಿನ ನೇರಕ್ಕೆ ವ್ಯಾಖ್ಯಾನಿಸಿ ತಮ್ಮ ಮನಸ್ಸಿಗೆ ಬಂದ ಚೂರು-ಪಾರು ಸುಧಾರಣಾ ಕ್ರಮಗಳನ್ನು ಮಂಡಿಸುತ್ತಿವೆ. ಇಂತಹ ಸುಧಾರಣೆಗಳು ಪರಿಣಾಮಕಾರಿ ಅಲ್ಲ ಮಾತ್ರವಲ್ಲ, ಗೊಂದಲ ಉಂಟು ಮಾಡುತ್ತಿವೆ ಅಥವಾ ಮಾರಕವಾಗಿ ಸಹ ಇವೆ.



ರಾಜಕೀಯ ಪಕ್ಷಗಳು 'ಸಾರ್ವಜನಿಕ ಪ್ರಾಧಿಕಾರ'ಗಳಲ್ಲ!

ಮುಖ್ಯಮಾಹಿತಿ ಕಮಿಶನರ್ ರಾಜಕೀಯ ಪಕ್ಷಗಳು ಮಾಹಿತಿ ಕಾನೂನು ಅನ್ವಯ ಆರು ರಾಷ್ಟ್ರೀಯ ಪಕ್ಷಗಳು 'ಸಾರ್ವಜನಿಕ ಪ್ರಾಧಿಕಾರ'ಗಳು ಎಂದು ವ್ಯಾಖ್ಯಾನಿಸಿ, ಸಾರ್ವಜನಿಕರು ಪಕ್ಷಗಳ ಚುನಾವಣಾ ಅಭ್ಯರ್ಥಿಗಳ ಆಯ್ಕೆ, ಇತರ ನೀತಿ ನಿರ್ಣಯ ಪ್ರಕ್ರಿಯೆ, ನಿಧಿಯ ಮೂಲ ಸೇರಿದಂತೆ ಯಾವುದೇ ಆಂತರಿಕ ಪ್ರಕ್ರಿಯೆ ಬಗ್ಗೆ ಮಾಹಿತಿ ಕೇಳಿ ಅರ್ಜಿ ಸಲ್ಲಿಸಬಹುದು ಎಂದು ಅಭಿಪ್ರಾಯ ಪಟ್ಟರು. ಈ ಬಗ್ಗೆ ಎಡ ಪಕ್ಷಗಳು ಸೇರಿದಂತೆ ಹಲವು ರಾಜಕೀಯ ಪಕ್ಷಗಳು ವಿರೋಧ ವ್ಯಕ್ತಪಡಿಸಿ, ಕಾನೂನಿಗೆ ತಿದ್ದುಪಡಿ ಮಾಡಲು ಒತ್ತಾಯ ಮಾಡಿದವು. ರಾಜಕೀಯ ಪಕ್ಷಗಳೇ ಮತ್ತು ರಾಜಕಾರಣಿಗಳೇ ಅಸಲಿ 'ವಿಲನ್'ಗಳು (ಆಳುವ ವರ್ಗಗಳೂ ಅಥವಾ ಸಾಮಾಜಿಕ-ಆರ್ಥಿಕ ವ್ಯವಸ್ಥೆ ಅಲ್ಲ) ಎಂದು ಚಿತ್ರಿಸಲು ಕಾದು ಕೂತಿರುವ ಮಾಧ್ಯಮಗಳು ಹುಯಿಲೆಬ್ಬಿಸಿದವು. ರಾಜಕೀಯ ಪಕ್ಷಗಳು 'ಪಾರದರ್ಶಕವಾಗಿಲ್ಲ', ಇಂತಹ 'ಚುನಾವಣಾ ಸುಧಾರಣೆ'ಗಳಿಗೆ ವಿರೋಧವಾಗಿವೆ ಎಂದವು.



ಆಂಶಿಕವಾಗಿ ಸರ್ಕಾರದ ಧನಸಹಾಯ ಪಡೆಯುವುದರಿಂದ ಅಥವಾ ಯಾವುದೇ ಇತರ ಕಾರಣಕ್ಕಾಗಿ ರಾಜಕೀಯ ಪಕ್ಷಗಳನ್ನು 'ಸಾರ್ವಜನಿಕ ಪ್ರಾಧಿಕಾರ'ಗಳು ಎಂದು ವ್ಯಾಖ್ಯಾನಿಸುವುದು ತಪ್ಪು. ರಾಜಕೀಯ ಪಕ್ಷಗಳು 'ಸಾರ್ವಜನಿಕ ಸಂಸ್ಥೆಗಳು ನಿಜ. ಆದರೆ 'ಸಾರ್ವಜನಿಕ ಪ್ರಾಧಿಕಾರ'ಗಳಲ್ಲ! ಸಾರ್ವಜನಿಕ ಹಣದಿಂದಲೇ ನಡೆಯುವ ಮತ್ತು ಜನತೆಗೆ ಜವಾಬ್ದಾರರಾಗಿ ಇರಬೇಕಾದ ಕಾರ್ಯಾಂಗದ (ಸರ್ಕಾರ ಅರೆ-ಸರ್ಕಾರಿ ಸಂಸ್ಥೆಗಳ ಮಂತ್ರಿಗಳು, ಅಧಿಕಾರಿಗಳು, ಇತರ ಸಿಬ್ಬಂದಿ) ಭಾಗವ ರಾಜಕೀಯ ಪಕ್ಷಗಳನ್ನು ಸೇರಿಸುವುದು ತ ಮಾನ್ಯತೆ ಪಡೆದ ರಾಜಕೀಯ ಪಕ್ಷ ಸರ್ಕಾರದಿಂದ ಕೆಲವು ಸವಲತ್ತುಗಳ ಪಡೆಯುವುದು ನಿಜ. ಆದರೆ ಅವು ನಿಜವ ಜವಾಬ್ದಾರರಾಗಿ ಇರಬೇಕಾದ್ದು ತಮ್ಮ ಸದಸ್ಯ ಮತ್ತು ಬೆಂಬಲಿಗರಿಗೆ. ರಾಜಕೀಯ ಪಕ್ಷ ನಿಧಿಯ ಮೂಲದ ಬಗ್ಗೆ ಈಗಾಗಲೇ ವಾಷಿ ಅಡಿಟ್ ಮಾಡಿದ ವರದಿ ಸಲ್ಲಿಸುವ ವ್ಯ ಈಗಾಗಲೇ ಇದೆ.


ರಾಜಕೀಯ ಪಕ್ಷಗಳು ಆಂತ ಪ್ರಜಾಪ್ರಭುತ್ವ ಹೊಂದಿರಬೇ ಮೇಲೆ ಹೇಳಿದ ಆಂತ ಪ್ರಕ್ರಿಯೆಗಳ ಬಗ್ಗೆ ಸದಸ ಮಾಹಿತಿ ನೀಡಬೇಕು. ಆದರೆ ಇಂತ ಆಂತರಿಕ ಪ್ರಜಾಪ್ರಭುತ್ವದ ಸ್ವರೂಪವ ಅವೇ ನಿರ್ಧರಿಸಬೇಕೆ ಹೊರತು, ಅವ ಹೊರಿಸಲು ಬರುವುದಿ ಆಂತರಿಕ ಪ್ರಕ್ರಿಯೆಗಳ ಬಹಿರಂಗಗೊಳಿಸುವುದರಿ ಅವನ್ನು ಪೈಪೋಟಿಯಲ್ಲಿರು (ಅದರಲ್ಲೂ ಆಳುವ) ರಾಜಕೀ ಪಕ್ಷಗಳು ದುರ್ಬಳಕೆ ಮಾಡು ಸಾಧ್ಯತೆ ಇರುತ್ತದೆ. ಮಾತ್ರವ ಪ್ರಜಾಪ್ರಭುತ್ವ ವ್ಯವಸ್ಥೆ ಮತ್ತು ಅದರ ರಾಜಕೀಯ ಪಕ್ಷಗಳ ಪಾತ್ರದ ಬ ಇರುವ ತಪ್ಪು ತಿಳುವಳಿಕೆಯಿಂ ಹೊರಡುವ ಗೊಂದಲಕಾ 'ಸುಧಾರಣೆ'. ರಾಜಕೀಯ ಪಕ್ಷ ಹಕ್ಕುಗಳನ್ನು ಕಸಿದುಕೊಳ್ಳು ದುರ್ಬಲಗೊಳಿಸುವ ಮ ಅವುಗಳ ಸ್ವಾಯತ್ತತೆಗೆ ಹಾ ಮಾಡುವ ಮೂಲಕ ಪ್ರಜಾಸ ಮಾರಕವಾದದ್ದು.

ಚುನಾವಣಾ ವೆಚ್ಚಕ್ಕೆ ಸರ್ಕಾರಿ ನಿಧಿ

ನಿಜವಾದ ಸುಧಾರ ಬೇಕಾಗಿರುವುದು ಚುನಾವ ಮತ್ತು ರಾಜಕೀಯ ಪಕ್ಷಗಳ ಪ್ರಮುಖ ಪಾತ್ರ ವಹಿಸುತ್ತಿರುವ ಕಪ್ಪು ಹ ಮತ್ತು ಕಾರ್ಪೋರೇಟ್ ದೇಣಿಗೆಯನ ನಿಯಂತ್ರಿಸುವುದರಲ್ಲಿ. ಅದೇ ರೀತಿ ಹೊ ಪಿಡುಗಾದ 'ಕಾಸಿಗೆ ಸುದ್ದಿ' (ಪೈಯ್ಡ್ ನ್ಯೂಸ ತಡೆಯುವುದು ಅತ್ಯಂತ ತುರ್ತಿನ ಅಗತ ಇವೆಲ್ಲದಕ್ಕೂ ಚುನಾವಣಾ ಪ್ರಚಾರ ಸಾಮ ಮತ್ತು ಮಾಧ್ಯಮ ಸಮಯ ಒದಗಿಸಲ ಸರ್ಕಾರಿ ಧನಸಹಾಯ ಕೊಡುವುದೇ ತ ಪರಿಹಾರ. ಚುನಾವಣಾ ವೆಚ್ಚವನ್ನು ಆ ಮೂಲ ನಿಯಂತ್ರಿಸುವುದು ಹೆಚ್ಚು ಸಾಧ್ಯವಾಗುತ್ತದ ಈ ಬಗ್ಗೆ ಸಮಗ್ರ ಕ್ರಮ ವಹಿಸುವುದರ ಬ ಯಾವುದೇ ಚರ್ಚೆ, ಪ್ರಗತಿ ಆಗಿಲ್ಲ. ಈ ದೊಡ್ಡ ಆಳುವ ವರ್ಗಗಳ ಪಕ್ಷಗಳಿಗಾಗಲಿ ಖಾಸಗಿ ಮಾಧ್ಯಮ ಕಂಪನಿಗಳಿಗಾಗ ಬೇಕಾಗಿಲ್ಲ ಎಂಬುದು ಸ್ವಯಂ-ವೇದ್ಯ. ಆದ-

ರಿಂದ ಈ ಬಗ್ಗೆ ಚರ್ಚೆಯೇ ಇಲ್ಲ. ಜಾಣ ಮೌನ ಇದೆ.

ಇದರ ಬದಲು ಚುನಾವಣಾ ಕಮಿಶನ್ ಇತ್ತೀಚಿನ ಚುನಾವಣೆಗಳಲ್ಲಿ ಗೋಡೆ ಬರಹಗಳು, ಪೋಸ್ಟರುಗಳು, ಬ್ಯಾನರುಗಳು, ಚುನಾವಣಾ ಸಭೆಗಳು, ರ್‍ಯಾಲಿಗಳ ಮೇಲೆ ವಿಪರೀತ ನಿಯಂತ್ರಣ ಹೇರುವ ಮೂಲಕ ಅಗ್ಗದ ಚುನಾವಣಾ ಪ್ರಚಾರ ಮಾಧ್ಯಮಗಳನ್ನು ಹೆಚ್ಚು ಕಡಿಮೆ ನಿಷೇಧಿಸಿದೆ. ಚುನಾವಣಾ ಪ್ರಕ್ರಿಯೆಯಲ್ಲಿ ಸಾರ್ವಜನಿಕ ಪಾಲ್ಗೊಳ್ಳುವಿಕೆಗೆ ಅಡೆತಡೆ ನಿರ್ಮಿಸಿ ಪ್ರಜಾಸತ್ತೆಯನ್ನು ದುರ್ಬಲಗೊಳಿಸಿದೆ. ಪರೋಕ್ಷವಾಗಿ ಟಿವಿ ಮುಂತಾದ ದುಬಾರಿ ಮಾಧ್ಯಮಗಳ ಬಳಕೆ ಅನಿವಾರ್ಯ ಮಾಡುವ ಮೂಲಕ ಚುನಾವಣಾ ಖರ್ಚನ್ನು ಹೆಚ್ಚಿಸಿವೆ. ಇದರಿಂದ ಇಂತಹ ದೊಡ್ಡ ಖರ್ಚು ನಿಭಾಯಿಸಬಲ್ಲ ನಿಧಿ ಸಂಗ್ರಹಿಸಬಲ್ಲ ಆಳುವ ವರ್ಗದ ಪಕ್ಷಗಳಿಗೆ ಅನುಕೂಲ ಮಾಡಿಕೊಟ್ಟಂತಾಗಿದೆ. ಇದು ಹಣದ ದೊಡ್ಡ ಮೂಲ ಇಲ್ಲದ ಪಕ್ಷಗಳಿಗೆ ಪ್ರತಿಕೂಲವಾಗಿದೆ.



ಇದಕ್ಕೆ ಜನತಾ ಪ್ರತಿನಿಧಿ ಕಾನೂನಿನಲ್ಲಿ ಯಾವುದೇ ಅವಕಾಶ ಇಲ್ಲದಿದ್ದರೂ, ಇತರ ಕೆಲವು ಕಾನೂನುಗಳನ್ನು ಬಳಸಿ (ಉದಾ: ಕೆಲವು ನಗರ ಪ್ರದೇಶಗಳಲ್ಲಿರುವ ನಗರದ ಅಂದಗೆಡಿಸುವ ವಿರುದ್ಧ ಇರುವ ಕಾನೂನು) ಚುನಾವಣಾ ಕಮಿಶನ್ ತನ್ನ ಅಧಿಕಾರ ವ್ಯಾಪ್ತಿಯನ್ನು ಮೀರಿ ಇದನ್ನು ಜಾರಿಗೆ ತಂದಿದೆ. ಆದರೆ ಚುನಾವಣೆಯ ಹಿಂದಿನ ದಿನಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಮತದಾರರಿಗೆ ದುಡ್ಡು, ಸಾರಾಯಿ, ಕೊಡುಗೆಗಳನ್ನು ಹಂಚುವುದನ್ನು ತಡೆಯುವುದರಲ್ಲಿ ವಿಫಲವಾಗಿದೆ. 'ಕಾಸಿಗೆ ಸುದ್ದಿ' (ಪೈಯ್ಡ್ ನ್ಯೂಸ್) ತಡೆಯುವುದರಲ್ಲೂ ವಿಫಲವಾಗಿದೆ. ಇವೆಲ್ಲದಕ್ಕೂ ಚುನಾವಣಾ ವೆಚ್ಚಕ್ಕೆ ಸರ್ಕಾರಿ ನಿಧಿ ಒದಗಿಸುವುದೇ ನಿಜವಾದ ಪರಿಹಾರ. ಇದು ಮುಂದೆ ರಾಜಕೀಯ ಭ್ರಷ್ಟಾಚಾರ ತಡೆಯುವುದರಲ್ಲೂ ದೊಡ್ಡ ಪಾತ್ರ ವಹಿಸಬಲ್ಲುದು.

ಚುನಾವಣಾ ಪ್ರಕ್ರಿಯೆಯಲ್ಲಿ ಅಪರಾಧಿಗಳ ಬಗ್ಗೆ

ಕಿಡ್ನ್ಯಾಪ್, ಕೊಲೆ, ಬಲಾತ್ಕಾರ, ಹಿಂಸಾತ್ಮಕ ದಾಳಿ ಮುಂತಾದ ಹೇಯ ಅಪರಾಧಗಳನ್ನು ಮಾಡಿದ ಅಪರಾಧಿಗಳಿಗೆ ಚುನಾವಣಾ ಪ್ರಕ್ರಿಯೆಯಿಂದ ದೂರವಿಡಬೇಕು. ಅವರು ತಮ್ಮ ತೋಳ್ಬಲದಿಂದ ಶಾಸಕಾಂಗಗಳಿಗೆ ಆಯ್ಕೆಯಾಗಿ ಇನ್ನಷ್ಟು ದಬ್ಬಾಳಿಕೆ ಮಾಡುವುದನ್ನು ತಪ್ಪಿಸುವ ಸುಧಾರಣೆಗಳು ಅಗತ್ಯ ಎಂಬುದಕ್ಕೆ ಎರಡು ಮಾತಿಲ್ಲ. ಆಳುವ ವರ್ಗಗಳು (ಮತ್ತು ಅವುಗಳ ಪಕ್ಷಗಳು) ತಮ್ಮ ದಮನಕಾರಿ ಆಳ್ವಿಕೆಯನ್ನು ಇಂತಹ ಅಪರಾಧಿಗಳ ಮೂಲಕ ನಡೆಸುತ್ತವೆ ಎಂಬುದು ವಾಸ್ತವ. ಹಲವು ಕಡೆ ಸರ್ಕಾರ-ಪೋಲಿಸರ ಬದಲು (ಅಥವಾ ಅವರ ಶಾಮೀಲಿನಿಂದ) ಇವರ ಆಳ್ವಿಕೆಯೇ ನಡೆಯುತ್ತದೆ ಎಂಬುದು ಸಹ ವಾಸ್ತವ. ಹಲವು ಕಡೆ ಕಪ್ಪು ಹಣ ಮತ್ತು ಅಪರಾಧ ಸಹ ಜತೆ ಜತೆಗೆ ಇರುತ್ತವೆ. ಆದ್ದರಿಂದ ಆಳುವ ವರ್ಗಗಳ ಪಕ್ಷಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಅಪರಾಧಿಗಳು ಇರುವುದರಲ್ಲಿ ಆಶ್ಚರ್ಯವಿಲ್ಲ.

ಈಗಾಗಲೇ ಯಾವುದೇ ಶಾಸಕನ ವಿರುದ್ಧ ಅಪರಾಧ ಸಾಬೀತಾಗಿ ಕೋರ್ಟು ಶಿಕ್ಷೆಯಾದಲ್ಲಿ ಅವನು ತನ್ನ ಶಾಸಕ ಸ್ಥಾನ ಕಳೆದುಕೊಳ್ಳುತ್ತಾನೆ. ಮಾತ್ರವಲ್ಲ, ಚುನಾವಣೆಗೆ ಸ್ಪರ್ಧಿಸಲು ಅನರ್ಹನಾಗುತ್ತಾನೆ. ಆದರೆ ಭಾರೀ ಹಣಬಲ ಇರುವ ಹೆಚ್ಚಿನ ಶಾಸಕರು ಮೇಲಿನ ಕೋರ್ಟುಗಳಿಗೆ ಅಪೀಲು ಹೋಗುತ್ತಾ ಶಿಕ್ಷೆಗೆ ತಡೆಯಾಜ್ಞೆ ತರುತ್ತಾ ದಶಕಗಳನ್ನೇ ಕಳೆದು ಬಿಡುತ್ತಾರೆ. ಅಪೀಲು ಹೋಗಿ ನಿಗದಿತ ಅವಧಿಯ (3 ತಿಂಗಳು?) ಒಳಗೆ ಶಿಕ್ಷೆಗೆ ತಡೆಯಾಜ್ಞೆ ಬಂದರೆ ಮಾತ್ರ ಇದು ಸಾದ್ಯ ಎಂದು ಗಮನಿಸಬೇಕು. ಸುಪ್ರೀಂ ಕೋರ್ಟಿನ ಬೆಂಚೊಂದು ಇತ್ತೀಚೆಗೆ ಯಾವುದೇ ಕೋರ್ಟಿನಲ್ಲಿ ಶಿಕ್ಷೆಯಾದ ಕೂಡಲೇ ಶಾಸಕ ತನ್ನ ಶಾಸಕ ಸ್ಥಾನ ಕಳೆದುಕೊಳ್ಳುತ್ತಾನೆ. ಮಾತ್ರವಲ್ಲ, ಚುನಾವಣೆಗೆ ಸ್ಪರ್ಧಿಸಲು ಅನರ್ಹನಾಗುತ್ತಾನೆ ಎಂದು ತೀರ್ಪಿತ್ತಿದೆ. ತೀರ್ಪು ಸಂಬಂಧಪಟ್ಟ ಜನತಾ ಪ್ರತಿನಿಧಿ ಕಾನೂನಿನ ಕಲಮನ್ನು ಅನೂರ್ಜಿತ ಎಂದು ಹೊಡೆದು ಹಾಕಿದೆ.

ಇದೂ 'ಚುನಾವಣಾ ಸುಧಾರಣೆ'ಯತ್ತ ತನ್ನ ಒಂದು ಕೊಡುಗೆ ಎಂದು ಭಾವಿಸಿದೆ. ಆದರೆ ಶಾಸಕಾಂಗದಲ್ಲಿ ಅಪರಾಧಿಗಳ ವಿರುದ್ಧ ಹೋರಾಟದ ಹೆಸರಲ್ಲಿ ಯಾವುದೇ ಸಾಮಾನ್ಯ ನಾಗರಿಕನಿಗಿರುವ ಮೂಲಭೂತ ಹಕ್ಕನ್ನು ಶಾಸಕನಿಗೆ ಇಲ್ಲದಂತೆ ಮಾಡುವುದು ತಪ್ಪು. ಬದಲಾಗಿ ಅಪೀಲಿನ ಅವಧಿಯಲ್ಲಿ ಶಾಸಕನನ್ನು ಅಮಾನತಿನಲ್ಲಿಡಬೇಕು. ಮೇಲಿನ ಕೋರ್ಟು ಅಪೀಲನ್ನು ನಿಗದಿತ ಅವಧಿಯೊಳಗೆ ಇತ್ಯರ್ಥ ಮಾಡಬೇಕು. ಇದು ಹೆಚ್ಚು ನ್ಯಾಯೋಚಿತ ಪರಿಹಾರ. ಇದು ಶಾಸಕನ ಮೂಲಭೂತ ಹಕ್ಕಿಗೂ ಚ್ಯುತಿ ತರದೆ ಶಾಸಕಾಂಗದಲ್ಲಿ ಅಪರಾಧಿಗಳ ವಿರುದ್ಧ ಹೋರಾಟಕ್ಕೂ ಅನುವು ಮಾಡಿಕೊಡುತ್ತದೆ.

ಅದೇ ಬೆಂಚು ನೀಡಿದ ಇನ್ನೊಂದು ತೀರ್ಪು ಇನ್ನೂ ಅಪಾಯಕಾರಿಯಾದ್ದು. ಅದರ ಪ್ರಕಾರ ಯಾವುದೇ ವ್ಯಕ್ತಿ ಜೈಲಿನಲ್ಲಿ ಬಂಧಿತನಾದರೂ, ಅಪರಾಧ ಸಾಬೀತಾಗದಿದ್ದರೂ ಆತ ಚುನಾವಣೆಗೆ ಸ್ಪರ್ಧಿಸಲು ಅನರ್ಹ. ಇದನ್ನು ಆಳುವ ಪಕ್ಷಗಳು ತಮ್ಮ ವಿರೋಧಿ ಪಕ್ಷದ ಕಾರ್ಯಕರ್ತರ ಮೇಲೆ ಸುಲಭವಾಗಿ ವ್ಯಾಪಕವಾಗಿ ದುರ್ಬಳಕೆ ಮಾಡುತ್ತಾರೆ ಎಂಬುದು ಸ್ಪಷ್ಟ. ಅಪರಾಧಿಗಳ ಬದಲು ಅಪರಾಧಿಗಳ ವಿರುದ್ಧ ದನಿಯೆತ್ತಿದ ಸಾಮಾಜಿಕ-ರಾಜಕೀಯ ಕಾರ್ಯಕರ್ತರ ಮೇಲೆ



ಕೇಸು ದಾಖಲು ಮಾಡುವುದನ್ನು ಮಂಗಳೂರು ಹೋಮ್ ಸ್ಟೇ ಪ್ರಕರಣದಿಂದ ಆರಂಭಿಸಿ ಹಲವು ಸಂದರ್ಭಗಳಲ್ಲಿ ಕಂಡಿದ್ದೇವೆ. ಇದು ಚುನಾವಣಾ ಸುಧಾ ರಣೆ ಅಲ್ಲ ಮಾತ್ರವಲ್ಲ. ಅದರ ಹೆಸರಲ್ಲಿ ಪ್ರಜಾಸತ್ತೆಯನ್ನು ದುರ್ಬಲಗೊಳಿಸುವ ಕ್ರಮ. ಇದನ್ನು ಎಡ ಪಕ್ಷಗಳು ಸೇರಿದಂತೆ ಹಲವು ರಾಜಕೀಯ ಪಕ್ಷಗಳು ವಿರೋಧಿಸಿವೆ.

ಇನ್ನಷ್ಟು ಸಮಗ್ರ ಸುಧಾರಣೆಗಳು

ಇವಲ್ಲದೆ ಚುನಾವಣಾ ಪಟ್ಟಿಯಲ್ಲಿ ತಪ್ಪುಗಳು, ಅದನ್ನು ಸರಿಪಡಿಸುವ ಪ್ರಕ್ರಿಯೆ, ಚುನಾವಣಾ ಅವಧಿಯಲ್ಲಿ ಎಲ್ಲಾ ಅಭಿವೃದ್ಧಿ ಚಟುವಟಿಕೆಗೆ ತಡೆ, ಕಮಿಶನಿನ ಅಧಿಕಾರದ ವ್ಯಾಪ್ತಿ-ಮಿತಿ, ಚುನಾವಣಾ ಕಮಿಶನರುಗಳ ಅಧಿಕಾರ ಮಿತಿ ಮೀರಿದರೆ ವಹಿಸಬೇಕಾದ ಪ್ರಕ್ರಿಯೆ - ಮುಂತಾದ ವಿಷಯಗಳ ಬಗ್ಗೆ ಇನ್ನೊಂದು ಲೇಖನವೇ ಅಗತ್ಯವಾದೀತು.

ಆದರೆ ಇವೆಲ್ಲಕ್ಕಿಂತಲೂ ಹೆಚ್ಚಿನ ಮಹತ್ವದ ವಿಷಯ ಚುನಾವಣಾ ಪದ್ಧತಿಯಲ್ಲಿ ಬದಲಾವಣೆಯ ಬಗ್ಗೆ. ಎರಡು ಪಕ್ಷಗಳ ವ್ಯವಸ್ಥೆ ಇದ್ದ ಬ್ರಿಟಿಷ್ ಪದ್ಧತಿಯ ಅನುಕರಣೆಯಿಂದ ಈಗಿನ ಪದ್ಧತಿ ಎಲ್ಲಾ ರಾಜಕೀಯ ಅಭಿಪ್ರಾಯಗಳಿಗೆ (ಅದರಲ್ಲೂ ಅಲ್ಪಸಂಖ್ಯಾತ ಅಭಿಪ್ರಾಯಗಳಿಗೆ) ಪ್ರಾತಿನಿಧಿಕವಾಗಿಲ್ಲ. ಬ್ರಿಟಿಷ್ ವಸಾಹತುಗಳನ್ನು ಬಿಟ್ಟು ಹೆಚ್ಚಿನ ಇತರ ದೇಶಗಳು ಅನುಸರಿಸುತ್ತಿರುವ ಪ್ರಮಾಣಾತ್ಮಕ ಪ್ರಾತಿನಿಧ್ಯ ಪದ್ಧತಿಗೆ ಬದಲಾಯಿಸಬೇಕು ಎಂದು 1999ರಲ್ಲಿ ಲಾ ಕಮಿಶನ್ ಶಿಫಾರಸು ಮಾಡಿತ್ತು. ಅದರ ಬಗೆಗೂ ಇನ್ನೊಂದು ಲೇಖನವೇ ಬೇಕು.

ಈ ಚುನಾವಣಾ ಸಂದರ್ಭದಲ್ಲಿ ಚೂರು-ಪಾರು, ಮಾರಕ ಚುನಾವಣಾ ಸುಧಾರಣೆಗಳನ್ನು ಬದಿಗಿಟ್ಟು, ಸಮಗ್ರ ಸುಧಾರಣೆಗಳಿಗೆ ಪ್ರಚಾರ-ಪ್ರಕ್ಷೋಭೆ ನಡೆಸುವುದನ್ನು ಮುನ್ನೆಲೆಗೆ ತರಬೇಕಾದ ತುರ್ತು ಅಗತ್ಯ ಇದೆ.

ಚುನಾವಣಾ ಸುಧಾರಣೆ : ಸಿಪಿಐ(ಎಂ) ಏನು ಹೇಳುತ್ತದೆ?

ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಕಾಪಾಡಲೂ ಮತ್ತು ರಾಜಕೀಯ ಭ್ರಷ್ಟಾಚಾರವನ್ನು ತಡೆಗಟ್ಟಲು ಚುನಾವಣಾ ಸುಧಾರಣೆಗಳು ಅತ್ಯಗತ್ಯ. ಹಣದ ಬಲ ಮತ್ತು ಕಾನೂನು ಬಾಹಿರ ಹಣವನ್ನು ಚುನಾವಣೆಗಳಲ್ಲಿ ದುರ್ಬಳಕೆ ಮಾಡುವುದರ ವಿರುದ್ಧ ಚುನಾವಣಾ ನಿಯಮಗಳಲ್ಲಿ ಕಠಿಣ ಕ್ರಮಗಳನ್ನು ಸೇರಿಸಬೇಕಾಗಿದೆ. ಚುನಾವಣಾ ಸಾಮಗ್ರಿಗಳನ್ನು ಮತ್ತು ಇತರ ಅಗತ್ಯಗಳನ್ನು ವಸ್ತುರೂಪದಲ್ಲಿ ಪೂರೈಸಲು ಸರ್ಕಾರಿ ನಿಧಿಯ ವ್ಯವಸ್ಥೆ ಆಗಬೇಕಾಗಿದೆ. ಮಾಧ್ಯಮಗಳಲ್ಲಿ ಚುನಾವಣಾ ಪ್ರಚಾರಕ್ಕೆ ಸಮಾನ ಅವಕಾಶಗಳಿರಬೇಕು. 'ಕಾಸಿಗಾಗಿ ಸುದ್ದಿ'(ಪೈಯ್ಡ್ ನ್ಯೂಸ್)ನ್ನು ಚುನಾವಣಾ ಅಕ್ರಮ ಎಂದು ನಮೂದಿಸುವ ಕಾನೂನು ತಿದ್ದುಪಡಿ ಮಾಡಬೇಕು. ಹಣ ಮತ್ತು ತೋಳ್ಬಲದ ಪ್ರಭಾವವನ್ನು ಒಂದು ಮಟ್ಟಿಗಾದರೂ ತಡೆಯಲು ಆಂಶಿಕ ಪಟ್ಟಿ ಇರುವ ಪ್ರಮಾಣಾತ್ಮಕ ಪ್ರಾತಿನಿಧ್ಯದ ಚುನಾವಣಾ ಪದ್ಧತಿಯ ಮೂಲಭೂತ ಬದಲಾವಣೆ ಬೇಕಾಗಿದೆ. ಸಿಪಿಐ(ಎಂ) ಮತ್ತು ಎಡ ಪಕ್ಷಗಳು ಚುನಾವಣಾ ಸುಧಾರಣೆಗಳನ್ನು ರಾಜಕೀಯ ಅಜೆಂಡಾದ ಮುನ್ನೆಲೆಗೆ ತರಲು ಶ್ರಮಿಸಬೇಕು.

(2012ರಲ್ಲಿ ಜರುಗಿದ 20ನೇ ಮಹಾಧಿವೇಶನದ ರಾಜಕೀಯ ನಿರ್ಣಯದ ಪ್ಯಾರಾ 2.79)

ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿಯ ಪ್ರಗತಿ ವಿರೋಧಿ ಧೋರಣೆಯನ್ನು ಬಿಂಬಿಸುವ ಗೋಡೆ ಬರಹ. ಎಡ ಪಕ್ಷಗಳು ನೆಚ್ಚಿಕೊಂಡಿರುವ ಇಂತಹ ಕಡಿಮೆ ವೆಚ್ಚದ ಪ್ರಚಾರ ಮಾಧ್ಯಮಕ್ಕೆ ಚುನಾವಣ ಆಯೋಗದ ನಿರ್ಬಂಧಗಳಿಂದ ಕುತ್ತು ಬಂದಿದೆ.



ಹೊಸ ಕೃಷಿ ಮಾರುಕಟ್ಟೆ ನೀತಿ ಯಾರಿಗಾಗಿ? ಭಾಗ – 5

ಚಿಲ್ಲರೆ ವ್ಯಾಪಾರದಲ್ಲಿ ಬಹುರಾಷ್ಟ್ರೀಯರು

ಸಾರ್ವಜನಿಕ ವಿತರಣೆಗೆ ಎಳ್ಳು ನೀರು.

ಯು. ಬಸವರಾಜು

ಬಂಡವಾಳದಾರರಿಗೆ ಬಂಡವಾಳ ಕ್ರೋಢೀಕರಿಸಿಕೊಳ್ಳಲು ದೇಶದಲ್ಲಿ ಆಹಾರದ ಸ್ವಾವಲಂಬನೆ. ಮತ್ತು ಕಡಿಮೆ ಬೆಲೆಯ ಆಹಾರ ಧಾನ್ಯಗಳ ಲಭ್ಯತೆಯ ಅವಶ್ಯಕತೆ ಸ್ವಾತಂತ್ರ್ಯ ಪಡೆದ ಆ ದಿನಗಳಲ್ಲಿ ಇತ್ತು. ಆ ಕಾರಣಕ್ಕಾಗಿ ಕಾಳಸಂತೆಯ ಮೇಲೆ ಸ್ವಲ್ಪವಾದರೂ ನಿಯಂತ್ರಣ ಬೇಕಾಗಿತ್ತು ಮತ್ತು ಆಳುವ ರಾಜಕೀಯ ಪಕ್ಷಗಳಿಗೆ, ಅಂದಿನ ದಿವಾಳಿಯಾದ ಗೇಣಿದಾರರು/ಕೂಲಿಕಾರರು ಹಸಿವಿನ ಸಂಕಟಕ್ಕೆ ತುತ್ತಾಗಿ ಅವರು ಪ್ರತಿರೋಧ ಒಡ್ಡುವುದನ್ನು ತಡೆಯುವ ಹಾಗು ಸಹಾಯಧನ(ಸಬ್ಸಿಡಿ) ಒದಗಿಸಿ ಕಡಿಮೆ ದರದಲ್ಲಿ ಆಹಾರ ನೀಡುವ ಮೂಲಕ ಬಡವರನ್ನ ತಮ್ಮ ರಾಜಕೀಯ ನೆಲೆಯನ್ನಾಗಿಸುವ ಉದ್ದೇಶ ಮಾತ್ರವಲ್ಲ ಈ ಎಲ್ಲದರ ಜೊತೆ ಜನತೆಯ ಪ್ರತಿ–ರೋ ಧ ಒತ್ತಡವು ಸೇರಿ ದೇಶದಲ್ಲಿ ಸಾರ್ವತ್ರಿಕ ವಿತರಣಾ ವ್ಯವಸ್ಥೆ ಅಥವಾ ಪಡಿತರ ನೀಡುವ ವ್ಯವಸ್ಥೆಯನ್ನ ಜಾರಿಗೆ ತರುವಂತೆ ಮಾಡಿತು. ಇದು ಕೇವಲ ಗೇಣಿದಾರರ–ಕೂಲಿಕಾರರಿಗೆ ಮಾತ್ರವಲ್ಲ ಎಲ್ಲ ರೈತರಿಗೂ–ಕಾರ್ಮಿಕರಿಗೂ, ನಾಗರೀಕರಿಗೂ ಇದು ಅಗತ್ಯವಾಗಿತ್ತು.

ಕೆಲವೇನೂರುಕೋಟಿಬಂಡವಾಳಹೊಂದಿದ್ದ, ಅಂದಿನ ದೇಶೀಯ ಬಂಡವಾಳದಾರರು ಕಳೆದ 6 ದಶಕಗಳಲ್ಲಿ ಸರ್ಕಾರಗಳು ಹಿಡಿದ ಬಂಡವಾಳಶಾಹಿ ಪಥದಿಂದ ಕೊಬ್ಬಿ ಲಕ್ಷಾಂತರ ಕೋಟಿ ಬಂಡವಾಳ ಕ್ರೋಢೀಕರಿಸಿದ್ದಾರೆ. ಮತ್ತಷ್ಟು ಕೊಬ್ಬಿ ಬೆಳೆಯಲು ಜಾಗತಿಕ


ಚಿಲ್ಲರೆ ಅಂಗಡಿ

ಬಹುರಾಷ್ಟ್ರೀಯ ಸಂಸ್ಥೆಗಳ ನೆರವು ಪಡೆಯಲು ಜಾಗತೀಕರಣದ ಪ್ರಕ್ರಿಯೆಯ ಭಾಗವಾಗುತ್ತಿದ್ದಾರೆ ಮತ್ತು ಬೆಳೆದ ತಮ್ಮ ಬಂಡವಾಳವನ್ನ ವಿದೇಶಿ ಬಂಡವಾಳದೊಂದಿಗೆ ಸೇರಿಸಿ, ಅವರು ಆಹಾರ ಧಾನ್ಯಗಳ ಉತ್ಪಾದನೆ–ಮಾರಾಟ ಮತ್ತು ಸಣ್ಣ ವ್ಯಾಪಾರದಲ್ಲಿ ತೊಡಗಿಸುವ ಉದ್ದೇಶ ಹೊಂದಿದ್ದಾರೆ. ಪರಿಣಾಮವಾಗಿ ಆಹಾರದ ನಿಯಂತ್ರಿತ ಬೆಲೆ ಅವರಿಗೆ ಈಗ ಅವಶ್ಯವಿಲ್ಲ. ಈ ಮಾರುಕಟ್ಟೆಯ ಲೂಟಿಗೆ ಏರಿದ ಬೆಲೆಗಳು ಬೇಕಾಗಿವೆ. ಪರಿಣಾಮವಾಗಿ ಸಾರ್ವಜನಿಕ ವಿತರಣೆಯ ವ್ಯವಸ್ಥೆ ಕಳಚಿ ಹಾಕಲು ಅವರು ಯತ್ನಿಸುತ್ತಿದ್ದಾರೆ.

ಇದಕ್ಕೆ ವ್ಯತಿರಿಕ್ತವಾಗಿ, ಸಾರ್ವಜನಿಕ ವಿತರಣೆಯ ವ್ಯವಸ್ಥೆಯನ್ನ ಬಲಪಡಿಸಬೇಕೆಂಬುದು ದುರ್ಬಲರ, ನಾಗರೀಕರ ಮತ್ತು ದುಡಿಯುವ ಜನರ ಹಕ್ಕೊತ್ತಾಯವಾಗಿದೆ. ಪ್ರತಿಯೊಬ್ಬನಿಗೂ ಅಂದರೆ ಸಾಮಾನ್ಯ ಕೂಲಿಕಾರನಿಗೂ ಮತ್ತು ಬಯಸಿದರೆ ದೇಶದ ದೊಡ್ಡ ಬಂಡವಾಳದಾರನಿಗೂ ರೇಷನ್‌ಕಾರ್ಡ್ ಇರಬೇಕು. ದುರ್ಬಲರಿಗೆ ಸಹಾಯಧನದ ಆಧಾರದಲ್ಲಿ ಸಾಂಕೇತಿಕ ದರದಲ್ಲಿ ಅಂದರೆ ಅತಿ ಕಡಮೆ ಬೆಲೆಗೆ ರೇಷನ್ ಒದಗಿಸಬೇಕು, ಉಳಿದವರಿಗೆ ನಿಯಂತ್ರಿತ ಬೆಲೆಗಳಲ್ಲಿ ರೇಷನ್ ಒದಗಿಸಬೇಕು. 16 ಕ್ಕೂ ಅಧಿಕ ಅಗತ್ಯ ದಿನ ಬಳಕೆಯ ಆಹಾರ ಧಾನ್ಯಗಳು, ವಸ್ತುಗಳು ಅಗತ್ಯಕ್ಕೆ ತಕ್ಕಷ್ಟು ಸಿಗಬೇಕೆಂಬುದು ಎಲ್ಲರ ಕೇಳಿಕೆಯಾಗಿದೆ. ನ್ಯಾಯ ಬೆಲೆ ಅಂಗಡಿಯಲ್ಲಿ ದುಡಿಯುವವರಿಗೆ ನ್ಯಾಯ ಒದಗಿಸಬೇಕು ಮತ್ತು ಅಲ್ಲಿ ನಡೆಯುವ ಅಕ್ರಮ ತಡೆಯಲು ಬಲವಾದ ಕ್ರಮಗಳಾಗಬೇಕು. ಒಟ್ಟಾರೆಯಾಗಿ ಈ ವ್ಯವಸ್ಥೆಯ ಮೂಲಕ ತೆರೆದ ಮಾರುಕಟ್ಟೆಯ ಬೆಲೆ ಏರಿಕೆಯ ಶೋಷಣೆಯಿಂದ ನಾಗರೀಕರ ರಕ್ಷಣೆಯಾಗಬೇಕೆಂಬ ಹಕ್ಕೊತ್ತಾಯ ಬಲಗೊಳ್ಳುತ್ತಿದೆ.

ಜನತೆಯ ಈ ಹಕ್ಕೊತ್ತಾಯಕ್ಕೆ ತದ್ವಿರುದ್ದವಾಗಿ ಸಾರ್ವಜನಿಕವಿತರಣಾವ್ಯವಸ್ಥೆಯನ್ನಬಲಪಡಿಸುವ ಬದಲು ಅದನ್ನು ಕಳಚಿ ಹಾಕುವ ಕೆಲಸಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೈಹಾಕಿವೆ. ಬಡವರನ್ನು ಬಿಪಿಎಲ್ ಮತ್ತು ಎಪಿಎಲ್ ಎಂದು ವರ್ಗೀಕರಿಸಿ ವಿಭಜಿಸಲಾಗುತ್ತಿದೆ. ಬಡತನ ರೇ–ಖೆಯ ಮಾನದಂಡವನ್ನ ಈಗ ಕೇಂದ್ರ ಸರ್ಕಾರ ಗ್ರಾಮೀಣ ಪ್ರದೇಶದಲ್ಲಿ ಪ್ರತಿ ತಲಾ ಆದಾಯ 26 ರೂ. ಪಡೆಯುವವರು ಮತ್ತು ನಗರಗಳಲ್ಲಿ 32 ರೂ. ಪಡೆಯುವವರು ಮತ್ತು ಅದಕ್ಕೂ ಕಡಿಮೆ ಆದಾಯ ಇರುವವರು ಮಾತ್ರ ಎಂದು ಗುರುತಿಸಿದೆ. ಅದಕ್ಕೂ ಒಂದೆರಡು ರೂಪಾಯಿ ಹೆಚ್ಚಿರುವವರು ಅರ್ಹರಲ್ಲವೆನ್ನಲಾಗಿದೆ. ಇದೊಂದು ಅವೈಜ್ಞಾನಿಕ ವಿಚಾರವಾಗಿದ್ದು, ಬಡವರನ್ನ ಕಡಿಮೆ ಮಾಡುವ ಅಳತೆಯಾಗಿದೆ.


ಮಾಲ್

ಅದೇ ರೀತಿ ಯೂನಿಟ್ ಪದ್ಧತಿ ಹೆಸರಿನಲ್ಲಿ ತಲಾವ್ಯಕ್ತಿಗೆ ಅಗತ್ಯಕ್ಕೆ ತಕ್ಕಷ್ಟು ನೀಡಬೇಕಾದ ರೇಷನ್‌ನ್ನನ್ನು ವ್ಯಾಪಕವಾಗಿ ಅಗತ್ಯದ ಅರ್ಧಕ್ಕಿಂತಲೂ ಕಡಿಮೆಯಾಗುವಂತೆ ಕಡಿತಗೊಳಿಸಲಾಗಿದೆ.

ಬಡವರನ್ನ ಅಂಕಿ ಸಂಖ್ಯೆ ಮೂಲಕ ನಿಜ ಸಂಖ್ಯೆಗಿಂತ ಕಡಿಮೆ ಮಾಡಲಾಗಿದೆ. ನಿಜವಾದ ಬಡವರ ಸಂಖ್ಯೆಯನ್ನ ಗುರುತಿಸಿದಲ್ಲಿ ದೇಶದ ಮರ್ಯಾದೆ ಜಾಗತಿಕ ಮಟ್ಟದಲ್ಲಿ ಹೋಗಲಿದೆ ಮಾತ್ರವಲ್ಲ ಆಳುವ ಸರ್ಕಾರದ ಘನತೆಗೆ ಧ–ಕ್ಕೆ ಮಾಡಬೇಕಾಗುತ್ತೆಂಬ ಮತ್ತೊಂದು ಕಾರಣ–ಕ್ಕಾಗಿ ಕಡಿಮೆ ಸಂಖ್ಯೆಯನ್ನು ತೋರಿಸಲಾಗುತ್ತಿದೆ. ಹೀಗೆ ಕಡಿಮೆ ಮಾಡಲಾದ ಸಂಖ್ಯೆಯ ರೇಷನ್ ಕಾರ್ಡ್‌ಗಳಲ್ಲಿ ದೊಡ್ಡ ಪ್ರಮಾಣದ ಕಾರ್ಡುಗಳನ್ನ ಜನತೆಗೆ ನೀಡದೇ ಸರ್ಕಾರದ ಮಟ್ಟದಲ್ಲಿಯೇ ಕೂಡಿಟ್ಟುಕೊಂಡು ಪಡಿತರವನ್ನು ಕಾಳಸಂತೆಗೆ ಮಾರಾಟ ಮಾಡಿ ವ್ಯಾಪಕವಾಗಿ ಭ್ರಷ್ಟಾಚಾರವನ್ನ ಎಸಗಲಾಗುತ್ತದೆ. ಕರ್ನಾಟಕದ ಬಿಜೆಪಿ ಸರ್ಕಾರ ಕುಟುಂಬಗಳಿಗಿಂತ ಹೆಚ್ಚಿನ ಕಾರ್ಡ್ ವಿತರಣೆಯಾಗಿರುವುದರ ಕುರಿತು ಮಾತನಾಡುತ್ತಿದ್ದುದನ್ನ ಈ ದಿಸೆಯಲ್ಲಿ ಗಮನಿಸಬಹುದಾಗಿದೆ. ಹಾಗಾದರೆ ಅವುಗಳು ಜನಗಳ ಬಳಿ ಇಲ್ಲವೆಂದರೆ ಎಲ್ಲಿಗೆ ಹೋದವು ಎಂಬ ಪ್ರಶ್ನೆಗೆ ಉತ್ತರ ಇದುವೇ ಆಗಿದೆ. ಉಳಿದವು ನ್ಯಾಯ ಬೆಲೆ ಅಂಗಡಿ ಹಾಗೂ ಜಿಲ್ಲಾ/ತಾಲೂಕು ಮಟ್ಟದ ಅಧಿಕಾರಿಗಳ ಬಳಿ ಉಳಿದು ಭ್ರಷ್ಟತೆಗೆ ಬಲಿಯಾಗಿವೆ. ಜನತೆಗೆ ನೀಡುವವುಗಳಲ್ಲಿಯೂ ನಿಜ ಬಡವರಿಗೆ ಸಿಗದೇ ಉಳ್ಳವರ ಮನೆ ಸೇರುವ ಕಾರ್ಡ್‌ಗಳಿಗೂ ಕೊರತೆಯೇನಿಲ್ಲ. ಹೀಗೆ ಒಟ್ಟು ಬಡವರ ಶೇ. 30 ರಷ್ಟು ಜನತೆಗೆ ದೊರೆಯದ ಕಾರ್ಡ್‌ಗಳಿಗೂ ಕೊರತೆಯೇನಿಲ್ಲ. ಹೀಗೆ ಒಟ್ಟು ಬಡವರ ಶೇ. 30 ರಷ್ಟು ಜನತೆಗೆ ದೊರೆಯದ ಕಾರ್ಡ್‌ಗಳಲ್ಲಿ ರೇಷನ್ ಪಡೆಯುವ ಕಾರ್ಡ್‌ಗಳು ಅದರಲ್ಲಿ ಶೇ. 60–70 ... ಎಂದರೆ ತಪ್ಪಾಗಲಾರದು. ಪಡಿತರ ... ಯ ಮಟ್ಟದಲ್ಲಿ ರೇಷನ್ ಮುಗಿದಿದೆ ... ಅಥವಾ ಮುಂದೆ ಹಾಕಲಾಗುವುದೆಂದು ... ಮತ್ತೇನೋ ಹೇಳಿ ಇವರಲ್ಲಿ ಇನ್ನೂ ... ನಿರಾಕರಿಸಲಾಗುತ್ತಿದೆ. ಪಡಿತರ ಕಾರ್... ಜನತೆಗೆ ತಲುಪದಿರಲು ಮತ್ತು ತಲುಪಿದವ... ಸರಿಯಾಗಿ ರೇಷನ್ ಸಿಗದಿರುವುದಕ್ಕೆ ... ಕುರುಡನಂತೆ ವರ್ತಿಸುವ ಸರ್ಕಾರದ ... ಕಾರಣವಾಗಿವೆ. ಅಂದರೆ ಹಾಲಿ ಕೇಂದ್ರ ... ಖರ್ಚು ಮಾಡುವ ಸುಮಾರು 60 ... ಕೋಟಿ ಸಹಾಯಧನದ ಶೇ. 60–70 ... ಮಧ್ಯದಲ್ಲಿಯೇ ಸೋರಿ ಹೋಗುವ ... ಇದಾಗಿದೆ. ಸಾರ್ವಜನಿಕ ವಿತರಣಾ ವ್ಯ...

ಪರಿಸ್ಥಿತಿಯಲ್ಲಿ ಮುಂದುವರೆದಿರುವುದರಿ... ಕಾಳ ಸಂತೆಕೋರರು ಜನತೆಗೆ ... ಅಗತ್ಯವಾಗಿದ್ದಾಗ, ಬೆಲೆಗಳನ್ನು ಏರಿಸಿ ಮ... ಮಾಡುವುದನ್ನ ನಾವು ನೋಡಿದ್ದೇವೆ. ... ಬಡ ಜನತೆಯ ಅಗತ್ಯದ ಕನಿಷ್ಠ ಶೇ. 15... ಭಾಗವನ್ನು ಸಾರ್ವಜನಿಕ ವಿತರಣಾ ... ತಲುಪುತ್ತಿಲ್ಲವಾಗಿದೆ.

ಈಗ ಕೊಬ್ಬಿದ ಬಂಡವಾಳದಾರರು ... ಹಾಗೂ ರಾಜ್ಯ ಸರ್ಕಾರಗಳು ಸೇರಿ ಕೋಟಿ ... ಚಿಲ್ಲರೆ ವ್ಯಾಪಾರವನ್ನ ಬಹುರಾಷ್ಟ್ರೀಯ ಸ... ತೆಕ್ಕೆಗೆ ನೀಡಲು ಮುಂದಾಗುತ್ತಿವೆ. ಪೆಟ್ರೋ... ಡೀಜಲ್‌ಗಳು ಹಾಗೂ ಬೀಜ–... ಕ್ರಿಮಿನಾಶಕಗಳ ಬೆಲೆಗಳ ಮೇಲಿನ ನಿಯ... ತೆಗೆದು ಹಾಕಿದಂತೆಯೇ, ಸಾರ್ವಜನಿಕ ವಿ... ವ್ಯವಸ್ಥೆಯನ್ನು ಕಳಚಿಹಾಕಲು ಸಂಚ... ನಡೆಯುತ್ತಿವೆ. ಇದರ ಭಾಗವಾಗಿಯೇ ... ಸರ್ಕಾರ ಪಡಿತರದ ಬದಲಿಗೆ ಅದಕ್ಕೆ ನಿ... ಸಹಾಯಧನದ ಮೊತ್ತವನ್ನ ಹಣದ ರೂ... ಅವರಿಗೆ ನೀಡಿ, ಎಲ್ಲಾ ಬಡವರನ್ನ ... ಮಾರುಕಟ್ಟೆಗೆ ತಳ್ಳಿಬಿಡಲು ಮುಂದಾ... ಈಗಾಗಲೇ ರಾಜ್ಯಸರ್ಕಾರ ಸಹಾಯಧನದ... ನೀಡುವ ಬದಲಿಗೆ ಹಣ ರೂಪದ ಸ... ನೀಡಿ ಮಾರುಕಟ್ಟೆಯ ಶಕ್ತಿಗಳ ಮುಂದೆ ... ಹಾಗೆಯೇ ಇದು ಕೂಡ ಆಗುತ್ತದೆ.

ಇದರಿಂದ ಸರ್ಕಾರಕ್ಕೆ ಮತ್ತು ... ವರ್ಗಗಳು ಹಾಗು ಆಳುವ ಪಕ್ಷಗಳಿಗೆ ... ರೀತಿಯ ಉದ್ದೇಶಗಳು ಈಡೇ... ಎಂದು ಭಾವಿಸಲಾಗಿದೆ. ಒಂದನೇಯ... ಹಣರೂಪದ ಸಹಾಯಧನವನ್ನು ... ನೀಡುವುದರಿಂದ ಈಗ ನೀಡುತ್ತಿರುವ ಸು... 60 ಸಾವಿರ ಕೋಟಿಯಷ್ಟು ಹ...

ಪುಟ

" ಮೂಢನಂಬಿಕೆ ಎಂಬುದು ಬರೀ ನಂಬಿಕೆಯಲ್ಲ. ಅದು ಜನರು ಪ್ರಶ್ನೆ ಮಾಡದಿರುವಂತೆ ಕಲ್ಪಿಸಿಕೊಂಡಿರುವ ಸಾಧನ"

ಸಂದರ್ಶನದಲ್ಲಿ ಚಿಂತಕ – ಡಾ. ಜಿ. ರಾಮಕೃಷ್ಣ

ಮೂಢನಂಬಿಕೆಗಳನ್ನು ನಿಷೇಧಿಸುವ ಕಾಯ್ದೆಯ ಬಗೆಗೆ ಕಾಯ್ದೆಯ ಪರವಾಗಿ ಮತ್ತು ವಿರೋಧವಾಗಿ ರಾಜ್ಯದಲ್ಲಿ ವ್ಯಾಪಕವಾದ ಚರ್ಚೆಯಾಗುತ್ತಿದೆ. ಕಾಯ್ದೆಯು ಜನರ ನಂಬಿಕೆಗಳನ್ನು ನಿಯಂತ್ರಿಸಲು ಹೊರಟಿದೆ, ಕಾಯ್ದೆಯಿಂದ ಜನರ ಧಾರ್ಮಿಕ ಹಕ್ಕುಗಳಿಗೆ ಧಕ್ಕೆಯಾಗುತ್ತದೆ ಎಂಬ ಟೀಕೆಗಳಿಂದ ಹಿಡಿದು ಈ ಕಾಯ್ದೆಯು 'ಬಹುಸಂಖ್ಯಾತ ಹಿಂದೂಗಳ ಮೇಲಿನ ದಾಳಿ', 'ಹಿಂದೂ ಧರ್ಮದ ಮೇಲಿನ ಹಲ್ಲೆ' ಎಂಬಲ್ಲಿಯವರೆಗೆ ಟೀಕೆಗಳು, ವಿರೋಧಗಳು ವ್ಯಕ್ತವಾಗುತ್ತಿವೆ.
ಈ ಹಿನ್ನೆಲೆಯಲ್ಲಿ 'ಹೊಸತು' ಪತ್ರಿಕೆಯ ಸಂಪಾದಕರು ಹಾಗೂ ಚಿಂತಕರೂ ಆದ ಡಾ. ಜಿ. ರಾಮಕೃಷ್ಣ ಅವರನ್ನು 'ಜನಶಕ್ತಿ'ಯು ಸಂದರ್ಶಿಸಿತು. ಡಾ. ಜಿ.ಆರ್. ಅವರು ಈ ಕಾಯ್ದೆಯ ಕರಡು ಸಿದ್ಧಗೊಳ್ಳುವ ಪ್ರಕ್ರಿಯೆಯಲ್ಲಿ ಪಾಲ್ಗೊಂಡವರು. ವಿಚಾರದ ಕುರಿತು ಅವರು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡಿದ್ದಾರೆ.

ಸಂದರ್ಶಿಸಿದವರು– ಆರ್.ಕೆ.

ಜನಶಕ್ತಿ: ಪ್ರಸ್ತಾವಿತ ಮೂಢನಂಬಿಕೆ ನಿಷೇಧ ಕಾಯ್ದೆಯ ಮುಖ್ಯತತ್ವ ಏನು ?


ಡಾ. ಜಿ. ರಾಮಕೃಷ್ಣ: ನಮ್ಮ ಭಾರತೀಯ ಪರಂಪರೆಯಲ್ಲೇ 'ಕಾರ್ಯಕಾರಣ ಭಾವ' ಎಂಬುದಕ್ಕೆ ಪ್ರಧಾನ್ಯತೆ ಕೊಡಲಾಗಿದೆ. ಬೌದ್ಧ, ಸಾಂಖ್ಯ, ಚಾರ್ವಾಕ, ಲೋಕಾಯತ, ಶರಣ ಪರಂಪರೆ ಮುಂತಾದವುಗಳೂ ಈ 'ಕಾರ್ಯಕಾರಣ ಭಾವ' ಆಧರಿಸಿವೆ. ಅದೇ ತತ್ವವೇ ಈ ಕಾಯ್ದೆಯ ಒಂದು ಮುಖ್ಯ ಆಧಾರ. ಅಂದರೆ ನಾವು ಮಾಡುತ್ತಿರುವುದರ ಅರ್ಥ ಏನು ? ಅದರಿಂದ ಉದ್ದೇಶಿತ ಗುರಿ ಈಡೇರುವುದೇ ಎಂಬ 'ಕಾರ್ಯ' ಮತ್ತು 'ಕಾರಣ'ಗಳ ಸಂಬಂಧಗಳ ಕುರಿತ ವಿವೇಚನೆ. ಆದರೆ ಇಲ್ಲಿ ಜನರ ನಂಬಿಕೆಯ ಪ್ರಶ್ನೆ ಬರುತ್ತದೆ. ಜನರ ನಂಬಿಕೆಗಳನ್ನು [illegible]ೂ ನಿಯಂತ್ರಿಸಲಾಗದು. ಯಾರಿಗೂ ಅಪಾಯವಿಲ್ಲದಂತಹ, ಬೇರೆ ವ್ಯಕ್ತಿಗೆ ಘಾಸಿಯಾಗದಂತಹ ನಂಬಿಕೆಯನ್ನು ಇಟ್ಟುಕೊಳ್ಳುವುದಕ್ಕೆ ಮತ್ತು ಆಚರಿಸುವುದಕ್ಕೆ ಜನರು ಸ್ವತಂತ್ರರು.

ಯಾವುದೇ ಆಚರಣೆ 'ಮನುಷ್ಯತ್ವದ ಘನತೆಗೆ ಚ್ಯುತಿ' ತರುವಂತಿದ್ದರೆ ಹಿಂಸೆಯನ್ನು ಪ್ರಚೋದಿಸಿದರೆ ಅದನ್ನು ನಿಷೇಧಿಸಬೇಕಾಗುತ್ತದೆ. ಬೆತ್ತಲೆ ಸೇವೆ, ನರಬಲಿ, ಅಘೋರಿ, ಸಿದ್ದುಭುಕ್ತಿ, ಮಾಟ, ಸಿಡಿ, ಗಾವು ಸಿಗಿತ, ಮುಂತಾದವು ಅಂಥವು. 'ಮಡೆಸ್ನಾನ'ದಂತಹ ಆಚರಣೆ ಕುರಿತು 'ಸ್ವತಃ ಅವರೇ ಮಾಡುತ್ತಿದ್ದಾರೆ' ಎಂಬುದು ಈ ಆಚರಣೆಯ ಸಮರ್ಥನೆಗೆ ಆಧಾರ ಆಗುವುದಿಲ್ಲ. ಅದು ಜನರ ಪ್ರಜ್ಞೆಗೆ ಸಂಬಂಧಪಟ್ಟ ವಿಚಾರ. ಜ್ಯೋತಿ ಬಾಪುಲೆಯಂತಹವರು ಬರುವ ಮುಂಚೆ ಅಸ್ಪೃಶ್ಯತೆಯನ್ನು ಅಸ್ಪೃಶ್ಯ ಜನರೇ ಒಪ್ಪಿಕೊಂಡು ಆಚರಿಸುತ್ತಿದ್ದರು. ಚರಿತ್ರೆಯಲ್ಲಿ ಇದು ಯಾಕೆ ಬಂದಿದೆ ಎಂದು [illegible]ಡುವುದು ಮುಖ್ಯ.

ಮಲೆಕುಡಿಯರೇ ಯಾಕೆ ಹೆಚ್ಚಾಗಿ ಮಡೆಸ್ನಾನ ಆಚರಿಸುತ್ತಾರೆ? ಅವರು ಪ್ರಶ್ನೆ ಕೇಳಬಾರದು–ಅಂತಹ ಸ್ಥಿತಿಯಲ್ಲಿ ಇರಬೇಕು. 15 ರೂಪಾಯಿ ಕೂಲಿಗೆ ಕೆಲಸ ಮಾಡುತ್ತಾರೆ–ಅವರು ಹೆಚ್ಚು ಕೂಲಿ ಕೇಳಬಾರದು. ಎಂಜಲ ಮೇಲೆ ಉರುಳಾಡುವುದರಿಂದ ಕುಷ್ಠರೋಗ ವಾಸಿಯಾಗುತ್ತದೆ ಎನ್ನುವವರು ತಾವೇ ಬಂದು ಅಲ್ಲಿ ಉರುಳಾಡುತ್ತಾರೋ ? ಪೇಜಾವರರಿಗೆ ಕುಷ್ಠರೋಗ ಒಡಿದಿರುವುದು ಅವರ ಮಿದುಳಿಗೆ. ಅವರು ಎಲ್ಲಿ ಹೋಗಿ ಉರುಳಿದರೂ ಅದು ವಾಸಿಯಾಗುವುದಿಲ್ಲ.

ಮೂಢನಂಬಿಕೆ ಎಂಬುದು ಬರೀ ನಂಬಿಕೆಯಲ್ಲ. ಅದು ಜನರು ಪ್ರಶ್ನೆ ಮಾಡದಿರುವಂತೆ ಕಲ್ಪಿಸಿಕೊಂಡಿರುವ ಸಾಧನ. ಮೂಢನಂಬಿಕೆಗಳನ್ನು ಉದ್ದೇಶಪೂರ್ವಕವಾಗಿ ಬಳಸಲಾಗಿದೆ. ಮೂಢನಂಬಿಕೆ ಬಲಿಯಾದ ವ್ಯಕ್ತಿಗೆ ಈ ಆಚರಣೆಗೆ ಸಮ್ಮತಿ ಇತ್ತು ಅನ್ನುವುದು ಕೂಡ ಒಪ್ಪಲಾಗದಂತಹ ವಾದ.

ಜನರ ಪ್ರಜ್ಞಾವಲಯವನ್ನು ವಿಸ್ತರಿಸಲು ನಾವು ಏನು ಮಾಡಬೇಕು ಎಂಬುದು ಮುಖ್ಯ.



ಸರ್ಕಾರ ಒಂದು ಒಳ್ಳೆಯ ಆಸ್ಪತ್ರೆಯನ್ನು ಕಟ್ಟಿಸಿ ಅಲ್ಲಿ ವೈದ್ಯರು ಬಂದ ರೋಗಿಗಳನ್ನ ಸರಿಯಾಗಿ ಮಾತನಾಡಿಸಿ ಚಿಕಿತ್ಸೆ–ಔಷಧಿಕೊಟ್ಟರೆ ಕ್ರಮೇಣ ಜನರು ಆಸ್ಪತ್ರೆಗೆ ಬರುತ್ತಾರೆ. ಅವರು (ಬೆಂಗಳೂರಿನ)'ಕಾಟನ್ ಪೇಟೆ'ಯಲ್ಲಿ ಹೋಗಿ ಕ್ಯೂ ನಿಂತು ಯಂತ್ರ–ತಾಯತ ಕಟ್ಟಿಸುವುದು ತಪ್ಪುತ್ತದೆ.

ಐಟಿ ವಲಯದಲ್ಲಿ ಉದ್ಯೋಗದ ಅಸ್ಥಿರತೆ ಇದೆ. ಕೆಲಸ ಹೋಗಬಾರದು. ಅತಂತ್ರ ಸ್ಥಿತಿಯಲ್ಲಿರುವ ಅವರಿಗೆ ಆತು ಕೊಳ್ಳಲು ಏನಾದರೂ ಬೇಕು. ಮೂಢನಂಬಿಕೆಗಳಿಗೆ ಜೋತು ಬೀಳುತ್ತಾರೆ. ಜನರ ಜೀವನದ ಅಭದ್ರತೆ ನಿವಾರಿಸುವುದು ಮುಖ್ಯ.


ಜನಶಕ್ತಿ: ಈ ಕಾಯ್ದೆ ಹಿಂದೂ ಧರ್ಮದ ವಿರುದ್ಧ ಹಲ್ಲೆ, ಬಹುಸಂಖ್ಯಾತರ ನಂಬಿಕೆಯ ಮೇಲಿನ ಧಾಳಿ ಅಂತ ಬಹಳ ಪ್ರಚಾರ ನಡೆದಿದೆಯಲ್ಲ !!!

ಜಿ.ಆರ್.: ಕಾಯ್ದೆಯು ಯಾವುದೇ ಒಂದು ಧರ್ಮದ ವಿರುದ್ಧ ಇಲ್ಲ. ಅದು ಸ್ಪಷ್ಟವಾಗಿದೆ. ಕಾಯ್ದೆಯ ಕರಡಿನಲ್ಲಿ 'ಕಾನೂನಿನ ಸ್ವರೂಪ ಸೂಚಿಯಲ್ಲಿ' 'ಯಾವುದೇ ಮತಧರ್ಮಕ್ಕೆ ಸಂಬಂಧಿಸಿದ ಮೌಢ್ಯಪ್ರೇರಕ ... ..." ಎಂಬ ಭಾಗವನ್ನು ನೋಡಿ.

ಕಾಯ್ದೆಯಿಂದ ಭಾರತೀಯ ಸಂಸ್ಕೃತಿಗೆ ಧಕ್ಕೆಯಾಗುತ್ತದೆ ಎಂಬ ವಾದವೂ ಇದೆ. ಕೆಲವು ಮೂಢನಂಬಿಕೆಯ ಆಚರಣೆಗಳನ್ನು ನಿಷೇಧಿಸುವುದರಿಂದ ಭಾರತೀಯ ಸಂಸ್ಕೃತಿಗೆ ಧಕ್ಕೆ ಹೇಗಾಗುತ್ತದೆ!! ಹಾಗಿದ್ದರೆ ಭಾರತೀಯ ಸಂಸ್ಕೃತಿ ಅಷ್ಟು ದುರ್ಬಲವೇ, ಅಷ್ಟು ಪೇಲವವೇ ಎಂಬ ಪ್ರಶ್ನೆ ಏಳುತ್ತದೆ. ಭಾರತೀಯ ಸಂಸ್ಕೃತಿ ಅಷ್ಟು ದುರ್ಬಲ ಅಲ್ಲ. ಅದು ಸಾವಿರಾರು ವರ್ಷಗಳಿಂದ ಉಳಿದುಕೊಂಡು ಬಂದಿದೆ.

ಸಂಪ್ರದಾಯ, ನಂಬಿಕೆ ಹೆಸರಿನಲ್ಲಿ ಒಬ್ಬ ವ್ಯಕ್ತಿ ತನಗೆ ತಾನೆ ಹಿಂಸೆ ಮಾಡಿಕೊಂಡರೂ ಅದು ತ್ಯಾಜ್ಯವೇ. ಅದನ್ನು ಬಿಡಬೇಕಾಗುತ್ತದೆ. ಯಾವುದೇ ಧರ್ಮದಲ್ಲಿ ಇಂತಹ ಆಚರಣೆ ಇರಲಿ ಅದನ್ನು ನಿಷೇಧಿಸಬೇಕಾಗುತ್ತದೆ. ಎಲ್ಲ ಧರ್ಮಕ್ಕೂ ಇದು ಅನ್ವಯಿಸುತ್ತದೆ. ನಮ್ಮ ಧರ್ಮದ ಮೇಲೆ ಹಲ್ಲೆ ನಡೆಯುತ್ತಿದೆ, ಧಾಳಿ ನಡೆಯುತ್ತಿದೆ ಎಂದು ಜನರನ್ನು ಎತ್ತಿಕಟ್ಟಲು ಯತ್ನಿಸುವವರಿಗೆ ಜನರಲ್ಲಿ ಭೀತಿ ಉಂಟುಮಾಡಿ ರಾಜಕೀಯ ಲಾಭ ಮಾಡಿಕೊಳ್ಳುವ ದುರುದ್ದೇಶವಿರುತ್ತದೆ. ಈ ಪ್ರಚಾರ ಮತ್ತು ಪ್ರಯತ್ನದ ಹಿಂದೆ ಕೋಮುವಾದಿ ಶಕ್ತಿಗಳು ಕೆಲಸ ಮಾಡುತ್ತಿರುತ್ತವೆ.

ಜನಶಕ್ತಿ: ಜನರ ನಂಬಿಕೆಗಳನ್ನು ಪ್ರಶ್ನಿಸಲು 'ಸಾಹಿತಿ–ಬುದ್ಧಿಜೀವಿ'ಗಳಿಗೇನು ಅಧಿಕಾರ ಇದೆ ಎಂಬ ಪ್ರಶ್ನೆ ಕೇಳಿಬರುತ್ತಿದೆ. ಅದಕ್ಕೆ ನೀವೇನು ಹೇಳುವಿರಿ. ?



ಜಿ.ಆರ್.: ಕರ್ನಾಟಕ ರಾಜ್ಯ ಸರ್ಕಾರವು ಮೂಢನಂಬಿಕೆ ವಿರೋಧಿ ಕಾಯ್ದೆಯ ಕರಡು ರೂಪಿಸಿಕೊಡಿ ಎಂದು ರಾಷ್ಟ್ರೀಯ ಕಾನೂನು ಶಾಲೆ (ಎನ್‌ಎಲ್‌ಎಸ್‌ಐಯು)ಗೆ ಅಧಿಕೃತವಾಗಿ ಪತ್ರ ಬರೆದಿತ್ತು.

ಈ ರಾಷ್ಟ್ರೀಯ ಕಾನೂನು ಶಾಲೆ 'ಕರ್ನಾಟಕ ಮೂಢನಂಬಿಕೆ ಆಚರಣೆಗಳ ಪ್ರತಿಬಂಧಕ ವಿಧೇಯಕ, 2013'ರ ಕರಡು ರೂಪಿಸಿ ಸರ್ಕಾರಕ್ಕೆ ಸಲ್ಲಿಸಿದೆ. ಇಂತಹ ಕರಡು ರೂಪಿಸುವ ಪ್ರಕ್ರಿಯೆಯಲ್ಲಿ ಕಾನೂನು ಶಾಲೆಯವರು ತಮಗೆ ಸಂಪರ್ಕದಲ್ಲಿರುವ ಹಲವರನ್ನು ಕರೆದು ಚರ್ಚಿಸಿದ್ದಾರೆ. ಇದೇನು ಅಧಿಕೃತ ಸಮಿತಿ ಸಭೆಯಲ್ಲ. ಸಲಹೆ ಪಡೆದುಕೊಳ್ಳಲು ಕರೆದ ಅನೌಪಚಾರಿಕ ಸಭೆಯಷ್ಟೆ ಅದು. ಇಂತಹ ಕೆಲವು ಸಭೆಯಲ್ಲಿ ವಿನಂತಿಸಿದ್ದರಿಂದ ನಾನು ಸಭೆಯ ಅಧ್ಯಕ್ಷತೆ ವಹಿಸಿದ್ದೆ. ನಾನಿಲ್ಲದಾಗ ಬೇರೆಯವರೂ ಅಧ್ಯಕ್ಷತೆ ವಹಿಸಿದ್ದಾರೆ. ಅದು ಸಭೆಯ ಅಧ್ಯಕ್ಷತೆ ಅಷ್ಟೆ. ಕಾನೂನು ಶಾಲೆ ರೂಪಿಸಿ ಕೊಟ್ಟಿರುವುದು ಕರಡು ಮಸೂದೆಯಷ್ಟೆ. ಇದನ್ನೇ ಅಂಗೀಕರಿಸಿಬಿಡಬೇಕು ಅಂತ ಎಲ್ಲೂ ಹೇಳಿಲ್ಲ. ಈ ಕರಡು ಮಸೂದೆಯ ಬಗೆಗೆ ವ್ಯಾಪಕವಾದ ಚರ್ಚೆ ನಡೆಯಬೇಕು. ಸಮಾಜದ ಎಲ್ಲ ವಿಭಾಗಗಳಿಂದ ಅಭಿಪ್ರಾಯಗಳನ್ನು ಪಡೆದುಕೊಳ್ಳಬೇಕು. ಶಾಸಕಾಂಗ ಮಸೂದೆಯ ಕುರಿತು ಚರ್ಚೆಮಾಡಿ ಯಾವುದೇ ಅಂಶವನ್ನು ತಿದ್ದುಪಡಿ ಮಾಡಬಹುದು, ಯಾವುದೇ ಅಂಶವನ್ನು ಸೇರ್ಪಡೆ ಮಾಡಬಹುದು. ತೆಗೆದುಹಾಕಬಹುದು.

ಇದಲ್ಲದೇ ಕಾನೂನು ರೂಪಿಸುವದರಿಂದಷ್ಟೆ ಮೂಢನಂಬಿಕೆಗಳ ನಿವಾರಣೆ ಆಗುವುದಿಲ್ಲ. ವ್ಯಾಪಕವಾದ ಜನಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂಬುದನ್ನು ಕರಡು ಕಾಯ್ದೆಯಲ್ಲಿಯೂ ಸಹ ಸೂಚಿಸಲಾಗಿದೆ.

ಜನಪದ ಕಲಾವಿದೆ ಮಾದರ ಎಲಿಸವ್ವಗೆ ದೇವದಾಸಿ ಮಹಿಳಾ ವಿಮೋಚನಾ ಸಂಘದಿಂದ ಸನ್ಮಾ



2013–14ನೇ ಸಾಲಿನ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತೆ, ದೇವದಾಸಿ ಮಹಿಳೆ ಎಲಿಸವ್ವ ಮಾದಾರ ಅವರನ್ನು ಕರ್ನಾಟಕ ರಾಜ್ಯ ದೇವದಾಸಿ ಮಹಿಳಾ ವಿಮೋಚನಾ ಸಂಘವು ಆತ್ಮೀಯವಾಗಿ ಸನ್ಮಾನಿಸಿ, ಅಭಿನಂದನೆ ಸಲ್ಲಿಸಿತು.

ಹರಪನಹಳ್ಳಿ ತಾಲ್ಲೂಕಿನ ಉಚ್ಚ ಂಗಿ ದುರ್ಗ ಗ್ರಾಮದಲ್ಲಿರುವ ಎಲಿಸವ್ವ ಅವರ ಮನೆಗೆ ತೆರಳಿದ ಸಂಘದ ಪದಾಧಿಕಾರಿಗಳು, ಎಲಿಸವ್ವ ಅವರಿಗೆ ಸೀರೆ, ರವಿಕೆ, ಶಾಲು, ಫಲಪುಷ್ಪ ಹಾಗೂ ಹೂವಿನ ಹಾರ ಹಾಕಿ ಸನ್ಮಾನಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಹಿರಿಯ ಜನಪದ ಕಲಾವಿದೆ ಎಲಿಸವ್ವ, ರಾಜ್ಯ ಸರ್ಕಾರ ದೇವದಾಸಿ ಮಹಿಳೆಯರಿಗೆ ತಿಂಗಳಿಗೆ 400ರೂ ಮಾಸಾಶನ ನೀಡುತ್ತಿದೆ. ಬೆಲೆ ಏರಿಕೆಯ ಈ ದಿನಗಳಲ್ಲಿ ಈ ಮಾಸಾಶನದಿಂದ ಇವರು ಜೀವನ ನಡೆಸಲು ಕಷ್ಟವಾಗುತ್ತದೆ. ಆದ್ದರಿಂದ ಸರ್ಕಾರ ಇವರಿಗೆ ರೂ. 1,500ಕ್ಕೆ ಮಾಸಾಶನ ಹೆಚ್ಚಿಸಬೇಕು ಹಾಗೂ ಎಲ್ಲಾ ದೇವದಾಸಿಯರಿಗೆ ಎರಡು ಎಕರೆ ಕೃಷಿಜಮೀನು ನೀಡಬೇಕು ಎಂದು ಒತ್ತಾಯಿಸಿದರು.

ರಾಜ್ಯ ದೇವದಾಸಿ ಮಹಿಳಾ ವಿಮೋಚನಾ ಸಂಘದ ಪ್ರಧಾನ ಕಾರ್ಯದರ್ಶಿ ಟಿ.ವಿ. ರೇಣುಕಮ್ಮ ಮಾತನಾಡಿ, ಎಲಿಸವ್ವ ಅವರಿಗೆ ಸಂದಿರುವ ರಾಜ್ಯೋತ್ಸವ ಪ್ರಶಸ್ತಿ ಇಡೀ ದೇವದಾಸಿ ಮಹಿಳಾ ಸಮುದಾಯಕ್ಕೆ ಸಂದ ಪ್ರಶಸ್ತಿ. ಜನಪದ ಕಲ್ಲಾವಿದೆಯಾಗಿರುವ ಇವರಿಗೆ ವಸತಿ ಮತ್ತು ಆರೋಗ್ಯ ಸೌಲಭ್ಯಗಳನ್ನು ಸರ್ಕಾರ ಕಲ್ಪಿಸಬೇಕು.

ಎಲಿಸವ್ವ ಅವರ ಜನಪದ ಹಾಡುಗಳ ದಾಖಲೀಕರಣ ಆಗಬೇಕು. ಈ ನಿಟ್ಟಿನಲ್ಲಿ ಅವರ ಹಾಡುಗಳನ್ನು ಧ್ವನಿಮುದ್ರಣ ಹಾಗೂ
ಮೂಲಕ ಸಂರಕ್ಷಿಸುವ ಕೆಲಸ ಆಗಬೇಕು.
ನಿಟ್ಟಿನಲ್ಲಿ ಜಿಲ್ಲೆಯ ಜನಪ್ರತಿನಿಧಿಗಳು ಗ
ಹರಿಸಬೇಕು ಎಂದು ಒತ್ತಾಯಿಸಿದರು.

ಸನ್ಮಾನ ಕಾರ್ಯಕ್ರಮದಲ್ಲಿ ಸಂಘದ ರ
ಘಟಕದ ಉಪಾಧ್ಯಕ್ಷೆ ಟಿ. ಪದ್ಮಾವತಿ, ತಾಲ
ಘಟಕದ ಅಧ್ಯಕ್ಷೆ ಕೆ. ಕೆಂಚಮ್ಮ, ಉಪಾಧ್ಯಕ್ಷೆಯ
ತಿರುಕಮ್ಮ ಪೂಜಾರಿ, ತಾಲೂಕು ಕಾರ್ಯದ
ಕೆ.ಅಂಜಕ್ಕ, ಕೆಂಚಮ್ಮ ಮತ್ತು ಸದಸ್ಯೆಯರ
ದಡಾರಮ್ಮ, ದುರುಗಮ್ಮ, ಬಸಮ್ಮ, ಕೆ. ಅಂಜಿ
ಮತ್ತು ದೇವದಾಸಿ ಮಹಿಳೆಯರು ಹಾಜರಿದ್ದ

ವರದಿ : ಕರಿಬಸಪ್ಪ ಪ
ಬಾ

ಚಿಲ್ಲರೆ ವ್ಯಾಪಾರದಲಿ......

ಪುಟ 10 ರಿಂದ

ಬಹಳಷ್ಟು ಕಡಿತ ಮಾಡಬಹುದು ಎಂಬುದು ಮತ್ತು ಇಡೀ ಸಾರ್ವಜನಿಕ ಒಟ್ಟು ಮೊತ್ತವನ್ನ ರಿಲಯನ್ಸ್ ಹಾಗೂ ವಾಲ್‌ಮಾರ್ಟ್‌ನಂತಹ ಬಹುರಾಷ್ಟ್ರೀಯ ಕಂಪನಿಗಳಿಗೆ ದಕ್ಕುವಂತೆ ಮಾಡುವುದು. ಎರಡನೆಯದಾಗಿ, ಕೃಷಿ ಉತ್ಪನ್ನಗಳನ್ನು ಖರೀದಿಸಬೇಕಿಲ್ಲ ಮತ್ತು ಅದನ್ನ ಕ್ರೋಢೀಕರಿಸಿ ಸರಬರಾಜು ಮಾಡುವ ಅಗತ್ಯವಿಲ್ಲ. ಹೀಗಾಗಿ 40,000 ಕೋಟಿಗೂ ಅಧಿಕ ಬಂಡವಾಳ ಹೊಂದಿದ್ದ ಎಫ್‌ಸಿಐ ಮುಂತಾದ ಇಲಾಖೆಗಳನ್ನು ಮುಚ್ಚಿಹಾಕಬಹುದು. ಅದೇ ರೀತಿ ಆ ಮೂಲಕ ರೈತರನ್ನ ಬಂಡವಾಳದಾರರ ಜೊತೆಗೆ ಸ್ಪರ್ಧಿಸುವಂತೆ ಮಾಡಿ ನಾಶಗೊಳ್ಳಲು ಬಿಡಬಹುದು. ಮೂರನೆಯದಾಗಿ, ತೆ-ರೆದ ಅಂದರೆ ಮುಕ್ತ ಮಾರುಕಟ್ಟೆಯನ್ನ ಬಲಗೊಳಿಸಬಹುದು. ಇದರಿಂದ ಬಾರಿ ಬಂಡವಾಳವನ್ನು ಅವರು ಕ್ರೋಢೀಕರಿಸಿಕೊಳ್ಳಲು ಅವಕಾಶವಾಗುವುದು. ನಾಲ್ಕನೆಯದಾಗಿ ಹಣದ ರೂಪದ ಸಹಾಯ ಧನ ನೀಡುವುದರಿಂದ ಬಡವರನ್ನ–ರೈತರನ್ನ ತಮ್ಮ ರಾಜಕೀಯ ನೆಲೆಯಾಗಿಸಿಕೊಂಡು ಕಳೆದು ಹೋಗುತ್ತಿರುವ ತಮ್ಮ ನೆಲೆಯನ್ನ ಭರ್ತಿಮಾಡಿಕೊಳ್ಳುವುದು ಮತ್ತು ತಮ್ಮ ಹಿಂಬಾಲಕರಿಗೆ ಆದಾಯವನ್ನ ಸೃಷ್ಟಿಮಾಡುವುದು.

ಚಿಲ್ಲರೆ ವ್ಯಾಪಾರದಲ್ಲಿ ಬಹುರಾಷ್ಟ್ರೀಯ ಬಂಡವಾಳ

ಚಿಲ್ಲರೆ ವ್ಯಾಪಾರದಲ್ಲಿ ಇಲ್ಲಿಯವರೆಗೆ ದೊಡ್ಡ ಬಂಡವಾಳದಾರರ ಪ್ರವೇಶವನ್ನ ತಡೆಹಿಡಿಯಲಾಗಿತ್ತು. ಹೀಗಾಗಿ ಚಿಲ್ಲರೆ ವ್ಯಾಪಾರದಲ್ಲಿ ದೇಶದಾದ್ಯಂತ ಕೋಟಿ ಕೋಟಿ ಕುಟುಂಬಗಳು ಬದುಕಿನ ದೊಡ್ಡ ಬಂಡವಾಳದಾರರು ಮಾತ್ರವಲ್ಲ, ಬಹುರಾಷ್ಟ್ರೀಯ ಕಂಪನಿಗಳು ಬಂಡವಾಳವನ್ನು ತೊಡಗಿಸಲು ಕೇಂದ್ರ ಸರ್ಕಾರ ಅನುವು ಮಾಡಿಕೊಟ್ಟಿದೆ. ಇದ-ರಿಂದ ಇವರೊಂದಿಗೆ ಸ್ಪರ್ಧಿಸಲಾಗದೆ ಒಂದೆಡೆ ಕೋಟಿ ಕೋಟಿ ಕುಟುಂಬಗಳ ಉದ್ಯೋಗ ಹಾನಿ ಮತ್ತು ಚಿಲ್ಲರೆ ವ್ಯಾಪಾರದಲ್ಲಿ ಗುತ್ತಿಗೆ ಏರ್ಪಟ್ಟು ಗ್ರಾಹಕರ ಭಾರಿ ಕೊಳ್ಳೆಗೆ ಕಾರಣವಾಗಲಿದೆ ಎಂಬ ಆತಂಕವಿದೆ.

ಉದಾರಣೆಗೆ :

ರಿಲಯನ್ಸ್ ಕಂಪನಿಯು ತೆರೆದ ಭಾರಿ ಚಿಲ್ಲರೆ ವ್ಯಾಪಾರ ಮಳಿಗೆಗಳಲ್ಲಿ ಪ್ರತಿಯೊಂದರಲ್ಲೂ 2 ಸಾವಿರ ಕೋಟಿಗೂ ಅಧಿಕ ಬಂಡವಾಳವನ್ನ ಹೂಡಿದೆ. ಒಂದೇ ಮಳಿಗೆಯಲ್ಲಿ 5 ಲಕ್ಷಕ್ಕೂ ಅಧಿಕ ಸಾಮಾನುಗಳು ಮಾರಾಟಕ್ಕೆ ಇರುವುದು ಕಂಡುಬಂದಿದೆ. ಸಾಮಾನ್ಯವಾಗಿ ಈಗಿನ ನಮ್ಮ ಚಿಲ್ಲರೆ ಅಂಗಡಿಗಳಲ್ಲಿ ಅಬ್ಬಬ್ಬಾ ಎಂದರೆ ಐವತ್ತೋ ಅಥವಾ ನೂರೋ ಸಾಮಾನುಗಳು ಲಭ್ಯವಿರಬಹುದು. ಇಲ್ಲಿ ಹಾಗಲ್ಲ, ತರಹೇವಾರಿ ಚಿಲ್ಲರೆ ವ್ಯಾಪಾರ ಏನೇನೋ, ಯಾವ ಯಾವ ವಿಧದಲ್ಲಿ ನಡೆಯುತ್ತದೆಯೋ ಅದೆಲ್ಲಾ ಒಂದೇ ಮಳಿಗೆಯಲ್ಲಿ ಅದುಕೂಡ ಬೇರೆಡೆಗಿಂತ ಆರಂಭದಲ್ಲಿ 2–3 ರೂಪಾಯಿ ಕಡಿಮೆ ಬೆಲೆಗೆ ಮತ್ತು ಕೆಲವೊಮ್ಮೆ ಗ್ರಾಹಕರನ್ನ ಸೆಳೆಯಲು ಇನ್ನೂ ಕಡಿಮೆ ಬೆಲೆಗೆ ಮತ್ತು ಉತ್ತಮಗುಣಮಟ್ಟದ ಸರಕುಗಳನ್ನ ಹಾಗು ರಾಸಾಯನಿಕ ಬಳಕೆಯೊಂದಿಗೆ ತಾಜಾವಾಗಿ ಸಂರಕ್ಷಿಸಿದ ತರಕಾರಿಗಳನ್ನು ಮಾರಾಟ ಮಾಡಲಾಗುತ್ತದೆ. ಇದಕ್ಕಾಗಿ ಇಂತಹ ಕಂಪನಿಗಳು ಗುತ್ತಿಗೆ ಕೃಷಿ ಹಾಗೂ ಮುಂಗಡ ವ್ಯಾಪಾರದಲ್ಲಿ ಕಡಿಮೆ ಬೆಲೆಗೆ ಖರೀದಿಸಿದ ಸರಕುಗಳನ್ನು ಬಳಸುತ್ತವೆ. ಗ್ರಾಹಕರನ್ನ ಸಂತೃಪ್ತಿ ಪಡಿಸಲು ತರಹೇವಾರಿ ಮನೋರಂಜನೆ ಕಾರ್ಯಕ್ರಮಗಳನ್ನು ನಡೆಸುತ್ತವೆ. ಆ ಮೂಲಕ ಎಲ್ಲಾ ರೀತಿಯ ವಿವಿಧ ನಮೂನೆ ಚಿಲ್ಲರೆ ವ್ಯಾಪಾರವನ್ನ ಸ್ಪರ್ದೆಯಲ್ಲಿ ನಾಶಪಡಿಸಿ ಏಕಮೇವಾಧಿಪಥ್ಯ ಪಡೆಯಲಿವೆ. ಆನಂತರ ಜನತೆಗೆ ಗ್ರಾಹಕರಿಗೆ ಇತರೆ ವ್ಯವಹಾರದ ಅವಕಾಶ ಸಿಗದಾದಾಗ ಬೆಲೆಗಳನ್ನ ಏರಿಸಿ, ಏರಿಸಿ, ಏರಿಸಿದ ಬೆಲೆಗೆ ಜನರನ್ನ ಕೊಳ್ಳೆಹೊಡೆಯಲು ಮುಂದಾಗುತ್ತವೆ. ಚಿಲ್ಲರೆ ಕಿರಾಣಿ ಅಂಗಡಿಗಳು ಸಣ್ಣ ಬಟ್ಟೆ ಅಂಗಡಿಗಳು, ಪಾನ್‌ಬೀಡಾ ಅಂಗಡಿಗಳು, ಕೂಲ್ ಡ್ರಿಂಕ್ ಶಾಪ್‌ಗಳು, ಕಟ್ಟಿಂಗ್ ಶಾಪ್‌ಗಳು ಬೀದಿಬದಿಯ ವ್ಯಾಪಾರಿಗಳು ಮತ್ತು ತರಕಾರಿ ವ್ಯಾಪಾರಿಗಳು, ಜೆರಾಕ್ಸ್, ಕಂಪ್ಯೂಟರ್ ಮತ್ತಿತರೆ ಶಾಪ್‌ಗಳು ಮಾಂಸದ ಅಂಗಡಿಗಳು ಇದರಿಂದ ಮುಚ್ಚಲ್ಪಡುವ ಅಪಾಯಗಳಿವೆ.

ವಾಲ್ ಮಾರ್ಟ್ ಕಂಪನಿಯ ಬೆಳವಣಿಗೆಯು ಇದರ ಅಪಾಯಗಳನ್ನ ಸರಿಯಾಗಿ ವಿವರಿಸಬಲ್ಲದಾಗಿದೆ. ಸದರಿ ಕಂಪನಿಯು 1968 ರಲ್ಲಿ ಅಮೇರಿಕಾ ದಕ್ಷಿಣ ಪ್ರಾಂತದ ಅರ್ಕನ್ಸಾಸ್ ಎಂಬ ಸಣ್ಣ ಊರಿನಲ್ಲಿ ತಲೆ ಎತ್ತಿದ್ದು, ಇಂದು ವಿಶ್ವದ ಒಂದು ಡಜನ್‌ಗೂ ಹೆಚ್ಚುದೇಶಗಳಲ್ಲಿ ವ್ಯಾಪಿಸಿ 5,000 ಕ್ಕೂ ಅಧಿಕ ಮಳಿಗೆಗಳನ್ನ ಹೊಂದಿದ ದೈತ್ಯ ಕಂಪನಿಯಾಗಿದೆ. ಅಮೇರಿಕಾದ ಅತ್ಯಂತ ದೊಡ್ಡಕಂಪನಿಯಾಗಿ ತನ್ನ ಸೇವೆಯಲ್ಲಿ ಕಾರ್ಮಿಕರ ಹಕ್ಕುಗಳೇ ಇಲ್ಲದ 15 ಲಕ್ಷ ಕಾರ್ಮಿಕರನ್ನ ತೊಡಗಿಸಿಕೊಂಡಿದೆ, ಕೆನಡಾ ದೇಶದ ಚಿಲ್ಲರೆ ಮಾರುಕಟ್ಟೆಯ ಶೇ. 52 ಕ್ಕೂ ಅಧಿಕ ಭಾಗವನ್ನ ಇದು ಆಕ್ರಮಿಸಿದೆ.

ಪ್ರತಿಭಟಿಸುವುದೊಂದೇ ಮಾರ್ಗ

ಒಟ್ಟಾರೆ, ಗುತ್ತಿಗೆ ಕೃಷಿ–ಕಂಪನಿ ಕೃಷಿ, ಮುಂಗಡ ವ್ಯಾಪಾರ ಮತ್ತು ಚಿಲ್ಲರೆ ವ್ಯಾಪಾರದಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಪ್ರವೇಶ ಈ ಎಲ್ಲವೂ ಕೂಡ ಒಂದಾಗಿ ಗ್ರಾಮೀಣ ಪ್ರದೇಶ ಬಹು ಸಂಖ್ಯಾತ ರೈತಾಪಿ ಹಾಗೂ ಕೂಲಿಕಾರರನ್ನ ಮತ್ತು ಇತರೇ ಕೃಷಿ ಅವಲಂಬಿತರನ್ನೂ ಬೀದಿಗೆ ತಳ್ಳುವ ಹಾಗೂ ಅದೇ ರೀತಿಯಾಗಿ ಸಣ್ಣ ವ್ಯಾಪಾರಿಗಳ ನಾಶ ಪಡಿಸುವ ಮತ್ತು ದೇಶದ ಎಲ್ಲಾ ಗ್ರಾಹಕರನ್ನ ಕೊಳ್ಳೆಹೊಡೆಯುವ ಏಕೈಕ ಉದ್ದೇಶ ಹೊಂದಿವೆ. ಇವರನ್ನ ಭೂಮಿಯಿಂದ ಹಾಗೂ ಉದ್ಯೋಗದಿಂದ ಹೊರದೂಡಿ, ಇರುವ ಇದ್ದಬದ್ದ ಉಳಿಕೆಗಳೆನ್ನೆಲ್ಲಾ ನುಂಗಿ ಭಾರತದಲ್ಲಿ ಮತ್ತೊಂದು 'ಹೊಟ್ಟೆಯನ್ನ ಬೆನ್ನಿಗಂಟಿಸಿಕೊಂಡ ಮೂಳೆ ಚಕ್ಕಳವಾದ ಬೃಹತ್ ಸೋಮಾಲಿಯಾ' ಸ್ಥಾಪಿಸುವ ಉದ್ದೇಶಹೊಂದಿವೆ ಎಂದು ಸ್ಪಷ್ಟ
ಗೋಚರಿಸುತ್ತದೆ. ಸ್ವಾತಂತ್ರ್ಯ ನುಚ್ಚುನೂ
ಬಹುರಾಷ್ಟ್ರೀಯ ಸಂಸ್ಥೆಗಳ
ಪ್ರಜಾಸತ್ತೆಯನ್ನ ಬಲಿಕೊಡುವ ಸಂಚು ಕ
ಬರುತ್ತಿದೆ. ಕೇವಲ ಒಂದೇ 'ಈಸ್ಟ್ ಇಂಡಿ
ಕಂಪನಿ', 200 ವರ್ಷಗಳ ಕಾಲ ಈ ದೇಶ
ಗುಲಾಮಿಯಾಗಿ ಮಾಡಿಕೊಂಡು ಲ
ಮಾಡಿದ್ದು, ಅದರಿಂದ ಸ್ವಾತಂತ್ರ್ಯ ಪಡೆಯ
ಮಾಡಿದ ಅಪಾರ ತ್ಯಾಗ ಬಲಿದಾನದ ಸುದೀ
ಅನುಭವ ನಮಗಿದ್ದಾಗಲೂ, ಜಗತ್ತಲ್ಲೇ
ಬಹುರಾಷ್ಟ್ರೀಯ ಸಂಸ್ಥೆಗಳು ನಮಗೆ ಲ
ಮಾಡಿಕೊಡುತ್ತವೆ ಎಂಬ ಅಪಹಾಸ್ಯದ ಗುಲಾ
ಮಾತುಗಳನ್ನು ನಾಚಿಕೆಯಿಲ್ಲದೆ ಹೇಳಲಾಗುತ್ತ
ಅದ್ದರಿಂದ ಬಾಧಿತರೆಲ್ಲರೊಂದಿಗೆ ಸೇರಿ ಬಲವ
ಪ್ರತಿರೋಧಿಸುವುದು ಹಾಗೂ ರಾಜಕೀಯವ
ಸೆಣಸುವುದೊಂದೇ ನಮಗಿರುವ ದಾರಿಯಾಗ
(ಮುಗಿಯಿತು)



ನವೆಂಬರ್ 7–8 ರಂದು ಬೆಂಗಳೂರಿನಲ್ಲಿ ನಡೆದ ಭೂಮಿ ಹಕ್ಕಿಗಾಗಿ ಮತ್ತು ರೈ
ಬದುಕು ರಕ್ಷಣೆಗಾಗಿ ರಾಜ್ಯವ್ಯಾಪಿ ಹೋರಾಟ–ಅಹೋರಾತ್ರಿ ಪ್ರತಿಭಟನಾ ಧರಣ
(ರಾಜ್ಯವ್ಯಾಪ್ತಿ ಹೋರಾಟದ ವಿವರ ಪುಟ 14 ರಲ್ಲಿ)

ದೇಶದ ಆರ್ಥಿಕ ಸಂಕಟದಲ್ಲಿ ವಿದೇಶಿ ಹೂಡಿಕೆಯ ಪಾತ್ರ
ರಿಝರ್ವ್ ಬ್ಯಾಂಕ್ ಸರ್ವೆಯ ದೃಢೀಕರಣ

ಎನ್.ಕೆ. ವೇದರಾಜ

ಶದಲ್ಲಿ ಈಗ ಪಾವತಿ ಬಾಕಿ ಸಮಸ್ಯೆ ಕಂಡು ಬರಲು, ಚಾಲ್ತಿ ಖಾತೆ ಕೊರತೆ ಸಲು ವಿದೇಶಿ ಹೂಡಿಕೆಗಳಿಗೆ ಸಾಕಷ್ಟು ಶ ಒದಗಿಸದಿರುವುದೇ ಕಾರಣ, ಆದ್ದರಿಂದ 'ಸುಧಾರಣೆ'ಗಳು ಅಗತ್ಯ ಎಂಬುದು ಎ-2 ಸರಕಾರದ ಮುಖಂಡರ ವಾದ. ಇತ್ತೀಚೆಗೆ ಪ್ರಕಟವಾದ ಭಾರತೀಯ ರ್ ಬ್ಯಾಂಕಿನ ವಿದೇಶಿ ಸಹಯೋಗಗಳ ಎಂಟನೇ ಸರ್ವೆಯ ಪ್ರಾಥಮಿಕ ಂಶಗಳು ಹೇಳುವ ಕತೆಯೇ

ಸರ್ವೆ 2007-10ರ ಅವಧಿಯ ಪರಿಶೀಲನೆ . ಹಿಂದಿನ 7ನೇ ಸರ್ವೆ 1994-2001ರ ಯದ್ದಾಗಿತ್ತು. ಅದಕ್ಕೆ ಮೊದಲಿನ 6ನೇ 986-94ರ ಅವಧಿಯದ್ದು. ಆದ್ದರಿಂದ ಈ ಸರ್ವೆಗಳ ಹೋಲಿಕೆ ನವ-ಉದಾರವಾದಿ ಳು ವಿದೇಶಿ ಹೂಡಿಕೆಗಳಿಗೆ ಎಷ್ಟು ಶ ಒದಗಿಸಿವೆ, ಅದರಿಂದ ದೇಶಕ್ಕಾಗಿರುವ ಜನವೇನು ಎಂಬುದರ ಒಂದು ಚಿತ್ರವನ್ನು ತ್ತದೆ.

ದಲನೆಯದಾಗಿ, ವಿದೇಶಿ ಹೂಡಿಕೆಗಳಿಗೆ ಉದಾರೀಕರಣ ಯುಗದಲ್ಲಿ ಬಹಳಷ್ಟು ಶ ಒದಗಿಸಲಾಗಿದೆ. ಒಂದೇ ವಿದೇಶಿ 50ಶೇ.ಕ್ಕಿಂತ ಹೆಚ್ಚು ಹೂಡಿಕೆ ಹೊಂದಿರುವ ಯರಿ' ಕಂಪನಿಗಳ ಪ್ರಮಾಣ 6ನೇ ಯಲ್ಲಿ 11.5ಶೇ. ಇದ್ದದ್ದು 2001ರ ವೇಳೆಗೆ ೀಕ್ಕೆ, ನಂತರ ಈಗ 80ಶೇ.ಕ್ಕೆ ಏರಿದೆ. ಂದೆಡೆ, 10ಶೇ.ದಿಂದ 50ಶೇ.ದ ವರೆಗೆ ಹೂಡಿಕೆ ಇರುವ 'ಅಸೋಸಿಯೇಟ್' ಗಳ ಪ್ರಮಾಣ ಗಮನಾರ್ಹವಾಗಿ ಇಳಿದಿದೆ. ಲಿಗೆ 35.3ಶೇ.ದಿಂದ 27.5ಶೇ.ಕ್ಕೆ, ನಂತರ ೇವಲ 1.2ಶೇ.ಕ್ಕೆ ಇಳಿದಿದೆ.

ರಡನೆಯದಾಗಿ, 'ವಿದೇಶಿ ತಂತ್ರಜ್ಞಾನ ರ'ಗಳ ಪ್ರಮಾಣ ತೀವ್ರವಾಗಿ ಇಳಿದಿದೆ. ವಿದೇಶಿ ಹೂಡಿಕೆಗಳು ದೇಶಕ್ಕೆ ಹೊಸ ಜ್ಞಾನ ಒದಗಿಸುತ್ತವೆ ಎಂಬುದು ಇನ್ನೊಂದು ತೆಯಷ್ಟೇ ಆಗಿಬಿಟ್ಟಿದೆ.

ೂರನೆಯದಾಗಿ, ದೇಶದ ಕೈಗಾರಿಕಾ ಡೆಯಲ್ಲಿ ವಿದೇಶಿ ಹೂಡಿಕೆಗಳ ನು? ಉದಾರೀಕರಣದ ಆರಂಭದಲ್ಲಿ ಹೂಡಿಕೆಗಳಲ್ಲಿ 90.9ಶೇ. ಕೈಗಾರಿಕಾ ದನೆಯಲ್ಲಿ, 4ಶೇ. ಕಟ್ಟಡ ನಿರ್ಮಾಣ ಯದಲ್ಲಿ ಮತ್ತು ಕೇವಲ 3.3ಶೇ. ವಲಯದಲ್ಲಿತ್ತು. 2001ರ ವೇಳೆಗೆ ಅದು ಮವಾಗಿ 81.5, 1.0 ಮತ್ತು 16.8ಶೇ. ತು. 2010ರ ವೇಳೆಗೆ ಒಟ್ಟು ವಿದೇಶಿ ಕೆಗಳಲ್ಲಿ ಕೈಗಾರಿಕಾ ಉತ್ಪಾದನಾ ವಲಯದಲ್ಲಿ ಕೇವಲ 36.5ಶೇ., ನಿರ್ಮಾಣ ವಲಯದಲ್ಲಿ 14ಶೇ. ಮತ್ತು ಸೇವಾ ವಲಯದಲ್ಲಿ 48.8ಶೇ. ಅಂದರೆ ವಿದೇಶಿ ಕಂಪನಿಗಳು ಬೆಳವಣಿಗೆ ಹೆಚ್ಚಿರುವ ವಲಯಗಳಲ್ಲೇ ವಿಸ್ತರಿಸುವಂತೆ ಉದಾರೀಕರಣ ನೀತಿಗಳು ಅವಕಾಶ ಕಲ್ಪಿಸಿ ಕೊಟ್ಟಿವೆ. ಅಲ್ಲದೆ ವಿದೇಶಿ ಸಹಕಾರ ನಮ್ಮ ತಂತ್ರಜ್ಞಾನದ ಮುನ್ನಡೆಗೆ ಅಗತ್ಯವಾಗಿದೆ ಎಂಬ ವಾದವನ್ನು ಕೂಡ ಈ ಸರ್ವೆಯ ಆರಂಭಿಕ ಫಲಿತಾಂಶಗಳು ಹುಸಿಗೊಳಿಸಿವೆ.

ಉದಾರೀಕರಣದ ಯುಗ ಆರಂಭವಾದದ್ದು ವಿದೇಶಿ ಹೂಡಿಕೆಗಳಿಗೆ ಬಾಗಿಲು ತೆರೆದಿಟ್ಟರೆ ಅವು ಭಾರತವನ್ನು ಜಾಗತಿಕ ಉತ್ಪಾದನೆಗೆ ನೆಲೆಯಾಗಿ ಮಾಡುತ್ತವೆ, ಅದರಿಂದ ದೇಶಕ್ಕೆ ದೊಡ್ಡ ಪ್ರಮಾಣದಲ್ಲಿ ವಿದೇಶಿ ವಿನಿಮಯ ದೊರಕುತ್ತದೆ ಎಂದೆಲ್ಲ ಹೇಳಲಾಗಿತ್ತು. ಆದರೆ ಅದೆಲ್ಲ ಹುಸಿಯಾಗಿದೆ.

ಕಾಂಗ್ರೆಸ್ ಸರಕಾರದ ಹಣಕಾಸು ಮಂತ್ರಿಯಾಗಿ ಮನಮೋಹನ್‌ಸಿಂಗ್ ಆರಂಭಿಸಿದ, ಅವರು ಪ್ರಧಾನ ಮಂತ್ರಿಯಾಗಿರುವ ಯುಪಿಎ-2 ಸರಕಾರ ತೀವ್ರಗೊಳಿಸಿದ ಉದಾರೀಕರಣದ ನೀತಿಗಳ ಒಟ್ಟು ಪರಿಣಾಮವೆಂದರೆ, ವಿದೇಶಿ ಕಂಪನಿಗಳಿಗೆ ಭಾರತದ ಮಾರುಕಟ್ಟೆಯನ್ನು ತೆರೆದು ಕೊಡಲಾಯಿತು. ಮುಂದುವರೆದ ತಂತ್ರಜ್ಞಾನದ ಅಗತ್ಯವಿಲ್ಲದ ವಲಯಗಳಲ್ಲೂ ಕೂಡ. ಅಷ್ಟೇ ಅಲ್ಲ, ಈ ವಿದೇಶಿ ಕಂಪನಿಗಳು ಮಾರುಕಟ್ಟೆಯನ್ನು ಭಾರತೀಯ ಕಂಪನಿಗಳೊಂದಿಗೆ ಹಂಚಿಕೊಳ್ಳುತ್ತಲೂ ಇಲ್ಲ.

ನೇರವಾಗಿ ಹೇಳುವುದಾದರೆ, ಈ ಮೂಲಕ ಉದಾರೀಕರಣ ನೀತಿಗಳು ದೇಶದ ವಿದೇಶಿ ವಿನಿಮಯ ಹೊರೆಯನ್ನು ಹೆಚ್ಚಿಸಿವೆ, ಇದರಿಂದಾಗಿ ಪಾವತಿ ಬಾಕಿ ಮತ್ತು ಚಾಲ್ತಿ ಖಾತೆಯ ಕೊರತೆಯ ಸಮಸ್ಯೆಗಳನ್ನು ಸೃಷ್ಟಿಸಿವೆ ಎಂದು ಉದಾರೀಕರಣ-ವಿರೋಧಿಗಳು ಹೇಳುತ್ತಾ ಬಂದಿರುವುದನ್ನು ರಿಝರ್ವ್ ಬ್ಯಾಂಕ್ ಸರ್ವೆಗಳೇ ದೃಢಪಡಿಸಿವೆ.

ಯುಪಿಎ ದರ್ಬಾರ್



ಆದರೂ ಯುಪಿಎ-2 ಸರಕಾರ ಇನ್ನಷ್ಟು 'ಸುಧಾರಣೆ'ಗಳು ಸಾಕಷ್ಟು ಇಲ್ಲದಿರುವುದೇ ಇದಕ್ಕೆ ಕಾರಣ ಎಂದು ಗಿಣಿಪಾಠ ಒಪ್ಪಿಸುತ್ತಲೇ ಇದೆ, ಆದ್ದರಿಂದ ಒಂದೆಡೆ ಬಡವರಿಗೆ ಕೊಡುವ ಸಬ್ಸಿಡಿಗಳನ್ನು 'ಸೀಮಿತ'ಗೊಳಿಸಬೇಕಾಗಿದೆ ಎನ್ನುತ್ತಲೇ ಮುಂಬರುವ ಚಳಿಗಾಲದ ಅಧಿವೇಶನ, ತನ್ನ ಕೊನೆಯ ಅಧಿವೇಶನವಾದ್ದರಿಂದ ವಿದೇಶಿ ಹೂಡಿಕೆಗಳಿಗೆ ಉಳಿದಿರುವ ಅಲ್ಪ-ಸ್ವಲ್ಪ ಮಿತಿಗಳನ್ನೂ ತೆಗೆಯುವ ಹುನ್ನಾರದಲ್ಲಿದೆ.

ಸಿವಜಿ ನಂತರ ಈಗ ಸಿಬಿಐ ಮೇಲೆ ಯುಪಿಎ-2 ಮುಖಂಡರ ಗುರಿ

ಈ ಹಿಂದೆ ದೇಶದ ಪ್ರಧಾನ ಮಂತ್ರಿಗಳು ಮತ್ತು ಹಣಕಾಸು ಮಂತ್ರಿಗಳು ಮತ್ತು ಇತರ ಮಂತ್ರಿಗಳೂ ದೇಶದ ಅತ್ಯುನ್ನತ ಲೆಕ್ಕ ಪರಿಶೋಧಕರಿಗೆ ಸರಕಾರದ ಧೋರಣೆಗಳನ್ನು ನೀವು ಹೇಗೆ ತಾನೇ ಪ್ರಶ್ನಿಸಲು ಸಾಧ್ಯ ಎಂದು ಕೇಳಿದ್ದರು. ಆದರೆ ಸಿಎಜಿ ಸರಕಾರದ ಧೋರಣೆಯನ್ನು ಪ್ರಶ್ನಿಸಿಲ್ಲ, ಅಂಗೀಕೃತ ಧೋರಣೆಯ ಜಾರಿಯನ್ನು ಪರಿಶೋಧಿಸಿ ಪ್ರಶ್ನೆಗಳನ್ನು ದೇಶದ ಮುಂದಿಟ್ಟಿದೆ ಎಂದು ದೇಶದ ಪ್ರಜಾಪ್ರಭುತ್ವವಾದಿ ಶಕ್ತಿಗಳು ಆ ಸವಾಲಿಗೆ ಉತ್ತರ ಕೊಟ್ಟಿದ್ದರು.

ಈಗ ಸುಪ್ರಿಂ ಕೋರ್ಟ್ ನಿರ್ದೇಶಿತ ಕಲ್ಲಿದ್ದಲು ಹಗರಣದ ವಿಚಾರಣೆಯಲ್ಲಿ ಕಡತವೇ ಮಾಯವಾಗಿರುವುದೂ ಸೇರಿದಂತೆ ಯುಪಿಎ-2 ಸರಕಾರದ ಆಡಳಿತ ವೈಖರಿಯ ವಿವಿಧ ಹುಳುಕುಗಳು ಬಯಲಾಗಿರುವ ಸಂದರ್ಭದಲ್ಲಿ ಯುಪಿಎ-2 ಮುಖಂಡರು ಮತ್ತೆ ಅಂತಹ ಪ್ರಶ್ನೆಗಳನ್ನು ಕೇಳಲಿಕ್ಕಿಲ್ಲ ಎಂಬ ನಿರೀಕ್ಷೆ ಇತ್ತು. ಆದರೆ ಅದೂ ಹುಸಿಯಾಗಿದೆ.

ಸಿಬಿಐನ ಸುವರ್ಣ ಜಯಂತಿ ಸಂದರ್ಭದಲ್ಲಿ ಪ್ರಧಾನ ಮಂತ್ರಿಗಳು ಮತ್ತು ಹಣಕಾಸು ಮಂತ್ರಿಗಳು ಸಿಬಿಐಗೂ ಸಿಎಜಿಗೆ ನೀಡಿದ ಉಪದೇಶಗಳನ್ನು ಮತ್ತೆ ನೀಡಿದ್ದಾರೆ. ಸರಕಾರದ ಧೋರಣೆಗಳನ್ನು ಪ್ರಶ್ನಿಸುವುದು ನಿಮ್ಮ ಕೆಲಸವಲ್ಲ ಎಂದಿದ್ದಾರೆ. ವಾಸ್ತವಕ್ಕೆ ಸಿಬಿಐನ ಉತ್ತರವೂ ಭಿನ್ನವಾಗಿರಲು ಸಾಧ್ಯವಿಲ್ಲ. "ಈ ಟೀಕೆಗಳು ಅಭೂತಪೂರ್ವ. ನಾವೆಂದೂ ಧೋರಣೆಯನ್ನು ಪ್ರಶ್ನಿಸಿಲ್ಲ, ಅಂಗೀಕರಿಸಿದ ಧೋರಣೆಯ ಉಲ್ಲಂಘನೆಗಳ ತನಿಖೆ ನಡೆಸಿದ್ದೇವಷ್ಟೇ" ಎಂದು ಸಿಬಿಐ ಉನ್ನತ ಅಧಿಕಾರಿಯೊಬ್ಬರು ಹೇಳಿದ್ದಾರೆ. ಇವೆಲ್ಲ ನವ-ಉದಾರವಾದದ ಗೀಳಿನ ಪರಿಣಾಮ, ಒಬ್ಬ ದೊಡ್ಡ ಉದ್ಯಮಿಯ ಮೇಲೆ ಎಫ್‌ಐಆರ್ ಹಾಕಿರುವುದನ್ನು ಅರಗಿಸಿಕೊಳ್ಳುವುದು ಕಷ್ಟವಾಗಿರಬೇಕು ಎಂದು ಅವರಿಗೂ ಗೊತ್ತಿರಬಹುದು.

ಕಲ್ಲಿದ್ದಲು ಹಗರಣದ ತನಿಖೆ ಸ್ವತಃ ಸುಪ್ರಿಂ ಕೋರ್ಟಿನ ಉಸ್ತುವಾರಿಯಲ್ಲಿ ನಡೆಯುತ್ತಿದೆ. ಆ ರೀತಿ ದೇಶದ ಸರ್ವೋಚ್ಚ ನ್ಯಾಯಾಲಯ ಉಸ್ತುವಾರಿ ವಹಿಸಿ ತನಿಖೆ ನಡೆಸುತ್ತಿರುವುದೇ ಅವರು ಬಾಯಿ ಮುಚ್ಚಿಕೊಂಡಿರುವಂತೆ ಮಾಡಬೇಕಾಗಿತ್ತು. ಆದರೆ ಹಾಗಾಗಿಲ್ಲ.

ಈ ಹಿಂದಾಲ್ಕೊ ಕೇಸಿನಲ್ಲಿ ಮುಂದಿನ ಕ್ರಮಗಳೂ ಅನಿವಾರ್ಯ, ಆಗ ಇನ್ನಷ್ಟು ಬಿರುಗಾಳಿ ಏಳಬಹುದು ಎಂದು ಸಿಬಿಐ ಅಧಿಕಾರಿಗಳಿಗೆ ಈಗ ಆತಂಕ. ನ್ಯಾಯಾಲಯದ ನಿರ್ದೇಶನದಂತೆ ಮಾಡಲೇ ಬೇಕಾದಾಗಲೂ ಅತ್ಯುನ್ನತ ಮಟ್ಟಗಳಿಂದ ಏಕೆ ಟೀಕೆಗಳನ್ನು ಎದುರಿಸಬೇಕು ಎಂಬುದು ನಿಜವಾಗಿಯೂ ನವ-ಉದಾರೀಕರಣ ಸೃಷ್ಟಿಸಿರುವ ವಾತಾವರಣಕ್ಕೆ ಇನ್ನೊಂದು ಸಾಕ್ಷಿ.

ಜನವರಿ 9ಕ್ಕೆ ಸಿಬಿಐ ಸುಪ್ರಿಂ ಕೋರ್ಟಿನ ಮುಂದೆ ಇನ್ನೊಂದು ವರದಿ ಸಲ್ಲಿಸಬೇಕಾಗಿದೆ. ಅದರ ಮೊದಲು ಬಿರ್ಲಾಗೆ ಸಮನ್ಸ್ ಮತ್ತು ಪ್ರಧಾನ ಮಂತ್ರಿಗಳ ಕಚೇರಿಯ ಹೇಳಿಕೆಯನ್ನು ದಾಖಲಿಸಿಕೊಳ್ಳಬೇಕಾಗಿದೆ. ಇಂತಹ ಸ್ಥಿತಿ ಬೇರೆ ಯಾರಿಗೂ ಬರಬಾರದು ಎಂದು ಸಿಬಿಐ ಅಧಿಕಾರಿಗಳು ಹೇಳುತ್ತಿದ್ದಾರಂತೆ.

ಯುಪಿಎ-2 ಮುಖಂಡರುಗಳು ಏನೇ ಹೇಳಲಿ, ಸಿಬಿಐನ ನಿರ್ದೇಶಕರಿಗಂತೂ ಜಾಗತೀಕರಣ ಮತ್ತು ಭ್ರಷ್ಟಾಚಾರದ ನಡುವಿನ ಸಂಬಂಧ ಅನುಭವದಿಂದಲೇ ಸ್ಪಷ್ಟವಾಗಿರುವಂತೆ ಕಾಣುತ್ತದೆ. ಜಾಗತೀಕರಣದ ಪ್ರಕ್ರಿಯೆ ಉದ್ಯಮಿಗಳಿಗೆ ಪ್ರಯೋಜನ ತಂದಿದೆಯೇ ಹೊರತು ದೇಶಕ್ಕಲ್ಲ, ನಿರ್ಣಯ ಪ್ರಕ್ರಿಯೆ ಎಲ್ಲರಿಗೂ ಪ್ರಯೋಜನ ತರುವ ಪ್ರಾಜೆಕ್ಟುಗಳ ಬದಲು ಕೆಲವರಿಗೇ ಪ್ರಯೋಜನ ತರುವ ಪ್ರಾಜೆಕ್ಟುಗಳ ಪರವಾಗಿ ವಿರೂಪಗೊಂಡಿದೆ ಎಂದು ಅವರೂ ಈ ಸಂದರ್ಭದಲ್ಲಿ ಹೇಳಿದ್ದಾರೆ. ನವ-ಉದಾರವಾದಿಗಳಿಗೆ ಬಹುಪ್ರಿಯವಾದ ಸಾರ್ವಜನಿಕ-ಖಾಸಗೀ ಭಾಗವಹಿಸುವಿಕೆಯ (ಪಿಪಿಪಿ) ಮಾದರಿಯಲ್ಲಿ ವಿದ್ಯುತ್, ರಸ್ತೆ, ಬಂದರು, ವಿಮಾನ ನಿಲ್ದಾಣ, ರಾಸಾಯನಿಕ, ಪೆಟ್ರೋಕೆಮಿಕಲ್ಸ್ ಮುಂತಾದ ಮೂಲರಚನೆಗಳ ನಿರ್ಮಾಣ ಭ್ರಷ್ಟಾಚಾರದ ಗ್ರಾಫ್ ಏರುವಂತೆ ಮಾಡಬಹುದು ಎಂಬ ಆತಂಕ ಬಹಳಷ್ಟು ವಲಯಗಳಲ್ಲಿ ಇದೆ ಎಂದೂ ಅವರು ಅಭಿಪ್ರಾಯ ಪಟ್ಟರು. ಇದು ಹಲವು ತೊಂದರೆಗಳು, ದುಷ್ಟಕೂಟಗಳಿಗೆ ಅವಕಾಶವಿರುವ ದಾರಿ ಎಂದು ಅವರು ಹೇಳಿದರು. ಎಫ್‌ಡಿಐಗಳ ಬಗ್ಗೆಯೂ ಅವರು ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಅಲ್ಲದೆ ಆಹಾರ ಭದ್ರತೆ, ರೇಗಾದಂತಹ ಸರಕಾರೀ ಯೋಜನೆಗಳಲ್ಲಿಯೂ ಅಗಾಧ ಮೊತ್ತ ಇರುವುದರಿಂದ ಅದು ಸರಿಯಾದ ಫಲ ನೀಡುವಂತೆ, ಅದನ್ನು ಬೇರೆಡೆಗೆ ತಿರುಗಿಸದಂತೆ ನೋಡಿಕೊಳ್ಳುವುದು ಇನ್ನೊಂದು ಸವಾಲು ಎಂದೂ ಅವರು ಅಭಿಪ್ರಾಯ ಪಟ್ಟರು.


ನಿಜ, ಇಲ್ಲಿ ಸಿಬಿಐನ ಮುಖ್ಯಸ್ಥರು ಧೋರಣೆಯನ್ನು ಪ್ರಶ್ನಿಸುತ್ತಿದ್ದಾರೆ ಎಂದು ಬಹಳ ಶುದ್ಧಹಸ್ತ ಎನಿಸಿಕೊಂಡಿರುವ ಪ್ರಧಾನಿಗಳಿಗೆ ಅನಿಸಿರಬೇಕು. ಆದರೆ ಇಂತಹ ಧೋರಣೆಗಳ 'ಫಲಗಳು' ಆಗಲೇ ಮೂರ್ತವಾಗಿ ದೇಶದ ಮುಂದಿರುವಾಗ ಧೋರಣೆಗಳ ನಿರ್ಧಾರ ಪ್ರಕ್ರಿಯೆ ಮತ್ತು ಅವುಗಳ ಜಾರಿ ಪ್ರಕ್ರಿಯೆಯ ನಡುವಿನ ಸಂಬಂಧದ ಬಗ್ಗೆಯೂ ಬಹುಶಃ ಯೋಚಿಸಬೇಕಾಗುತ್ತದೆ.

ದೊಡ್ಡ ಎನ್‌ಜಿಒ, ಟ್ರಸ್ಟ್‌ಗಳಿಗೆ 3000ಕೋಟಿ ರೂ. ಅನರ್ಹ ತೆರಿಗೆ ವಿನಾಯ್ತಿ

ಕೆಲವು ದೊಡ್ಡ ಸರ್ಕಾರೇತರ ಸಂಸ್ಥೆ(ಎನ್‌ಜಿಒ)ಗಳು ಮತ್ತು ಧರ್ಮಾರ್ಥ ಟ್ರಸ್ಟ್‌ಗಳಿಗೆ ಕೊಟ್ಟಿರುವ ಅನರ್ಹ ತೆರಿಗೆ ವಿನಾಯ್ತಿಗಳಿಂದಾಗಿ ಸರಕಾರದ ಬೊಕ್ಕಸಕ್ಕೆ 3000ಕೋಟಿ ರೂ.ಗಳಷ್ಟು ನಷ್ಟವಾಗಿದೆ ಎಂದು ಸಿಎಜಿ ವರದಿಯೊಂದು ಲೆಕ್ಕ ಹಾಕಿದೆ.

ಸಿಎಜಿ ಸುಮಾರು 80ಸಾವಿರ ಇಂತಹ ಟ್ರಸ್ಟ್‌ಗಳ ಲೆಕ್ಕ ಪರಿಶೋಧನೆ ಮತ್ತು ತೆರಿಗೆ ದಸ್ತಾವೇಜುಗಳ ಪರಿಶೋಧನೆಯಿಂದ ಈ ತೀರ್ಮಾನಕ್ಕೆ ಬಂದಿದೆಯಂತೆ. ಅದು ಈ ವರದಿಯನ್ನು ಸಂಸತ್ತಿನ ಮಳೆಗಾಲದ ಅಧಿವೇಶನದಲ್ಲಿ ಮಂಡಿಸಲೆಂದು ನೀಡಿತ್ತು. ಯುಪಿಎ-2 ಸರಕಾರ ಅದೇಕೋ ಇದರ ಮಂಡನೆಯನ್ನು ಮುಂದೂಡಿತ್ತು.

ಇದು ಧೋರಣೆಯ ಪ್ರಶ್ನೆಯೇ ಅಥವ ಧೋರಣೆಯ ಉಲ್ಲಂಘನೆಯ ಪ್ರಶ್ನೆಯೇ ಎಂಬ ಜಿಜ್ಞಾಸೆಯಿಂದಾಗಿ ಇರಬಹುದು.



ನನಗೆ ಖಾತ್ರಿಯಿದೆ. ಮುಂದಿನ ಚುನಾವಣೆಗಳಲ್ಲಿ ಮಂಗಳನಲ್ಲಿ ಉಚಿತ ಭೂಮಿ, ನೀರು ಕೊಡುವ ಭರವಸೆ ನೀಡುತ್ತಾರೆ!

ಭೂಮಿ-ರೈತರ ಬದುಕು ರಕ್ಷಣೆಗಾಗಿ ರಾಜ್ಯವ್ಯಾಪಿ ಹೋರಾಟ-ಅಹೋರಾತ್ರಿ ಧರಣಿ



ಬಗರ್ ಹುಕುಂ ಮತ್ತು ಅರಣ್ಯ ಭೂಮಿ ಹಕ್ಕಿಗಾಗಿ ಬಡವರಿಗೆ ಉಚಿತ ಮನೆ. ನಿವೇಶನಕ್ಕಾಗಿ ಹಾಸನ ಜಿಲ್ಲೆಯಲ್ಲಿ ಆಲೂಗಟ್ಟೆ ಬೆಳೆಗೆ ಸಂಶೋಧನ ಕೇಂದ್ರವನ್ನು ಸ್ಥಾಪಿಸಲು ಆಗ್ರಹಿಸಿ. ಜಿಲ್ಲೆಯಲ್ಲಿ ಅನಾವೃಷ್ಟಿಯಿಂದ ಜಿಲ್ಲೆಯಲ್ಲಿ ತೆಂಗು ಬೆಳೆ ನಾಶಗೊಂಡ ರೈತರಿಗೆ ತಲಾ ಎಕರೆಗೆ 50,000 ರೂ ಪರಿಹಾರ ನೀಡಲು ಒತ್ತಾಯಿಸಿ. ಕಂಪನಿ ಕೃಷಿಯನ್ನು ವಿರೋಧಿಸಿ, ರೈತರು ಹಾಗೂ ಕೂಲಿಕಾರರ ಕೃಷಿಯನ್ನು ಸಂರಕ್ಷಿಸಲು ಒತ್ತಾಯಿಸಿ 07 ನವೆಂಬರ್ 2013 ರಿಂದ 48 ಗಂಟೆಗಳ ಕಾಲ ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್), ಬಗರ್ ಹುಕುಂ ಸಾಗುವಳಿದಾರರ ಹೋರಾಟ ಸಮಿತಿ ಹಾಸನದಲ್ಲಿ ಧರಣಿ ನಡೆಸಿತು. ಹೋರಾಟದ ಭಾಗವಾಗಿ ಹಾಸನ ಜಿಲ್ಲಾಧಿಕಾರಿಗಳಿಗೆ ಮನವಿ ನೀಡಿತು.

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಸಮಿತಿಯ ಕರೆಯ ಮೇರೆಗೆ ರಾಜ್ಯಾದ್ಯಂತ ಇಂತಹ ಹೋರಾಟಗಳು ನಡೆದ ವರದಿ ಇದೆ. ಬೆಂಗಳೂರು ನಗರ ಜಿಲ್ಲಾಧಿಕಾರಿ ಕಛೇರಿ ಮುಂದೆ ನಡೆದ ಪ್ರತಿಭಟನೆ ಸೇರಿದಂತೆ ಒಟ್ಟಾರೆ 23 ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆಗಳು ನಡೆದಿವೆ. ಒಟ್ಟಾರೆ ಸು. 15,000 ಜನರು ಈ ಪ್ರತಿಭಟನೆಗಳಲ್ಲಿ ಪಾಲ್ಗೊಂಡ ಬಗೆಗೆ ಮಾಹಿತಿ ದೊರೆತಿದೆ. ಈ ಸಂಬಂಧ ನಡೆದ ಅಹೋರಾತ್ರಿ ಧರಣದಲ್ಲಿ ಸು. 5000 ಜನರು ಪಾಲ್ಗೊಂಡಿದ್ದಾರೆ. ಅದರಲ್ಲಿ ಸುಮಾರು 600 ರಷ್ಟು ಮಹಿಳೆಯರು ಪಾಲ್ಗೊಂಡಿದ್ದರು ಎನ್ನುವುದು ವಿಶೇಷವಾಗಿದೆ.

ಹಲವು ಬೇಡಿಕೆಗಳು

ಎಲ್ಲಾ ಬಡವರಿಗೆ ನಿವೇಶನ ಹಾಗೂ ಕನಿಷ್ಠ ಬದುಕನ್ನು ರೂಪಿಸಿಕೊಳ್ಳಲು ಅನುವಾಗುವಂತೆ ಇ.ಎಂ.ಎಸ್ ಮಾದರಿಯಂತೆ ಕನಿಷ್ಠ 12ಸೆಂಟ್ಸ್ ಅಥವಾ 05 ಗುಂಟೆ ಜಮೀನ್ನು ಒದಗಿಸಬೇಕು. ಮನೆ ಕಟ್ಟಿಕೊಳ್ಳಲು ಕನಿಷ್ಠ ಶೇ. 75 ಸಹಾಯಧನ ಹಾಗೂ ಬಡ್ಡಿ ರಹಿತ 03 ಲಕ್ಷ ರೂಗಳ ಸಾಲ ಒದಗಿಸಬೇಕು. ಅದೇ ರೀತಿ ಅವರು ತಮ್ಮ ಬದುಕನ್ನು ಕಟ್ಟಿಕೊಳ್ಳಲು ಅದೇ ಸ್ಥಳದಲ್ಲಿ ಪಶು ಹಾಗೂ ಮೀನು ಸಾಕಾಣೆ ಮಾಡಲು ಮತ್ತು ಹಣ್ಣು ಹಾಗೂ ತೆಂಗು ಬೆಳೆಯಲು ವಿವಿಧ ಇಲಾಖೆಗಳ ಮೂಲಕ ಎಲ್ಲಾ ರೀತಿಯ ನೆರವು ನೀಡಬೇಕು.





ಎಐಕೆಎಸ್ ಜಂಟಿ ಕಾರ್ಯದರ್ಶಿ ಕಾಂ. ವಿಜೂಕೃಷ್ಣನ್ ಮಾತನಾಡುತ್ತಿರುವುದು, ಕಾರವಾರ

ಡಾ: ಎಂ ಎಸ್ ಸ್ವಾಮಿನಾಥನ್ ಸಲಹೆಯಂತೆ ಒಟ್ಟು ಖರ್ಚು ಮತ್ತು ಶೇ. 50 ಲಾಭಾಂಶ ಸೇರಿದಂತಹ ಬೆಂಬಲ ಬೆಲೆ ನಿಗದಿಗೆ ಕ್ರಮ ವಹಿಸಬೇಕು. ಮತ್ತು ಅದರಂತೆ ಬ... ಪೂರ್ವದಲ್ಲಿ ಪ್ರಕಟಿಸಬೇಕು ಮತ್ತು ... ಪೂರ್ವದಲ್ಲಿ ಎಪಿಎಂಸಿಗಳಲ್ಲಿ ... ಖರೀದಿ ಕೇಂದ್ರಗಳನ್ನು ತೆರೆಯಬೇಕು. ... ಅಗತ್ಯವಿರುವ ಎಲ್ಲಾ ನೆರವನ್ನು ... ನೀಡಬೇಕು ಮತ್ತು ಯಾವುದೇ ಕಾರಣಕ್ಕೆ ... ಮಾರುಕಟ್ಟೆಯ ಪ್ರಸ್ತಾಪವನ್ನು ಮುಂದುವ... ವಾಪಾಸು ಪಡೆಯಬೇಕು. ಸಾಲ... ರೈತ ಕುಟುಂಬಗಳು ಆತ್ಮಹತ್ಯೆಗಳಿಂ... ತಡೆಯಲು ಕೇರಳ ಮಾದರಿಯಲ್ಲಿ ಋಣ... ಕಾಯ್ದೆಯನ್ನು ಜಾರಿಗೆ ತರಬೇಕು ಮ... ವರ್ಷದ ಬರಗಾಲ ಮತ್ತು ಅತೀವೃಷ್ಟಿ... ಹಾನಿಗೊಳಗಾದವರಿಗೆ ಸೂಕ್ತ ... ನೀಡಬೇಕು. ಕಾಲು ಬಾಯಿ ರೋಗದಿಂ... ಜಾನುವಾರುಗಳಗೆ ತಲಾ 50,000 ರೂ ಪ... ನೀಡಬೇಕು. ಮಹಾತ್ಮಗಾಂಧಿ ರಾ... ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ... 200 ದಿನಗಳಿಗೆ ವಿಸ್ತರಿಸಬೇಕು. ಕೂಲಿ... 300.00 ರೂ.ಗೆ ಹೆಚ್ಚಿಸಬೇಕು.

ರಾಜ್ಯದಾದ್ಯಂತ ಪಂಪ್‌ಸೆಟ್ ... ಬಳಕೆದಾರರಿಗೆ ಕನಿಷ್ಠ 10 ತಾಸುಗಳ ಗುಣ... 03ಪೇಸ್ ನಿರಂತರ ವಿದ್ಯುತ್ ಒದಗಿ... ಅದೇ ರೀತಿ ಸುಟ್ಟು ಹೋದ ಮತ್ತು ... ಹೋದ ಟ್ರಾನ್ಸಫಾರ್ಮರ್‌ಗಳನ್ನು ತ... ಬದಲಾಯಿಸಿಕೊ... ಬೇಕಾದ ಕ್ರಮವಹಿಸಬೇಕು... ಸಾರ್ವಜನಿಕ ರಂಗದಲ್ಲಿ ಅಗತ್ಯವಾದಷ್ಟು ... ವಿದ್ಯುತ್ ಉತ್ಪಾ... ಬೇಕಾದ ಕ್ರಮಗ... ವಹಿಸಬೇಕು. ಪಂಪ್‌ಸೆಟ್‌ಗಳಿ... ಸೌರ ವಿದ್ಯುತ್ ಬಳಸುವ ರೈತರಿ... ಶೇ 90ರಷ್ಟು ಸಹಾಯ ಧನವ... ಒದಗಿಸಬೇಕು. ಇತ್ಯಾದಿ ನಾನಾ ... ಬೇಡಿಕೆಗಳಿಗಾಗಿ ಒತ್ತಾಯಿಸಲಾಗಿದೆ.

ಈ ವಾರ......

ಪುಟ 3 ರಿಂದ

ನಡೆದಿದೆ, ನಡೆಯುತ್ತಲೇ ಇರುತ್ತದೆ. ವಿಶೇಷವಾಗಿ ಜಾಗತೀಕರಣ, ಉದಾರೀಕರಣದ ಈ ದಿನಗಳಲ್ಲಿ ಇದಕ್ಕೆ ಜೊತೆ, ಜೊತೆಯಾಗಿಯೇ ಬೆಳೆಯುತ್ತಿರುವ ಕೋಮುವಾದ, ಜಾತೀವಾದದ ಅನಿಷ್ಟಗಳೂ ಇನ್ನಷ್ಟೂ ಹುಲುಸಾಗಿ ಬೆಳೆಯಲು ಅಂಧಶ್ರದ್ಧೆ, ಮೂಢ ನಂಬಿಕೆಗಳನ್ನು ಬಲಗೊಳಿಸುತ್ತಿವೆ. ಇದರ ಫಲ ಪಡೆಯಲು ಯಥಾಸ್ಥಿತಿವಾದಿಗಳಲ್ಲಿಯೂ ಸ್ಪರ್ಧೆಯಿದೆ. ಆದ್ದರಿಂದಲೇ ಬಿಜೆಪಿಯಲ್ಲದೇ ಯಡಿಯೂರಪ್ಪನವರ ಕರ್ನಾಟಕ ಜನತಾ ಪಕ್ಷ, ಕುಮಾರಸ್ವಾಮಿ, ದೇವೇಗೌಡರ ಜಾತ್ಯಾತೀತ ಜನತಾದಳ ಮುಂತಾದವರು ಈಗ ತರಬೇಕೆಂದಿರುವ ಮಸೂದೆಯ ಪ್ರತಿ ಸಲ್ಲಿಕೆಯಾದ ಮರು ಕ್ಷಣವೇ ವಿರೋಧಿಸಿ ಅಬ್ಬರಿಸಿ, ಬೊಬ್ಬಿರಿದರು. ಮಾತ್ರವಲ್ಲ, ಕಾಂಗ್ರೆಸ್‌ನ ಜನಾರ್ಧನ ಪೂಜಾರಿಯಂತಹವರು ಅಸಮ್ಮತಿಯನ್ನು ತೋರಿಸಿದರು. ಇಂತಹ ಅನೇಕರು ಕಾಂಗ್ರೆಸ್‌ನಲ್ಲೇ ಇದ್ದಾರೆ. ಅಂದರೆ ಪಕ್ಷಬೇಧ ಮರೆತು ಎಲ್ಲಾ ಪ್ರತಿಗಾಮಿಗಳೂ ಒಂದಾಗುತ್ತಾರೆ ಎಂಬುದನ್ನು ಇವರೆಲ್ಲಾ ತೋರಿಸಿದ್ದಾರೆ.

ಈಗ ಬರುವ ಪ್ರಶ್ನೆ ಇಷ್ಟೆಲ್ಲಾ ವಿರೋಧಗಳು (ಪರವೂ) ಬಂದಾದ ಮೇಲೆ ಅದನ್ನು ವಿಧಾನಸಭೆಯಲ್ಲಿ ಮಂಡಿಸಲಾಗುವುದೇ? ಆರಂಭದಲ್ಲಿ ಸರಕಾರವೇನೋ ಈ ತಿಂಗಳ ಕೊನೆಯಲ್ಲಿ ಆರಂಭಗೊಳ್ಳುವ ಬೆಳಗಾವಿ ಅಧಿವೇಶನದಲ್ಲಿ ಮಂಡಿಸುವುದಾಗಿ ಹೇಳಿತ್ತು. ವಾದ-ವಿವಾದಗಳ ಬಳಿಕ ಹಾಗೆ ಅವಸರದಲ್ಲಿ ಮಂಡಿಸುವುದಿಲ್ಲವೆಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದು ಸರಿ. ಏಕೆಂದರೆ ಇಂತಹ ವಿಷಯದಲ್ಲಿ ಚರ್ಚೆ, ಸಲಹೆ ಸೂಚನೆಗಳನ್ನು ಮುಕ್ತವಾಗಿ ಪಡೆಯಬೇಕು. ಮುಖ್ಯವಾಗಿ ಜನತೆಯ ನಡುವೆ ಸ್ಥಾಪಿತ ಹಿತಾಸಕ್ತಿಗಳು ಉಂಟು ಮಾಡುವ ಗೊಂದಲಗಳನ್ನು ನಿವಾರಿಸಬೇಕು. ಯಾವುದು ನಂಬಿಕೆ, ಯಾವುದು ಮೂಢನಂಬಿಕೆ ಎಂಬುದು, ನಿರ್ಬಂಧಿಸಲಾಗುವುದು ಯಾವುದು ಎಂದು ಸ್ಪಷ್ಟತೆ ಮೂಡಬೇಕು. ಇವೆಲ್ಲಾ ಜನತೆಯ ಹಿತಕ್ಕಾಗಿಯೇ ಅಲ್ಲವೇ? ಆದ್ದರಿಂದ ಅಂತಹ ಕ್ರಮಗಳ ಬಳಿಕ, ಮಂಡಿಸಿ ಚರ್ಚಿಸಿ ಅಂಗೀಕರಿಸಬೇಕು. ರಾಜಕೀಯ ಪಕ್ಷಗಳಿಗೆ ಭಿನ್ನಾಭಿಪ್ರಾಯಗಳಿದ್ದರೆ ವಿಧಾನಸಭೆಯೇ ಸೂಕ್ತ ವೇದಿಕೆಯಾಗಿದ್ದು ಅಲ್ಲಿಯೂ ಚರ್ಚಿಸಲಿ. ಈ ಪ್ರಕ್ರಿಯೆಗಳ ನಂತರವೇ ಮಸೂದೆ ಅಂಗೀಕರಿಸಬೇಕು. ಆದರೆ ಯಡಿಯೂರಪ್ಪ, ಸದಾನಂದಗೌಡರಂತಹವರು ಮಸೂದೆ ಮಂಡಿಸಲೇ ಬಿಡೋಲ್ಲ ಎಂದುದು ಫ್ಯಾಶಿಸ್ಟ್ ವರ್ತನೆ. ಇದನ್ನು ಯಾರೂ ಸಹಿಸಬಾರದು. ಇಂತಹ ಯಾವುದೇ ಒತ್ತಡಗಳು ಉಂಟಾದರೂ ಹಿಂದೆ ಸರಿಯದೇ ಸಿದ್ಧರಾಮಯ್ಯನವರ ಸರಕಾರ ಮಸೂದೆಯನ್ನು ಅಂಗೀಕರಿಸಬೇಕು. ಅವಸರ ಬೇಡ, ಆದರೆ ವಿಳಂಬವೂ ಬೇಡ. ಹಾಗೇ ಪ್ರಗತಿಪರ ಮುಖವಾಡವೂ ಬೇಡ, ಉದ್ದೇಶದಲ್ಲಿ ಪ್ರಾಮಾಣಿಕತೆಯನ್ನು ತೋರಬೇಕು.

ಇಂತಹ ಕಾಯ್ದೆಯನ್ನು ತರಬೇಕೆಂಬುದನ್ನು ಸಿಪಿಐ(ಎಂ) ಒಳಗೊಂಡು ಎಡಪಕ್ಷಗಳ ನಿಲುವು. ಸಿಪಿಐ(ಎಂ) ರಾಜ್ಯ ಸಮಿತಿಯು ಇದಕ್ಕಾಗಿ ಜನತೆಯನ್ನು ಜಾಗೃತಗೊಳಿಸಲು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ನಾಡಿನ ಪ್ರಗತಿಪರ ಚಿಂತಕರೂ, ಪ್ರಗತಿಪರ ಚಳುವಳಿಗಳು, ಸಂಘಟನೆಗಳು ಕಾಯ್ದೆಗಾಗಿ ಆಗ್ರಹಿಸಿವೆ. ವಿಶೇಷವಾಗಿ ನಿಡುಮಾಮಿಡಿ ಮಠದ ಶ್ರೀ ವೀರಭದ್ರ ಚನ್ನಮಲ್ಲ ಸ್ವಾಮೀಜಿಯವರ ಮುತುವರ್ಜಿಯಿಂದಾಗಿ ಸುಮಾರು 35 ಕ್ಕೂ ಹೆಚ್ಚಿನ ಮಠಾಧೀಶರ ಚಿಂತನಾಗೋಷ್ಠಿ ... ನಿರ್ದಿಷ್ಟ ಸೂಚನೆಗಳ ಮೂಲಕ ... ತರಲು ಆಗ್ರಹಿಸಿರುವುದು ಗಮನಾರ್ಹ. ಇವರ ವಿರುದ್ಧ ನೂರೊಂದು ಮಠಾಧೀಶ... ಸಂಘಟಿಸಿ ಪ್ರತಿಭಟಿಸುವುದಾಗಿ ಸಂಘಪರಿವಾ... ತುಂಡುಗಳು ಪ್ರಕಟಿಸಿರುವುದು ಖಂಡನೀಯ...

ಆದ್ದರಿಂದ ನಾಡಿನ ಜನತೆ, ಅದ... ಪ್ರಗತಿಪರ ಸಮುದಾಯ ಎಚ್ಚರದಿಂದ ದೃಢ... ಹೋರಾಟ ನಡೆಸಬೇಕು. ಈ ಮಸೂದೆಯ... ಮುಖ್ಯ ಅಂಶಗಳನ್ನು ಜನರೆ... ತೆರದಿಡಬೇಕು. ನೆನಪಿಡಬೇಕಾದ್ದೆ... ಕಾಯ್ದೆಯೊಂದರಿಂದಲೇ ಜನರಲ್ಲಿ ... ಮೌಢ್ಯವನ್ನು ತೊಲಗಿಸಲಾಗುವುದಿಲ್ಲವೆಂಬ... ನಿಜ. ಆದರೆ ಮೂಢ ನಂಬಿಕೆ, ಕಂದಾಚಾ... ಬರ್ಬರ ಆಚರಣೆಗಳಂತಹ ಪ್ರವೃತ್ತಿ... ಕಡಿವಾಣ ಹಾಕುವುದು ಅಗತ್ಯವಿದೆ. ಮಾತ್ರ... ಇಂತಹವುಗಳ ಹುಟ್ಟಿಗೆ ಕಾರಣವಾಗಿ... ಅಸಮಾನತೆಯ ಸಮಾಜ ವ್ಯವಸ್ಥೆ... ತೊಲಗಿಸಲು ನಡೆಸಬೇಕಿರುವ ಸಮಾನ... ಆಂದೋಲನದಲ್ಲಿ ಇದು ಒಂದು ಪ್ರಮ... ಹೆಜ್ಜೆ.

, ದಕ್ಷತೆಯನ್ನು ಅವಗಣಿಸುವ....

ರಿಂದ

ತಿಳುವಳಿಕೆಯನ್ನು ನೀಡುತ್ತಿದ್ದುದನ್ನು ನನ್ನ ಕೆಲವು ಮಿತ್ರರಂತೂ ಕೃಷಿ ಬಗ್ಗೆ ಊಹೆ ಕೂಡ ಮಾಡಿಕೊಳ್ಳಲು ಗುತ್ತಿರಲಿಲ್ಲ. ನಗರದಲ್ಲಿದ್ದ ಹಿಂದುಳಿದ ವರೂ ಈ ಗುಂಪಿಗೆ ಸೇರುತ್ತಿದ್ದರು. ಸಮಯದಲ್ಲಿ ಅಡಿಕೆ ತೋಟಗಳನ್ನು ದ್ದ ಅಥವಾ ಕೃಷಿಯಲ್ಲಿ ತೊಡಗಿದ್ದ ಹ್ಮಣ ಮನೆತನಗಳ ಮಿತ್ರರು ಕೃಷಿಯ ಳುವಳಿಕೆ ಹೊಂದಿದ್ದರು. ಹಳ್ಳಿಗಳಿಂದಲೇ ಕೆಲ ಶ್ರೀಮಂತ ಕುಟುಂಬಗಳ ಕೂಡ ಕೃಷಿ ಕೆಲಸಗಳ ಪ್ರಾಥಮಿಕ ಪಡೆದಿರಲಿಲ್ಲ.) ಆದರೆ ಇದನ್ನೆಲ್ಲಾ ದಿನನಿತ್ಯದ ಜೀವನದ ನ್ನಾಗಿ ಮಾಡಿಕೊಂಡ ರೈತರ ತಮ್ಮ ಹೊಲ ಗದ್ದೆಗಳಲ್ಲಿ ದ್ದರು. ಕೂಲಿಕಾರರ ವರು ಪ್ರಾಥಮಿಕ ನ್ನೇ ದಾಟಿರಲಿಲ್ಲ. ಕೆಲವರು ನಲ್ಲಿ ಡುಮುಕಿ. ಅದರಲ್ಲಿ ಷ್ಟು ಜನ ಮಿತ್ರರಂತು ವಿಷಯಗಳಲ್ಲಿ ಒಳ್ಳೆಯ ಸುತ್ತಿದ್ದರೂ ಇಂಗ್ಲಿಷಿನಲ್ಲಿ ಫೇಲಾಗಿದ್ದರು. ಕೆಲವರು ಹಾಗೂ ಗಣಿತದಲ್ಲಿ

ದವಿಗೆ ಬೇಕಾದ ಮೆರಿಟ್ ು?

ತಹ ಪರಿಸ್ಥಿತಿ ಏಕೆ ಬಂತು? ೕಕಾದ ಮೆರಿಟ್ ಯಾವುದು? ಗಳು ನನ್ನನ್ನು ಕಾಡತೊಡಗಿದುವು. ಇಂದು ದೊಡ್ಡ ಪ್ರಮಾಣದಲ್ಲಿ ಕಾಡುತ್ತಿವೆ. ನಮ್ಮ ರ ಪಕ್ಕದಲ್ಲಿಯೆ ಇದ್ದ ಪಶುವೈದ್ಯಕೀಯ ಬಗ್ಗೆ ನೋಡೋಣ. ನಮ್ಮ ಹಳ್ಳಿಗಳಲ್ಲಿ ಪ್ರಾಣಿಗಳನ್ನು ಮನೆಯಲ್ಲಿಯೇ ಹಸಿಗೆ ತಿನ್ನುತ್ತಾರೆ. ಇವರಿಗೆ ಅನೇಕ ಸಾಕು ಪ್ರಾಣಿಗಳ ಅನಾಟಮಿ (ದೇಹ ರಚನೆ) ಬಹಳ ಚೆನ್ನಾಗಿ ಗೊತ್ತಿರುತ್ತದೆ. ಈ ಸಾಕು ಪ್ರಾಣಿಗಳ ಕಾಯಿಲೆಗಳು, ಅವುಗಳ ಆಹಾರ ಇತ್ಯಾದಿ ವಿಷಯಗಳ ಬಗ್ಗೆ ಪ್ರಾಥಮಿಕ ತಿಳುವಳಿಕೆ ಇರುತ್ತದೆ. ಕೆಳ ಜಾತಿಗಳಾದಷ್ಟೂ ಹೆಚ್ಚು ಹೆಚ್ಚು ಪ್ರಾಣಿಗಳ ದೇಹ ರಚನೆ, ವರ್ತನೆಯ ತಿಳುವಳಿಕೆ ಇರುತ್ತದೆ. ದಲಿತರಿಗೆ ಅತಿ ಹೆಚ್ಚು. ಕಸಾಯಿ ಕೆಲಸ ಮಾಡುವ ಮುಸ್ಲಿಮ್ ಸಮುದಾಯ ಕೂಡ ಬಹಳ ವಿಶೇಷವಾದ ಪರಿಣತಿ– ತೌಲನಿಕ ದೇಹರಚನೆಯ ಶಾಸ್ತ್ರದ ಪರಿಚಯ ಪಡೆದವರು. ಆದರೆ ಇವರಲ್ಲಿ ಅನೇಕರಿಗೆ ಈ ಕಾಲೇಜಿನಲ್ಲಿ ಪ್ರವೇಶ ಪಡೆಯುವ ಕನಸು ಕೂಡ ಕಾಣಲು ಸಾಧ್ಯವಿಲ್ಲ. ಪಶು ವೈದ್ಯ ಸ್ಥಾನಗಳೂ ಮೆಡಿಕಲ್ ಸೀಟು ದೊರೆಯದೆ ನಿರಾಸೆಗೊಂಡು ಅಂತೂ ಡಾಕ್ಟರ್ ಎಂಬುದು ತಮ್ಮ ಹೆಸರಿಗೆ ತಗುಲಿಸಿಕೊಳ್ಳಲೇಬೇಕೆಂದುಕೊಂಡ ನಗರದ ಹಲವರ ಪಾಲು. ಇವರಿಗೆ ಜೀವಶಾಸ್ತ್ರ,



ರಸಾಯನ ಶಾಸ್ತ್ರ, ಗಣಿತಗಳಲ್ಲಿ ಒಳ್ಳೆಯ ಅಂಕಗಳು ಬಂದಿರಬಹುದು ಆದರೆ ಈ ಪ್ರಾಣಿಗಳನೇಕವನ್ನು ನೋಡಿ ಕೂಡ ಗೊತ್ತಿರುತ್ತಿರಲಿಲ್ಲ. ಕೆಲವರಂತೂ ಪ್ರಾಣಿಗಳನ್ನು ಕಂಡರೆ ಮಾರು ದೂರ ಹಾರಿ ಹೋಗುತ್ತಿದ್ದವರು. ಹಾಗೆಯೇ ತೋ ಟಗಾರಿಕೆಯ ಬಗ್ಗೆ ನೋಡೋಣ. ಈ ಬಗ್ಗೆ ಬಾಲ್ಯದಿಂದಲೇ ತಿಳುವಳಿಕೆ ಅನುಭವ ಪಡೆದವರು ತೋಟಗಾರ ರೈತರು. ಇವರಲ್ಲಿ ಅನೇಕರಿಗೆ ಈ ಕಾಲೇಜುಗಳಲ್ಲಿ ಪ್ರವೇಶ ದೊರಕಿದೆ ಎಂದು ಅಂಕಿ ಅಂಶಗಳು ಹೇಳುತ್ತವೆ. ಆದರೆ ಆ ತೋಟಗಳ ಮಾಲಿಕರಿಗಿಂತ ತೋಟಗಾರಿಕೆಯಲ್ಲಿ ಹೆಚ್ಚು ತಿಳುವಳಿಕೆ ಪಡೆದ ಕೂಲಿಕಾರರಿಗೆ, ಪ್ಲಾಂಟೇಶನ್ ಕಾರ್ಮಿಕರಿಗೆ ಪ್ರವೇಶ ದೊರಕಿದೆಯೇ? ಈ ಹಣ್ಣಿನ ತೋಟಗಳನ್ನು ಫಲ ಕಚ್ಚಿದಾಗಲೇ ಗುತ್ತಿಗೆಗೆ ಪಡೆದು ಬೆಳೆಸುವ, ಸಂರಕ್ಷಿಸುವ ನಂತರ ಅವುಗಳನ್ನು ಕಿತ್ತು ಮಾಗಿಸಿ ಮಾರುವ ಮುಸ್ಲಿಮರು? ಹೀಗೆ ಪ್ರಶ್ನೆಗಳ ಮಾಲೆ ಬೆಳೆಯುತ್ತಾ ಹೋಯಿತಷ್ಟೇ ಹೊರತು ಕಡಿಮೆಯಾಗಲೇ ಇಲ್ಲ.

ಕಟ್ಟಡ ಕಾರ್ಮಿಕರು, ಪ್ಲಾಂಟೇಷನ್ ಕಾರ್ಮಿಕರು, ಕೂಲಿಕಾರರ ತಿಳುವಳಿಕೆಗೆ ಬೆಲೆ ಇಲ್ಲವೇ?

ಕೃಷಿ ವಿಶ್ವ ವಿದ್ಯಾನಿಲಯಗಳ ಆಚೆಗೆ ಬಂದರೆ ಇಂಜನಿಯರಿಂಗ್‌ನಲ್ಲಿ ಮೆಕ್ಯಾನಿಕಲ್, ಸಿವಿಲ್, ಸಾರಿಗೆ ಇತ್ಯಾದಿ ಪದವಿಗಳಿಗೆ, ವೈದ್ಯ ಪದವಿಗಳು, ಇತರ ಪದವಿಗಳಿಗೆ, ಡಿಪ್ಲೋಮಾಗಳಿಗೆ ಬೇಕಾದ ಮೆರಿಟ್ ಅನ್ನು ಲಕ್ಷಿಸಿ ಆಯ್ಕೆ ಮಾಡಲಾಗುತ್ತಿದೆಯೇ? ಕಟ್ಟಡ ಕಾರ್ಮಿಕರು, ಮೇಸ್ತ್ರಿಗಳು, ರಸ್ತೆಗಳಿಗೆ ಹಾಕುವ ಡಾಂಬರುಗಳಲ್ಲಿ ಬೇಯುವವರು, ಕಾರು, ಮೋಟಾರ್ ಸೈಕಲ್ ರಿಪೇರಿ ಮಾಡುವವರು ಇತ್ಯಾದಿ ಇವರ ತಿಳುವಳಿಕೆ ಅನುಭವಗಳಿಗೆ ಬೆಲೆಯೇ ಇಲ್ಲವೆ? ಇದು ಮೆರಿಟ್ ಅಲ್ಲವಾದರೆ ಮತ್ತೇನು? ಇವರೆಲ್ಲರೂ ದಲಿತ, ಕೆಳ ಜಾತಿಗಳವರು.

ಈ ಪದವಿಗಳಿಗೆ ಅದಕ್ಕೆ ಸಂಬಂಧಿಸಿದ ಮೆರಿಟ್ ಹೊಂದಿರುವ ಈ ಜನರಿಗೆ ಎಷ್ಟು ಸೀಟು ದೊರಕಿದೆ? ಕೆಲವೊಮ್ಮೆ ಕೃಷಿ ಪದವಿಗಳಲ್ಲಿ ರೈತರಿಗೆ ಆದ್ಯತೆ ಸಿಗಬೇಕೆಂಬ ಕೂಗು ಎದ್ದಿವೆ. ಸ್ವಲ್ಪ ಮಟ್ಟಿಗೆ ಮಾನ್ಯತೆಯೂ ದೊರಕಿದೆ. ಆದರೆ ಇನ್ನುಳಿದ ಕಷ್ಟಕಾರಿ ಜನತೆ.? ಅದರಲ್ಲಿಯೂ ಈ ಕೆಲಸಗಳಲ್ಲಿ ತೊಡಗಿದ ಮಹಿಳೆಯರು? ಎಷ್ಟು ಜನ ಹಸು ಸಾಕುವ ಮಹಿಳೆಯರು ಪಶು ವೈದ್ಯರಾಗಿದ್ದಾರೆ. ರೇಷ್ಮೆ ಬೆಳೆಗಾರ ಕುಟುಂಬದ ಮಹಿಳೆಯರಿಗೆ ರೇಷ್ಮೆ ಪದವಿ ಕಾಲೇಜಿನಲ್ಲಿ ಪ್ರವೇಶ?

ಐಎಎಸ್ ಪಡೆದ ಹಲವರ ಮಕ್ಕಳು ಐಎಎಸ್ ಪಡೆಯುವುದು, ಪೋಲಿಸ್ ಅಧಿಕಾರಿಗಳ ಮಕ್ಕಳು ಪೋಲೀಸ್ ಅಧಿಕಾರಿಗಳಾಗುವುದು ಡಾಕ್ಟರ ಮಕ್ಕಳನ್ನು ಡಾಕ್ಟರ್ ಮಾಡುವುದು, ವಕೀಲರ ಮಕ್ಕಳು ವಕಿಲರಾಗಿ ತಂದೆ, ತಾಯಿಯರ ವ್ಯವಹಾರವನ್ನು ವಹಿಸಿಕೊಳ್ಳುವುದು ನಡೆಯುತ್ತದೆ. ಆದರೆ ಈ ಉದ್ಯೋಗಗಳಲ್ಲಿ ಅನೇಕ ಬಾರಿ ತಂದೆಯರ ಉದ್ಯೋಗದ ಅನುಭವ ಮಕ್ಕಳಿಗೆ ಹರಿದು ಬರುವುದೇ ಇಲ್ಲ. ಏಕೆಂದರೆ ಕೆಳ ಉದ್ಯೋಗಗಳು, ಕೆಳ ಜಾತಿಗಳಲ್ಲಿದ್ದಂತೆ ಇವು ಕುಟುಂಬವೆಲ್ಲಾ ತೊಡಗುವ ಉದ್ಯೋಗಗಳಲ್ಲ. ಮಕ್ಕಳು ಈ ಕೆಲಸಗಳಲ್ಲಿ ಪಾಲುಗೊಳ್ಳುವ ಅವಕಾಶವೇ ಇಲ್ಲ. ಕೇವಲ ಅವರ ಉದ್ಯೋಗದ ಹೊರಗಿನ ಹಾವಭಾವಗಳನ್ನು ಗಮನಿಸಲು ಮಾತ್ರ ಅವಕಾಶ ಎನ್ನಬಹುದು. ಆದ್ದರಿಂದ ಈ ಮೇಲು ಹಂತದ ಉದ್ಯೋಗಗಳ ಕುಟುಂಬದ ಮಕ್ಕಳಿಗೆ ತಂದೆಯ, ತಾಯಿಯ ಉದ್ಯೋಗದ ತಿಳುವಳಿಕೆ ಲಭ್ಯವಾಗಿದೆ ಎಂದು ಕ್ಲೈಮ್ ಹಾಕುವಂತಿಲ್ಲ.

ಹಾಗಾದರೆ ನಮ್ಮ ಕಾಲೇಜುಗಳ ಪ್ರವೇಶದಲ್ಲಿ ನಿಜವಾದ ಈ ಮೆರಿಟ್‌ಗೆ ಅವಕಾಶವಿಲ್ಲದ ದುರ್ಭರ ಪರಿಸ್ಥಿತಿ ಉಂಟಾಗಿದ್ದು ಹೇಗೆ? ನಿಜವಾದ ಮೆರಿಟ್ ಅಥವಾ ಅರ್ಹತೆಯುಳ್ಳವರು ದಯವಿಟ್ಟು ನಮಗೆ ಮಿಸಲಾತಿ ಕೊಡಿ ಎಂದು ದೈನ್ಯದಿಂದ ಕೇಳಿಕೊಳ್ಳುವುದು, ಕೆಲ ಉದಾರವಾದೀ ಮೇಲ್ಜಾತಿಯ ಜನರು ಏನೋ ಹೋಗಲಿ ನಿಮಗೂ ಸ್ವಲ್ಪ ಅವಕಾಶ ಕೊಡುತ್ತೇವೆ ಎಂದು ದಾನ ಮಾಡುವುದೂ, ಮೇಲ್ಜಾತಿಗಳ ಇತರರು ಮೀಸಲಾತಿಯ ವಿರುದ್ಧ ಕೆಂಡ ಕಾರುತ್ತಾ ಆತ್ಮಾಹುತಿಗಳನ್ನು ಮಾಡಿಕೊಳ್ಳುವ ಮಟ್ಟಿಗೆ ಗದ್ದಲ ಮಾಡುವುದು ತಪ್ಪುವುದು ಹೇಗೆ?

ಹಾಗಾದರೆ ಈಗ ಪರಿಗಣಿಸಲ್ಪಡುತ್ತಿರುವ ಮೆರಿಟ್‌ನ ಮಾನದಂಡಗಳೇನು? ಒಂದು ಶತಮಾನದಿಂದ ಆಳುತ್ತಿರುವ ಅವು ಸುಳ್ಳೇ? ಈ ಮಾನದಂಡಗಳು ಸುಳ್ಳಾದರೆ ಅದರಿಂದ ಒಂದು ಶತಮಾನ ಕಾಲ ಬಾಧೆ ಪಟ್ಟವರಿಗೆ ಪರಿಹಾರ ಏನು?

(ಕೃಪೆ : 'ಅಗ್ನಿ'ವಾರಪತ್ರಿಕೆ)

ತಡಿ......

ರಿಂದ

ವಿದ್ಯಾರ್ಥಿಗಳು ಭಾಗವಹಿಸಿದ್ದರು. ಐ ಜಿಲ್ಲಾ ಉಪಾಧ್ಯಕ್ಷ ಹಂರುಝ ಕಿನ್ಯ ರು ಉಪಸ್ಥಿತರಿದ್ದರು.

ಮೂಡಬಿದರೆಯಲ್ಲಿ ಸಿಪಿಐ(ಎಂ) ಪ್ರತಿಭಟನೆ:

ನವಂಬರ್ 8 ರಂದು ಮೂಡಬಿದರೆ ತಾಲೂಕು ಕಚೇರಿ ಎದುರು ಸೌಜನ್ಯ ಕೊಲೆ ಪ್ರಕರಣಕ್ಕೆ ಸಂಬಂಧಿಸಿ ನಡೆದ ಪ್ರತಿಭಟನೆ ಸಿಪಿಐ(ಎಂ) ಮೂಡಬಿದರೆ ವಲಯ ಸಮಿತಿಯ ನೇತೃತ್ವದಲ್ಲಿ ನಡೆಯಿತು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಬಿ.ಎಂ.ಭಟ್, ಸಿಪಿಐ(ಎಂ) ಮೂಡಬಿದರೆ ವಲಯ ಸಮಿತಿ ಕಾರ್ಯದರ್ಶಿಯಾದವ ಶೆಟ್ಟಿ, ಡಿವೈಎಫ್ಐ ದ.ಕ.ಜಿಲ್ಲಾ ಅಧ್ಯಕ್ಷ ಮುನೀರ್ ಕಾಟಿಪಳ್ಳ ಮಾತನಾಡಿದರು.

ಸಿಪಿಐ(ಎಂ) ಮುಖಂಡರಾದ ರಮಣಿ, ಪ್ರಾಂತ ರೈತ ಸಂಘದ ಸುಂದರ ಶೆಟ್ಟಿ, ಕಟ್ಟಡ ಕಾರ್ಮಿಕರ ಸಂಘದ ಶಂಕರ್, ಸೀತಾರಾಮ್ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಇದಕ್ಕೂ ಮೊದಲು ಮೂಡಬಿದರೆ ಹಳೇ ಪೊಲೀಸ್ ಠಾಣೆಯ ಬಳಿಯಿಂದ ಮುಖ್ಯ ರಸ್ತೆಯ ಮೂಲಕ ತಹಶೀಲ್ದಾರ್ ಕಚೇರಿಗೆ ಪ್ರತಿಭಟನಾ ಮೆರವಣಿಗೆ ನಡೆಯಿತು.



JANASHAKTHI KANNADA VARA PATRIKE NOV 24, 2013 Price : Rs. 10/- RNI No. KARKAN /2006/17926 Posted on eve
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO Licensed to Post without prepayment License No. W



'ಪ್ರೀತಿ -ಸ್ನೇಹ'ಗಳ ಆಪ್ತ ವ್ಯಾಖ್ಯಾನ

ಇಲ್ಲೊಬ್ಬ ಸಿನಿಮಾದ ನಾಯಕ ಇದ್ದಾನೆ. ಅವನ ಹೆಸರು 'ರಾಜಾ ಹುಲಿ' ಅಂತ. ಪ್ರೀತಿ ಅಂದರೆ ಏನು ಅನ್ನೋ ವ್ಯಾಖ್ಯಾನನ ಆ 'ರಾಜಾಹುಲಿ' ಬಾಯಿಂದಾನೇ ಕೇಳಬೇಕು. ಅದರ ಸಾರಾಂಶ ಹೀಗಿದೆ. ಹುಡುಗರು ಹುಡುಗಿಯರ ಪ್ರೀತಿಗಾಗಿ ಪ್ರಯತ್ನಿಸಬಹುದು. ವಿನಂತಿಸಬಹುದು. ಅವನ ಭಾಷೆಯಲ್ಲೇ ಹೇಳೋದಾದರೆ 'ಲೈನ್' ಹೊಡಿಬಹುದು. ಆದರೆ ಒಂದು ಸಾರಿ ಹುಡುಗಿ ಇಷ್ಟ ಇಲ್ಲ ಅಂತ ಅಂದರೆ ಅಲ್ಲಿಗೆ ಮುಗೀತು. ಮತ್ತೆ ಆ ಹುಡುಗಿಯ ಬೆನ್ನು ಬಿದ್ದು ಯಾರೂ ಕಾಡೋ ಹಂಗಿಲ್ಲ. ಆತ ಈ ತತ್ವನಾ ಪ್ರಮಾಣಿಕವಾಗಿ ತನಗೂ ಅನ್ವಯಿಸಿಕೋತಾನೆ.

ರಾಜಾಹುಲಿ.. ರಾಜಾಹುಲಿ ಅಂತ ಕರೆಸಿಕೊಳ್ಳೋ ಈ ನಾಯಕನ ಮಾತಿನಲ್ಲಿನ ಎಚ್ಚರ ನೋಡಿ. ಹುಡುಗಿಯರು ಒಂದು ಸಾರಿ ಇಷ್ಟ ಇಲ್ಲ ಅಂತ ಅಂದ ಮೇಲೂ ಅವರ ಹಿಂದೆ ಬಿದ್ದರೆ, ಹೋಗಿ ಹಲ್ಲು ಗಿಂಜಿದರೆ ಹುಡುಗರು ಒಂಥರ 'ಕಾಮಿಡಿ ಪೀಸ್' ಆಗಿ ಬಿಡ್ತೀವಿ ಅಂತಾನೆ ಅವನು.


ಅಮ್ಮಮ್ಮ !! ಬೇರೆ ಬೇರೆ ಸಿನಿಮಾ ಹೀರೋಗಳು ಏನೆಲ್ಲಾ ಮಾಡ್ತಾ ಇದ್ದಾರೆ. ಅವರಿಗೆಲ್ಲಾ ಹೋಲಿಸಿದರೆ ಇವನ್ಯಾರೋ ಇವನೂ ಒಬ್ಬ 'ಹೀರೋ'ನಾ ಅನಿಸಲ್ವಾ ?. 'ಹೀರೋ' ಒಂದು ಸಾರಿ ಇಷ್ಟ ಪಟ್ಟರೆ ಮುಗೀತು. ಹುಡುಗಿ ಒಪ್ಪಿಕೊಳ್ಳಲೇ ಬೇಕು. ಒಪ್ಪಲಿಲ್ಲ ಅಂದರೆ, ಅವಳು ಏನಾದ್ರೂ 'ನಖರಾ' ಮಾಡಿದರೆ ಆಕೆನಾ ಹೇಗೆ ಒಪ್ಪಿಸಬೇಕು ಅಂತ ನಾಯಕನಿಗೆ ಚೆನ್ನಾಗಿ ಗೊತ್ತು. ದೀಪದ ಬೆಂಕಿ ಮೇಲೆ ಕೈ ಒಡ್ಡೋದು. ಬ್ಲೇಡಲ್ಲಿ ಕೈ ಮೇಲೆ ಹುಡುಗಿಯ ಹೆಸರು ಕೆತ್ತಿಕೊಳ್ಳೋದು, ರಕ್ತನಾಳ ಕತ್ತರಿಸಿಕೊಂಡು ರಕ್ತ ಹರಿಸೋದು. ವಿಲನ್ ಗ್ಯಾಂಗುಗಳನ್ನ ಚೆಚ್ಚಿ ಚೆಚ್ಚಿ ಬಿಸಾಡೋದು. ಕಾಲೇಜು ಲ್ಯಾಬು, ಕ್ಯಾಂಟೀನ್ ಟೇಬಲ್‌ಗಳನ್ನಲ್ಲಾ ಪುಡಿ ಪುಡಿ ಮಾಡೋದು, ಕಾಲೇಜು ಗೋಡೆಗಳು, ಬೋರ್ಡ್ ಮೇಲೆಲ್ಲಾ ನಾವು ಪ್ರೇಮಿಗಳು ಅಂತ ಇಬ್ಬರ ಹೆಸರು ಬರೆಯೋದು. ಇಲ್ಲಾ ಪೋಸ್ಟರ್ ಅಂಟಿಸೋದು.. ..ಕದ್ದು ಹುಡುಗಿಯ ಬೆಡ್ ರೂಮಿಗೆ ಬಂದು ಕಾಡುವುದು, ಇಲ್ಲಾ ಬೇಡುವುದು... ಇದ್ಯಾವುದೂ 'ವರ್ಕ್‌ಔಟ್' ಆಗಲಿಲ್ಲ ಅಂದರೆ ಕೊನೆಗೆ ಕಾಲೇಜು ಮಹಡಿ ಮೇಲೆ ಹೋಗಿ ತುದಿಯಲ್ಲಿ ನಿಂತುಕೊಂಡು ಹುಡುಗಿ ಪ್ರೀತಿಯನ್ನ ಒಪ್ಪಿಕೊಳ್ಳದೇ ಹೋದರೆ ಬಿದ್ದು ಸಾಯ್ತಿನಿ ಅಂತ ಬೆದರಿಸೋದು.

ಸ್ನೇಹ ಅಂದರೆ

ಸಿನಿಮಾದಲ್ಲಿ ಸ್ನೇಹ ಅಂದರೆ ಏನು ಅಂತಲೂ ಒಂದು ವ್ಯಾಖ್ಯಾನ ಇದೆ. ನಾಯಕ ಆ ಹುಡುಗಿಯನ್ನ ಇಷ್ಟಪಟ್ಟಿದ್ದ. ಕೇಳಿದ್ದ. ಅದು ಆಕೆ ಹೈಸ್ಕೂಲ್‌ನಲ್ಲಿ ಇದ್ದಾಗ. ಆಗ ಹುಡುಗಿ ನಿರಾಕರಿಸಿದ್ದಳು. ಈಗ ಅವನು ಅದೇ ಹುಡುಗಿಯ ಹತ್ತಿರ ಮಾತಾಡೋಕೆ ಹೋಗಿದ್ದಾನೆ. ತನಗಾಗಿ ಅಲ್ಲ. ತಾನು ಪ್ರೀತಿಸುವ ಹುಡುಗಿಯ ಹತ್ತಿರ ಆ ಬಗ್ಗೆ ಮಾತಾಡೋದಕ್ಕೆ ಹೆದರ್ತಾ ಇರೋ ತನ್ನ ಸ್ನೇಹಿತನ ಪರವಾಗಿ. ಆ ಹುಡುಗಿ 'ಈಗ' 'ನೀನೇ ಇಷ್ಟ' ಅಂತಾಳೆ. ಅವಾಗ ಯಾಕೆ ಒಪ್ಪಿಕೊಳ್ಳಲಿಲ್ಲ ಅಂತ ಅಂದರೆ ಆಗ ನಾನು 'ಮೈನರ್' ಆಗಿದ್ದೆ. ಈಗ 'ಮೇಜರ್'. ಜೀವನದ ಬಗ್ಗೆ ತೀರ್ಮಾನ ತೆಗೆದುಕೊಳ್ಳೋ ತಿಳುವಳಿಕೆ ಬಂದಿದೆ ಅಂತಾಳೆ. ಹುಡುಗನ ಧೈರ್ಯ-ಪರೋಪಕಾರಿ ಗುಣ ಆಕೆಗೆ ಇಷ್ಟವಾಗಿದೆ.

ಪರಸ್ಪರ ಒಪ್ಪಿದವರ ನಡುವೆ ತಾನೆ ಪ್ರೀತಿ. ಇಬ್ಬರೂ ಪ್ರೇಮ ಗೀತೆ ಹಾಡುತ್ತಾರೆ. ಹುಡುಗಿಯ ಮನೆಯಲ್ಲಿ ಒತ್ತಾಯದಿಂದ ಅತ್ತೆ ಮಗನೊಂದಿಗೆ ಮದುವೆ ನಿಗದಿ ಮಾಡುತ್ತಾರೆ. ಆ ಅತ್ತೆ ಮಗನು ನಾಯಕನೂ ಸ್ನೇಹಿತರೇ.

ಇಲ್ಲಿ ಒಬ್ಬ ಹುಡುಗಿಯ ಪ್ರೀತಿಗಾಗಿ ಪ್ರಯತ್ನಿಸುವವರು ಒಟ್ಟು ನಾಲ್ವರು ಯುವಕರು. ಒಂದು ಹುಡುಗಿ ಯಾರಿಗೆ 'ಗ್ರೀನ್ ಸಿಗ್ನಲ್' ತೋರಿಸಿದ್ದಾಳೋ ಆತನೊಂದಿಗೆ ಮದುವೆ ಎಂಬ ತತ್ವದ ಆಧಾರದಲ್ಲಿ ವಿಷಯ ಇತ್ಯರ್ಥಪಡಿಸಲು ನಾಯಕ ಪ್ರಯತ್ನಿಸುತ್ತಾನೆ. ಸ್ನೇಹಿತರು ನಂಬಿಸಿ ನಾಯಕನ ಬೆನ್ನಿಗೆ ಚೂರಿ ಹಾಕುತ್ತಾರೆ.


ಆರ್. ರಾಮಕೃಷ್ಣ

ನಂಬಿದ ಸ್ನೇಹಿತರು ತಲೆ ಒಡೆದು ಕೊಲ್ಲಲು ಪ್ರಯತ್ನಿಸಿದರೂ ಅವರಿಗೆ ತಿರುಗೇಟು ಕೊಟ್ಟು ಬಚಾವಾಗುತ್ತಾನೆ. ನಾಯಕ 'ಸ್ನೇಹಿತ'ರನ್ನು ಉದಾರವಾಗಿ ಕ್ಷಮಿಸುತ್ತಾನೆ. ಯಾಕೆ ಪೋಲಿಸ್ ದೂರು ಕೊಡಲಿಲ್ಲ ಅಂತ ಕೇಳಿದರೆ ಒಂದು ಸಾರಿ 'ಸ್ನೇಹಿತರು' ಅಂತ ಕರೆದುಬಿಟ್ಟಿದ್ದೀನಿ, ಅವರು ಏನು ಮೋಸ ಮಾಡಿದರೂ ನಾನು ಅವರನ್ನ ಸ್ನೇಹಿತರು ಅಂತಾನೆ ನೋಡ್ತೀನಿ ಅಂತಾನೆ ನಾಯಕ.



"ಲೋಫರ್ ಅಂದ್ರೂನೂ, ಚಪ್ಪರ್ ಅಂದ್ರೂನೂ.."
" ಪ್ರೀತ್ಸೆ ಪ್ರೀತ್ಸೆ
ಕಣ್ಣು ಮುಚ್ಚಿ ನನ್ನ ಪ್ರೀತ್ಸೆ.. .." ಅಂತ ಆದೇಶ ಕೊಡೋ ಹೀರೋಗಳ ಮೆರೆದಾಟ ನಡೀತಿರೋ ಕಾಲ ಇದು.

ಹುಡುಗಿ "ಏನ್ ಲೂಸಾ ನೀನು
ಮರ್ಯಾದೆ ಇಲ್ವಾ ನಿನಗೆ ?
ಸರಿಯಾಗಿ ಏಟು ತಿಂತೀಯಾ !!..
ಉಗಿದರೂ
"ಲೋಫರ್ ಅಂದ್ರೂನೂ, ಚಪ್ಪರ್
ನಿನ್ ಬಿಟ್ ಹೋಗೋದಿಲ್ವೆ "
ಅಂತ ಕಿರುಚುವ, ಹಾಡುವ
ಯುವಜನರ ನೆಚ್ಚಿನ ನಾಯಕರಾಗಿ
ಇದು. ಇಂಥ ಹೊತ್ತಲ್ಲಿ ಹುಡುಗಿ
-ಒಪ್ಪಿಗೆಗೆ ಇಷ್ಟೊಂದು ಬೆಲೆ ಕ
ನಾಯಕನ ಬಗ್ಗೆ ಏನು ಹೇಳುವುದು
ಹಾಗಂತ ಇದೊಂದು ಸರ್ವ ಶ್ರೇ
ಅಂತ ಅಂದು ಕೊಳ್ಳಬೇಕಿಲ್ಲ. ಚಿತ್ರ
ಭಾಷೆಯಲ್ಲಿ ಹೇಳುವುದಾದರೆ
'ಕಮರ್ಷಿಯಲ್' ಸಿನಿಮಾ. ತಮಾ
ತಮಾಷೆ ನಡುವೆ ದ್ವಂದ್ವಾರ್ಥದ
ನುಸುಳಿದೆ. ಕೊನೆಯಲ್ಲಿ ಮಂಡ
ಅನಿಸುವ ನಿರ್ಜನ ಕುರುಚಲು ಕಾಡಿ
ಒಂದು ಹತ್ತು ನಿಮಿಷಗಳ 'ಸಶಸ್ತ್ರ ಕ
ಕಥೆಯಲ್ಲಿ ಶ್ರೀಮಂತಿಕೆಯ ಮತ್ತು
ದರ್ಪದ ಸಮರ್ಥನೆ ಕೊಂಚ
ಹಾಕಿದೆ. ಕಾವೇರಿಯ
ಭಾಷಾಂಧತೆಯನ್ನು
ಮಾತೊಂದು ಬಂದು ಹಾ
ವಿಷ್ಣುವರ್ಧನ್‌ರ ಸಿ
ಬೆಂಕಿಯ ಜ್ವಾಲೆಯೇ ಸಿ
ಆಮೇಲೆ ಅದು ವಿಷ್ಣುವ
ಪ್ರೇಕ್ಷಕರ ಮೇಲೆ ಮುಗಿ
ನುಗ್ಗಿಬರುವ ಗ್ರಾಫಿಕ್ ಕೈಚ
ಇದೆ. ಆದರೆ ಇಲ್ಲಿ ಹುಲಿ ಮೇಲೆದ್ದು
ದೋಷಗಳನ್ನು ಹುಡುಕುತ್ತಾ
ಇನ್ನೂ ಸಿಗಬಹುದು. ಆದರೆ ಚಿತ್ರ
ಪ್ರಶ್ನೆ 'ಪ್ರೀತಿ'ಯ ಸೂಕ್ಷ್ಮತೆ ಮತ್ತು
ಉದಾರತೆಯನ್ನು ಚಿತ್ರಿಸಿಕೊಡುವ
ಅದು ಮುಖ್ಯ ಅನಿಸುತ್ತದೆ. ಸಾ
'ಮುಚ್ಚು ಲಾಂಗು'ಗಳ 'ಕೊಚ್ಚು- ಸಿನಿ
ಪ್ರೀತಿಯ ಹೆಸರಿನ ವಿಕೃತಿಗಳು ಯ
ಮನಸ್ಸನ್ನು ಕಲುಷಿತಗೊಳಿಸುತ್ತಿರುವ
ಸಿನಿಮಾದಲ್ಲಿ ಇರುವ ಒಳ್ಳೆಯದನ್ನು
ಹೋದರೆ, ಗುರುತಿಸದೇ ಹೋದರೆ
ಒಂಥರಾ 'ಶ್ರೇಷ್ಠತೆ ವ್ಯಸನ' ಆಗಬಹು
ಮೇಲ್ನೋಟಕ್ಕೆ ಸ್ವಲ್ಪ ಪುಂಡ-ಪೋ
ಹಾಗೆ ಬೀದಿ ಗೂಳಿಯ ಹಾಗೆ ಕಾಣಿ
ಅಕ್ಕಪಕ್ಕದವರನ್ನ ಕಿಚಾಯಿಸುತ್ತ ಅಂತ
ಹಠಹಿಡಿದಂತೆ ತತ್ವಬದ್ಧನಾಗಿ, ಶಿಸ್ತು
ನಡೆದುಕೊಳ್ಳುವ ನಾಯಕನ ವ್ಯಕ್ತಿತ್ವ ಭಿ
ಹೆಚ್ಚು ಕಡಿಮೆ ಮುಕ್ಕಾಲು ಸಿನಿಮಾ
'ಪಂಚಲಿಂಗೇಶ್ವರ' ಬಸ್‌ನೊಳಗೆ ನಡ
ಚಿತ್ರದ ನಿರ್ದೇಶಕ ಗುರುದೇ
ನಿರ್ಮಾಪಕ ಕೆ. ಮಂಜು. ನಾಯ
ನಾಯಕಿ ಮೇಘನಾ ರಾಜ್ ಮುಂ
ಚುರುಕಾಗಿ ಲವಲವಿಕೆಯಿಂದ ನ
ಸಿನಿಮಾ ಥಿಯೇಟರ್‌ಗೆ ಯುವ
ಸೆಳೆಯುತ್ತಿದೆ. ದೋಷ-ಕೊರತೆಗಳಿದ್ದ
ಸಂತೋಷ ಪಡಬಹುದು. ಅಲ್ವಾ ?

JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**